# ಯುಗರಶ್ಮಿ

- ಐಹಿಕ ಜೀವಿತೋದ್ದೇಶ ಹಾಗೂ ಅದನ್ನು ಗಳಿಸುವ ಮಾರ್ಗಗಳು
- ಪೋಪ್ ಬೆನೆಡಿಕ್ಟ್ XVI ಇಸ್ಲಾಮ್ ಧರ್ಮವನ್ನು ವಿಮರ್ಶಿಸಿ ನೀಡಿದ ಹೇಳಿಕೆಗೆ ಉತ್ತರ
- ನಮಾಝ್ ಮತ್ತು ಆರೋಗ್ಯ
- ಧರ್ಮದ ನಾಮದಲ್ಲಿ ರಕ್ತಪಾತ

ಮೇ 2007

ತ್ರೈಮಾಸಿಕ
ಬೆಲೆ ರೂ.5/-

"ಅಲ್ಲಾಹನು ಸತ್ಯವಿಶ್ವಾಸಿಗಳ ಮಿತ್ರನಾಗಿದ್ದಾನೆ. ಅವನು ಅವರನ್ನು ಎಲ್ಲಾ ಅಂಧಕಾರಗಳಿಂದ ಹೊರತಂದು ಪ್ರಕಾಶದೆಡೆಗೆ ನಡೆಸುತ್ತಾನೆ. ಅವಿಶ್ವಾಸಿಗಳಾದರೋ, ಅವರ ಮಿತ್ರರು ದುಷ್ಟಶಕ್ತಿಗಳಾಗಿವೆ. ಅವು ಅವರನ್ನು ಪ್ರಕಾಶದಿಂದ ಅಂಧಕಾರಗಳೆಡೆಗೆ ಕೊಂಡೊಯ್ಯುತ್ತವೆ. ಅವರೇ ನರಕವಾಸಿಗಳು. ಅವರು ಅಲ್ಲಿ ದೀರ್ಘಕಾಲ ನೆಲೆಸುವರು."

ಪವಿತ್ರ ಖುರ್‌ಆನ್ (2 : 258)

# ಯುಗರಶ್ಮಿ

## ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/- ವಾರ್ಷಿಕ ಚಂದಾ : ರೂ.20/- ಅಂಚೆ ಮೂಲಕ : ರೂ.30/-

**ವಿಷಯ ಸೂಚಿಕೆ** **ಪುಟ**


★ ಭಾರತದಲ್ಲಿ ಇಸ್ಲಾಂ ಧರ್ಮ ಪ್ರಚಾರಗೊಂಡದ್ದು ಹೇಗೆ? 1

★ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2

★ ಐಹಿಕ ಜೀವಿತೋದ್ದೇಶ ಹಾಗೂ ಅದನ್ನು ಗಳಿಸುವ ಮಾರ್ಗಗಳು 3

★ ಪೋಪ್ ಬೆನೆಡಿಕ್ಟ್ XVI ಇಸ್ಲಾಮ್ ಧರ್ಮವನ್ನು ವಿಮರ್ಶಿಸಿ ನೀಡಿದ ಹೇಳಿಕೆಗೆ ಉತ್ತರ 7

★ ನಮಾಝ್ ಮತ್ತು ಆರೋಗ್ಯ 14

★ ಇಸ್ಲಾಮಿನ ಪ್ರಾಥಮಿಕ ಪಾಠಗಳು 17

★ ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ..... 18

★ ಸಾಹಿಬ್‌ಝಾದ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ನಿಧನ 19

★ ಪುಸ್ತಕ ವಿಭಾಗ : ಧರ್ಮದ ನಾಮದಲ್ಲಿ ರಕ್ತಪಾತ 21


*"Love For All*

*Hatred For None"*

"ಎಲ್ಲರೊಡನೆಯೂ ಪ್ರೀತಿ

ಯಾರೊಡನೆಯೂ ದ್ವೇಷವಿಲ್ಲ"

"ಇನ್ಸಾನಿಯತ್ ಝಿಂದಾಬಾದ್"

"ಮಾನವೀಯತೆ ಚಿರಕಾಲ ಬಾಳಲಿ"

بسم الله الرحمن الرحيم

نحمده ونصلي على رسوله الكريم


# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 24 | ಮೇ 2007 | ಹಿಜ್‌ರತ್ 1386 | ಸಂಚಿಕೆ : 2 |
|---|---|---|---|---|


## ಭಾರತದಲ್ಲಿ ಇಸ್ಲಾಂ ಧರ್ಮ ಪ್ರಚಾರಗೊಂಡದ್ದು ಹೇಗೆ?

ಭಾರತದಲ್ಲಿ ಇಸ್ಲಾಂ ಧರ್ಮ ಪ್ರಚಾರಗೊಂಡದ್ದು ಖಡ್ಗದಿಂದ ಎಂಬ ನಂಬಿಕೆ ಸಂಪೂರ್ಣ ತಪ್ಪಾಗಿದೆ. ಖಂಡಿತವಾಗಿಯೂ ಅದು ಹಾಗೆ ಆಗಿರಲಿಲ್ಲ. ರಾಜರ ಅಧಿಕಾರದಿಂದ ಭಾರತದಲ್ಲಿ ಇಸ್ಲಾಂ ಧರ್ಮ ಪ್ರಚಾರಗೊಂಡಿಲ್ಲ. ಬದಲು, ರಾಜರು ಧರ್ಮದ ಕಾರ್ಯಗಳಲ್ಲಿ ಬಹಳ ಕಡಿಮೆ ಆಸಕ್ತಿಯುಳ್ಳವರಾಗಿದ್ದರು. ಭಾರತದಲ್ಲಿ ಇಸ್ಲಾಂ ಧರ್ಮ ಪ್ರಚಾರಗೊಂಡದ್ದು ಪ್ರಾರ್ಥನೆಯ ಫಲದಿಂದಾಗಿದೆ. ಹಲವು ಕಾಲಘಟ್ಟಗಳಲ್ಲಿ ಭಾರತದಲ್ಲಿ ಜೀವಿಸಿದ್ದ ಪರಿಶುದ್ಧರೂ ಭಕ್ತರೂ ಆದ ದಿವ್ಯಾತ್ಮರ ಪ್ರಾರ್ಥನೆ, ಸ್ವಭಾವ ಮತ್ತು ಶ್ರದ್ಧೆ ಇಸ್ಲಾಂ ಪ್ರಚಾರಗೊಳ್ಳಲು ಕಾರಣವಾಯಿತು. ರಾಜರಿಗೆ ಮನುಷ್ಯರ ಹೃದಯಗಳಲ್ಲಿ ಇಸ್ಲಾಮಿನೊಡನಿರುವ ಪ್ರೀತಿಯನ್ನು ಹುಟ್ಟಿಸಲು ಸಾಮರ್ಥ್ಯವಿಲ್ಲ. ಒಬ್ಬನು ತನ್ನ ಜೀವಿತದ ಮೂಲಕ ಇಸ್ಲಾಮಿನ ಒಂದು ಜೀವಂತ ಮಾದರಿಯನ್ನು ತೋರಿಸುವ ವರೆಗೆ ಆತನ ಬದುಕು ಎಂದಿಗೂ ಇತರರ ಮೇಲೆ ಏನೂ ಪ್ರಭಾವ ಬೀರಲಾರದು. ದಿವ್ಯಾತ್ಮರು ದೇವನಲ್ಲಿ ಪೂರ್ಣವಾಗಿ ಲೀನವಾಗಿ, ಪವಿತ್ರ ಖುರ್‌ಆನ್ ಮತ್ತು ಇಸ್ಲಾಮಿನ ಸಾಕ್ಷಾತ್ಕಾರವೂ ಹಝ್ರತ್ ಪೈಗಂಬರರ(ಸ) ಸ್ವಭಾವ ಗುಣಗಳ ಜೀವಂತ ಪ್ರತೀಕವಾಗಿಯೂ ಪರಿಣಮಿಸಿದ ಬಳಿಕ ಇಂತಹ ದಿವ್ಯಾತ್ಮರಿಗೆ ಸತ್‌ಸ್ವಭಾವಿಗಳಾದ ಸತ್ಯಾನ್ವೇಷಿಗಳನ್ನು ಆಕರ್ಷಿಸುವ ಒಂದು ಶಕ್ತಿ ನೀಡಿ ಅನುಗ್ರಹಿಸಲಾಗುತ್ತದೆ. ಈ ಪ್ರಕಾರ ಈ ದಿವ್ಯಾತ್ಮರಿಂದ ಆಕರ್ಷಿಸಲ್ಪಟ್ಟು ತೊಂಬತ್ತು ದಶಲಕ್ಷ ಜನರು ಇಸ್ಲಾಂ ಧರ್ಮ ಸ್ವೀಕರಿಸಿದ್ದಾರೆ. ಇಷ್ಟು ಅಲ್ಪಾವಧಿಯಲ್ಲಿ ಇಸ್ಲಾಂ ಧರ್ಮದ ಹಾಗೆ ಬೇರೊಂದು ಧರ್ಮ ಇಷ್ಟು ಹೆಚ್ಚು ಜನರಲ್ಲಿ ಪ್ರಚಾರಗೊಂಡಿಲ್ಲ. ಸಾತ್ವಿಕರೂ ಆತ್ಮಸಂಸ್ಕರಣ ಸಿದ್ಧಿಸಿದವರೂ ಆದ ಈ ದಿವ್ಯಾತ್ಮರು ಅತ್ಯಂತ ಮಹನೀಯವಾದ ಜೀವನ ಮಾದರಿಯನ್ನು ತೋರಿಸಿದ್ದರು. ಅವರ ಆಧ್ಯಾತ್ಮಿಕ ಜ್ಞಾನದ ಬಲದಿಂದ ಜನರು ಅವರೆಡೆಗೆ ಆಕರ್ಷಿಸಲ್ಪಡುತ್ತಿದ್ದರು. ಸಾಮಾನ್ಯ ಜನರ ವಿಮರ್ಶೆ ಮತ್ತು ನಿಂದೆಯನ್ನು ಈ ಪವಿತ್ರಾತ್ಮರು ಕೇಳದಿರಲಿಲ್ಲ. ಹಾಗೆಯೇ, ನಾನು ಸಹ ಈಗ ಜನರ ನಿಂದನೆಗೂ ಚುಚ್ಚು ಮಾತುಗಳಿಗೂ ಗುರಿಯಾಗಿದ್ದೇನಷ್ಟೆ. ಇವೆಲ್ಲಾ ಪೂರ್ವಕಾಲದ ಮಹಾತ್ಮರು ಅನುಭವಿಸಿದ್ದಾರೆ.

(ಮಲ್‌ಫೂಝಾತ್ - ಸಂಪುಟ 4, ಪುಟ 142-147)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಮೂರು ವಿಶೇಷ ಗುಣವುಳ್ಳವರು ಸತ್ಯವಿಶ್ವಾಸದ ಮಾಧುರ್ಯವನ್ನು ಆಸ್ವಾದಿಸುತ್ತಾರೆ. ಅಲ್ಲಾಹನು ಮತ್ತು ಅವನ ಸಂದೇಶವಾಹಕ ತನಗೆ ಇತರ ಎಲ್ಲರಿಗಿಂತಲೂ ಪ್ರೀತಿಗೆ ಪಾತ್ರರಾಗಿರುವುದು; ಅಲ್ಲಾಹನ ಪ್ರೀತಿಗಳಿಸಲಿಕ್ಕೋಸ್ಕರ ಸಹಜೀವಿಗಳನ್ನು ಪ್ರೀತಿಸುವುದು; ನಾಸ್ತಿಕತೆಗೆ ಮರಳುವುದನ್ನು ನರಕ ಕುಂಡಕ್ಕೆ ತಳ್ಳಲ್ಪಡುವುದನ್ನು ದ್ವೇಷಿಸುವಂತೆ ದ್ವೇಷಿಸುವುದು. (ಬುಖಾರಿ, ಮುಸ್ಲಿಂ)

- ಅಲ್ಲಾಹನನ್ನು ಪ್ರಭುವಾಗಿಯೂ ಇಸ್ಲಾಮನ್ನು ಧರ್ಮವಾಗಿಯೂ ಮುಹಮ್ಮದನ್ನು ಸಂದೇಶವಾಹಕನಾಗಿಯೂ ತೃಪ್ತಿಪಡುವವನು ಸತ್ಯವಿಶ್ವಾಸದ ರುಚಿಯನ್ನು ಆಸ್ವಾದಿಸುವನು. (ಮುಸ್ಲಿಂ)

- ನಾಲ್ಕು ಸ್ವಭಾವವುಳ್ಳವನು ಯಥಾರ್ಥ ಕಪಟ ವಿಶ್ವಾಸಿಯಾಗಿದ್ದಾನೆ. ಅವುಗಳ ಪೈಕಿ ಒಂದು ಸ್ವಭಾವವುಳ್ಳವನು ಅದನ್ನು ತ್ಯಜಿಸದ ಕಾಲದ ವರೆಗೆ ಅರ್ಧ ಕಪಟ ವಿಶ್ವಾಸಿಯಾಗಿದ್ದಾನೆ. ವಿಶ್ವಾಸ ವಂಚನೆ, ಸುಳ್ಳು ಹೇಳುವುದು, ವಾಗ್ದಾನ ಲಂಘನ, ಜಗಳಾಡುವಾಗ ಅಸಭ್ಯ ಹೇಳುವುದು ಇವು ಆ ನಾಲ್ಕು ಸ್ವಭಾವಗಳು. (ಬುಖಾರಿ, ಮುಸ್ಲಿಂ)

- ಯಾರಾದರೂ ಅಲ್ಲಾಹನ ಪ್ರೀತಿಯನ್ನು ಬಯಸಿ ಒಂದು ಮಸೀದಿ ನಿರ್ಮಿಸಿದರೆ ಅಲ್ಲಾಹನು ಆತನಿಗೆ ಸ್ವರ್ಗದಲ್ಲಿ ಒಂದು ಮನೆಯನ್ನು ನಿರ್ಮಿಸಿಕೊಡುವನು. (ಬುಖಾರಿ, ಮುಸ್ಲಿಂ)

- ನೀವು ಹಸಿದವನಿಗೆ ಆಹಾರ ಕೊಡಬೇಕು; ರೋಗಿಯನ್ನು ಸಂದರ್ಶಿಸಬೇಕು; ಬಂಧಿತನನ್ನು ಬಿಡುಗಡೆಗೊಳಿಸಬೇಕು. (ಬುಖಾರಿ)

- ಖುರ್‌ಆನನ್ನು ಕಲಿಯುವವನು ಮತ್ತು ಕಲಿಸುವವನು ನಿಮ್ಮ ಪೈಕಿ ಉತ್ತಮನು. (ಬುಖಾರಿ)

- ನೀವು ನಿಮ್ಮ ತಂದೆಯ ಮೇಲೆ ಆಣೆ ಹಾಕುವುದನ್ನು ಅಲ್ಲಾಹನು ವಿರೋಧಿಸಿದ್ದಾನೆ. ಆದ್ದರಿಂದ ಯಾರಾದರೂ ಆಣೆ ಹಾಕುವುದಾದರೆ ಅವನು ಅಲ್ಲಾಹನ ಮೇಲೆ ಆಣೆ ಹಾಕಲಿ ಅಥವಾ ಮೌನವಾಗಿರಲಿ. (ಬುಖಾರಿ, ಮುಸ್ಲಿಂ)

- ತಪ್ಪು ಮಾಡಲು ಆದೇಶಿಸುವ ಕಾಲದ ವರೆಗೆ ಇಷ್ಟಪಡುವ ವಿಚಾರದಲ್ಲೂ ಇಷ್ಟಪಡದ ವಿಚಾರದಲ್ಲೂ ನೇತಾರ ಹೇಳುವುದನ್ನು ಕೇಳುವುದು ಮತ್ತು ಅನುಸರಿಸುವುದು ಒಬ್ಬ ಮುಸ್ಲಿಮನ ಕರ್ತವ್ಯವಾಗಿದೆ. ಆದರೆ ತಪ್ಪು ಮಾಡಲು ಆಜ್ಞಾಪಿಸಲ್ಪಟ್ಟರೆ ಅವನು ಅದನ್ನು ಕೇಳಬಾರದು ಮತ್ತು ಅನುಸರಿಸಬಾರದು. (ಬುಖಾರಿ, ಮುಸ್ಲಿಂ)

- ಔಷಧಿ ಇಲ್ಲದ ಯಾವ ರೋಗವನ್ನೂ ಅಲ್ಲಾಹನು ಇಳಿಸಲಿಲ್ಲ. (ಬುಖಾರಿ)

- ವಾಹನದಲ್ಲಿರುವವನು ನಡೆಯುವವನಿಗೂ ನಡೆಯುವವನು ಕುಳಿತುಕೊಂಡಿರುವವನಿಗೂ ಚಿಕ್ಕ ಗುಂಪು ದೊಡ್ಡ ಗುಂಪಿಗೂ ಸಲಾಂ ಹೇಳಬೇಕಾಗಿದೆ. (ಬುಖಾರಿ, ಮುಸ್ಲಿಂ)

# ಐಹಿಕ ಜೀವಿತೋದ್ದೇಶ ಹಾಗೂ ಅದನ್ನು ಗಳಿಸುವ ಮಾರ್ಗಗಳು

* ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಈ ಲೋಕದಲ್ಲಿ ಮನುಷ್ಯನ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗವೇನೆಂಬುದು ಒಂದು ಪ್ರಶ್ನೆಯಾಗಿದೆ. ವಿಭಿನ್ನ ಸ್ವಭಾವಗಳ ಮನುಷ್ಯರು ಸಾಮಾನ್ಯವಾಗಿ ತಮ್ಮ ಅಜ್ಞತೆಯಿಂದ ಅಥವಾ ಸಂಕುಚಿತ ಮನಸ್ಥಿತಿಯ ಕಾರಣದಿಂದ ತಮ್ಮ ಜೀವಿತಕ್ಕೆ ವ್ಯತ್ಯಸ್ತ ರೀತಿಯ ಉದ್ದೇಶಗಳನ್ನು ನಿರ್ಣಯಿಸಿ ಕೇವಲ ಲೌಕಿಕಾಸಕ್ತಿಗಳನ್ನೂ ದೈಹಿಕೇಚ್ಛೆಗಳನ್ನೂ ತೃಪ್ತಿಪಡಿಸುವ ರೀತಿಯಲ್ಲಿ ಜೀವಿತವನ್ನು ಸವೆಸುತ್ತಾರೆ. ಆದರೆ ಸೃಷ್ಟಿಕರ್ತನಾದ ದೇವನು ತನ್ನ ಪವಿತ್ರ ವಚನದಲ್ಲಿ ಮನುಷ್ಯ ಜೀವನದ ಪರಮೋದ್ದೇಶವನ್ನು ಹೀಗೆ ವಿವರಿಸಿದ್ದಾನೆ:

وَمَا خَلَقْتُ الْجِنَّ وَالْإِنْسَ إِلَّا لِيَعْبُدُونِ (الذاريات: ٥٧)

ನನ್ನನ್ನು ಅರಿಯಲಿಕ್ಕೂ ಆರಾಧಿಸಲಿಕ್ಕೂ ಬೇಕಾಗಿ ನಾನು ಜಿನ್ನುಗಳನ್ನೂ ಇನ್ಸ್‌ಗಳನ್ನೂ ಸೃಷ್ಟಿಸಿರುವೆನು. (51:57)*

ಈ ಖುರ್‌ಆನ್ ವಾಕ್ಯವನ್ನನುಸರಿಸಿ ಮನುಷ್ಯ ಜೀವನದ ಗುರಿ ಸೃಷ್ಟಿಕರ್ತನಾದ ದೇವನನ್ನು ಅರಿತುಕೊಂಡು ಅವನನ್ನು ಆರಾಧಿಸಿ ಅವನಿಗಾಗಿ ಬದುಕುವುದಾಗಿದೆ. ತನ್ನ ಜೀವಿತಕ್ಕೆ ಸ್ವೇಚ್ಛೆಯಿಂದ ಒಂದು ಉದ್ದೇಶವನ್ನು ನಿಶ್ಚಯಿಸಲಿಕ್ಕೆ ಮನುಷ್ಯನಿಗೆ ಅಧಿಕಾರವಿಲ್ಲ. ಏಕೆಂದರೆ, ಅವನು ಈ ಲೋಕಕ್ಕೆ ತನ್ನ ಇಚ್ಛೆಯಿಂದ ಬರಲಿಲ್ಲ; ಹಾಗೆಯೇ ಸ್ವಇಚ್ಛೆಯಿಂದ ಇಲ್ಲಿಂದ ಹಿಂತಿರುಗುವುದೂ ಇಲ್ಲ. ಅವನು ಒಂದು ಸೃಷ್ಟಿ ಮಾತ್ರ. ಅವನನ್ನು ನಾಸ್ತಿಯಾದ ಅವಸ್ಥೆಯಿಂದ ಸೃಷ್ಟಿಸಿ ಅವನಿಗೆ ಇತರ ಜೀವಿಗಳಿಗಿಂತ ಉತ್ಕೃಷ್ಟ ಶಕ್ತಿಗಳನ್ನೂ ಬುದ್ಧಿಯನ್ನೂ ಪ್ರದಾನ ಮಾಡಿರುವ ಸೃಷ್ಟಿಕರ್ತನೇ ಅವನ ಜೀವನಕ್ಕೆ ಒಂದು ಉದ್ದೇಶವನ್ನು ನಿಶ್ಚಯಿಸಿರುವನು. ಈ ವಿಚಾರವನ್ನು ಅವನು ಗ್ರಹಿಸಿದರೂ ಇಲ್ಲವಾದರೂ ಅವನ ಜೀವಿತದ ಗುರಿ ಯಥಾರ್ಥದಲ್ಲಿ ದೇವನನ್ನು ಅರಿಯುವುದು, ಅವನಿಗೆ ಶರಣಾಗುವುದು ಮತ್ತು ಅವನಲ್ಲಿ ಲೀನವಾಗುವುದೇ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

إِنَّ الدِّينَ عِنْدَ اللَّهِ الْإِسْلَامُ (آل عمران: ٢٠)

ಖಂಡಿತವಾಗಿಯೂ, ದೇವನ ಕುರಿತು ಯಥಾರ್ಥ ಜ್ಞಾನ ಪ್ರದಾನ ಮಾಡುವ ಹಾಗೂ ದೇವೋಪಾಸನೆಗಾಗಿ ಶ್ರೇಷ್ಠ ಮಾರ್ಗ ತೋರಿಸಿಕೊಡುವ ದೈವಿಕ ಧರ್ಮವಾಗಿದೆ ಇಸ್ಲಾಂ. (3:20)

فِطْرَتَ اللَّهِ الَّتِي فَطَرَ النَّاسَ عَلَيْهَا لَا تَبْدِيلَ
لِخَلْقِ اللَّهِ ذَلِكَ الدِّينُ الْقَيِّمُ (الروم: ٣١)

ದೇವನು ಮನುಷ್ಯನನ್ನು ಯಾವ ಸ್ವಭಾವದಲ್ಲಿ ಸೃಷ್ಟಿಸಿರುವನೋ, ಆ ಶುದ್ಧ ಸ್ವಭಾವದಲ್ಲಿ ತದ್ರೂಪವಾಗಿ ನಿಕ್ಷಿಪ್ತವಾಗಿರುವ ಧರ್ಮ.... ಅದೆ ಆಗಿದೆ ಯಥಾರ್ಥ ಧರ್ಮ. (30:31)

ಎಂದರೆ, ಮನುಷ್ಯ ಸ್ವಭಾವ ಇಸ್ಲಾಮಿಕ ಆದರ್ಶಕ್ಕೆ ಅನುಗುಣವಾಗಿಯೇ ಇದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮನುಷ್ಯನು ತನ್ನ ಸಕಲ ಶಕ್ತಿಗಳನ್ನೂ ಬುದ್ಧಿಯನ್ನೂ ದೇವಾನುರಾಗದಲ್ಲೂ ದೇವಹಿತಾನುಸರಣೆಯಲ್ಲೂ ದೇವೋಪಾಸನೆಯಲ್ಲೂ ವ್ಯಯಿಸಬೇಕೆಂದು ಸೃಷ್ಟಿಕರ್ತನು ಉದ್ದೇಶಿಸಿದ್ದಾನೆ. ಆದ್ದರಿಂದ ಅವನು ಇಸ್ಲಾಮಿಕ ಆದರ್ಶಕ್ಕೆ ಅನುರೂಪವಾದ ಶಕ್ತಿ ಸಾಮರ್ಥ್ಯಗಳನ್ನು ಮನುಷ್ಯನಿಗೆ ನೀಡಿರುವನು.

ಈ ದೈವಿಕ ವಚನಗಳ ಸವಿಸ್ತಾರವಾದ ವ್ಯಾಖ್ಯಾನ ನೀಡಲು ಇಲ್ಲಿ ಅವಕಾಶವಿಲ್ಲ..... ಒಟ್ಟಾರೆ, ಮನುಷ್ಯನಿಗೆ ನೀಡಲಾದ ಆಂತರಿಕ ಮತ್ತು ಬಾಹ್ಯವಾದ ಅವಯವಗಳೂ ಪ್ರಜ್ಞಾಶಕ್ತಿಗಳೂ ಎಲ್ಲವೂ ಇಸ್ಲಾಮಿಕ ಆದರ್ಶಕ್ಕೆ ಅನುಯೋಜ್ಯವೆಂಬ ವಿಚಾರವನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ವಿಶದೀಕರಿಸಬಹುದು. ಮನುಷ್ಯನ ಆಂತರಿಕ ಹಾಗೂ ಬಾಹ್ಯ ಶಕ್ತಿಗಳ ಕುರಿತು ಪರಿಶೀಲಿಸುವುದಾದರೆ, ದೇವನನ್ನು ಅರಿಯಲಿಕ್ಕೂ ಆರಾಧಿಸಲಿಕ್ಕೂ ಪ್ರೀತಿಸಲಿಕ್ಕೂ ಅವೆಲ್ಲ ಪ್ರಯೋಜನಕಾರಿಯಾಗಿವೆಯೆಂದು ತಿಳಿಯಬಹುದು. ಆದ್ದರಿಂದಲೇ, ಮನುಷ್ಯನು ಐಹಿಕ ಜೀವಿತದಲ್ಲಿ ವಿವಿಧ ಕೆಲಸಕಾರ್ಯಗಳಲ್ಲೂ ಪರಿಶ್ರಮಗಳಲ್ಲೂ ನಿರತನಾಗಿ ಏನೆಲ್ಲಾ ಸುಖ ಸೌಕರ್ಯಗಳನ್ನು ಪಡೆದರೂ ದೇವನಿಂದ ಹೊರತು ಇನ್ನಾವುದರಲ್ಲೂ ಅವನಿಗೆ ಆ ಯಥಾರ್ಥ ಸುಖವನ್ನು ಅನುಭವಿಸಲಾಗುವುದಿಲ್ಲ. ಕೋಟ್ಯಾಧೀಶನೋ, ವರ್ತಕಾಗ್ರಣಿಯೋ, ಮಂತ್ರಿಪುಂಗವನೋ, ರಾಜಾಧಿರಾಜನೋ, ಮಹಾದಾರ್ಶನಿಕನೋ ಆಗಿದ್ದರೂ ಅವನು ಲೌಕಿಕ ಬಂಧಗಳಲ್ಲಿ ಸಿಲುಕಿ ಕೊನೆಗೆ ದುಃಖಾರ್ತನಾಗಿ ಜೀವಿತದಲ್ಲಿ ಜಿಗುಪ್ಸೆಗೊಳ್ಳುತ್ತಾನೆ. ಸ್ವೇಚ್ಛೆಗಳಿಗೆ ಬಲಿಯಾಗಿ ಪ್ರಪಂಚಾನುರಾಗದಲ್ಲಿ ಲೀನನಾಗುವ ನಿಮಿತ್ತ ಅವನ ಅಂತಃಕರಣ ಅವನನ್ನು ಶಪಿಸುತ್ತದೆ. ಐಹಿಕ ವ್ಯವಹಾರಗಳ ವಿಜಯ ಪ್ರಾಪ್ತಿಗಾಗಿ ಅವನು ಕೈಗೊಂಡ ದುರ್ನೀತಿ, ವಂಚನೆ, ಅಕ್ರಮ ಮೊದಲಾದ ದುಷ್ಕರ್ಮಗಳನ್ನು ಅವನ ಮನಃಸಾಕ್ಷಿ ಒಪ್ಪದೆ ಅವನನ್ನು ಹಳಿಯುತ್ತದೆ.

ಈ ವಿಷಯವನ್ನು ಬೇರೊಂದು ರೀತಿಯಲ್ಲಿ ಮನಗಾಣಬಹುದು. ಒಂದು ಜೀವಿಗೆ ಪರಮಾವಧಿ ಮಾಡಲು ಸಾಧ್ಯವಿರುವ ಕೆಲಸವನ್ನು ಅದು ಮಾಡಿ ಅದಕ್ಕಿಂತ ಮಿಗಿಲಾಗಿ ಏನೂ ಮಾಡಲು ಅಸಮರ್ಥವೆಂದಾದರೆ, ಆ ಅಂತಿಮ ಕಾರ್ಯವೇ ಅದರ ಜೀವಿತದ ಪರಮ ಪ್ರಯೋಜನವೆಂದು ತಿಳಿಯಬೇಕಾಗಿದೆ. ಉದಾಹರಣೆಗೆ, ಒಂದು ಎತ್ತಿನ ಪರಮ ಪ್ರಯೋಜನ ನೆಲವನ್ನು ಉಳುವುದು ಯಾ ನೀರೆತ್ತುವುದು ಯಾ ಭಾರವಹೆಯುವುದಾಗಿದೆ. ಇದಕ್ಕಿಂತ ಮಿಗಿಲಾದ ಶಕ್ತಿ ಅದಕ್ಕಿರುವುದಿಲ್ಲ. ಆದ್ದರಿಂದ ಎತ್ತಿನ ಜೀವಿತದ ಪರಮೋದ್ದೇಶ ಈ ಮೂರು ಆಗಿವೆ. ಆದರೆ ಮನುಷ್ಯನ ಶಕ್ತಿಗಳಲ್ಲಿ ಅತ್ಯುತ್ಕೃಷ್ಟ ಶಕ್ತಿ ಯಾವುದೆಂದು ಪರಿಶೋಧಿಸುವುದಾದರೆ, ಅದು ಸರ್ವೋನ್ನತನಾದ ಸೃಷ್ಟಿಕರ್ತನನ್ನು ಅರಸುವ ಪ್ರಜ್ಞಾಶಕ್ತಿಯೆಂದು ಕಾಣಬಹುದು. ಈ ಶಕ್ತಿ ಅವನನ್ನು ತನಗಾಗಿ ಏನನ್ನೂ ಬಾಕಿಯಿರಿಸದೆ ಸರ್ವವನ್ನೂ ದೇವನಿಗಾಗಿ ಅರ್ಪಿಸಿಕೊಂಡು ಸಂಪೂರ್ಣವಾಗಿ

*ಪವಿತ್ರ ಖುರ್‌ಆನಿನ ವಚನಗಳಿಗೆಲ್ಲ ಇಲ್ಲಿ ಭಾವಾರ್ಥ ನೀಡಲಾಗಿದೆ.

ದೇವಾನುರಾಗದಲ್ಲಿ ಲೀನವಾಗಲಿಕ್ಕೆ ಪ್ರಚೋದಿಸುತ್ತದೆ. ತಿನ್ನುವುದು, ಕುಡಿಯುವುದು, ನಿದ್ರಿಸುವುದು ಇತ್ಯಾದಿ ಶಾರೀರಿಕ ಚಟುವಟಿಕೆಗಳಲ್ಲಿ ಅವನು ಇತರ ಪ್ರಾಣಿಗಳಿಗೆ ತುಲ್ಯನು. ಕೆಲವು ಜೀವಿಗಳಾದರೋ ಚಾತುರ್ಯದಲ್ಲಿ ಅವನಿಗಿಂತ ಮಿಗಿಲೆನಿಸುತ್ತದೆ. ಜೇನು ನೊಣ ಹಲವು ವಿಧದ ಹೂಗಳ ರಸದಿಂದ ವಿಶಿಷ್ಟವಾದ ಜೇನನ್ನು ಉಂಟುಮಾಡುತ್ತದೆ. ಆದರೆ ಬುದ್ಧಿಜೀವಿಯಾದ ಮನುಷ್ಯನಿಗೆ ಇಂದಿನ ವರೆಗೆ ಇದನ್ನು ಸಾಧಿಸಲಾಗಲಿಲ್ಲ. ಹೀಗೆ ಮನುಷ್ಯನ ಪರಿಪೂರ್ಣತೆ ಇಂತಹ ವಿಷಯಗಳಲ್ಲಿ ಅಲ್ಲ; ದೇವೈಕ್ಯಪ್ರಾಪ್ತಿಯಲ್ಲಿ ಮಾತ್ರವೆಂದು ಕಾಣಬಹುದು. ಒಟ್ಟಿನಲ್ಲಿ, ಮನುಷ್ಯನ ಹೃದಯ ಕವಾಟವನ್ನು ದೇವನಿಗಾಗಿ ತೆರೆದಿರಿಸುವುದೇ ಅವನ ಜೀವಿತದ ಯಥಾರ್ಥ ಉದ್ದೇಶವಾಗಿದೆ.

## ಉದ್ದೇಶ ಸಿದ್ಧಿಯ ಮಾರ್ಗಗಳು

ಈ ಉದ್ದೇಶ ಸಾಧಿಸುವುದು ಹೇಗೆ, ಅದರ ಮಾರ್ಗಗಳು ಯಾವುವು ಎಂಬ ವಿಷಯದ ಕುರಿತು ಪ್ರತಿಪಾದಿಸೋಣ. ಈ ಗುರಿ ಸಾಧನೆಯ ಪ್ರಥಮ ಹಾಗೂ ಪ್ರಧಾನ ಮಾರ್ಗವೇನೆಂದರೆ, ದೇವನನ್ನು ಸರಿಯಾದ ರೀತಿಯಲ್ಲಿ ಅರಿಯುವುದು ಮತ್ತು ಸತ್ಯದೇವನಲ್ಲಿ ವಿಶ್ವಾಸವಿರಿಸುವುದು. ಯಾರಾದರೂ ಪ್ರಥಮ ಹೆಜ್ಜೆಯಲ್ಲೇ ತಪ್ಪಿಬಿದ್ದು ಪಕ್ಷಿಯನ್ನೋ ಮೃಗವನ್ನೋ ಮನುಷ್ಯ ಸಂತಾನವನ್ನೋ ದೈವವೆಂದು ನಂಬಿದ ಪಕ್ಷದಲ್ಲಿ ಅವನ ಎರಡನೆಯ ಹೆಜ್ಜೆ ಸರಿಯಾದ ಪಥದಲ್ಲಿ ಸಾಗುವುದೆಂದು ಭಾವಿಸುವುದು ಹೇಗೆ? ಸತ್ಯದೇವನು ಸರಿಯಾದ ರೀತಿಯಲ್ಲಿ ತನ್ನನ್ನು ಹುಡುಕುವವರಿಗೆ ಸಹಾಯ ಮಾಡುತ್ತಾನೆ. ಆದರೆ ಜೀವಚಲನವಿಲ್ಲದ ಮೃತದೈವ ಮೃತಪ್ರಾಯ ಸೇವಕರಿಗೆ ಹೇಗೆ ಸಹಾಯ ಮಾಡಬಲ್ಲುದು? ಈ ವಿಚಾರವನ್ನು ಪವಿತ್ರ ಖುರ್‌ಆನ್ ಸಾಮ್ಯ ರೂಪದಲ್ಲಿ ಹೀಗೆ ವಿವರಿಸುತ್ತದೆ:

لَهُ دَعْوَةُ الْحَقِّ وَالَّذِينَ يَدْعُونَ مِن دُونِهِ
لَا يَسْتَجِيبُونَ لَهُم بِشَيْءٍ إِلَّا كَبَاسِطِ كَفَّيْهِ
إِلَى الْمَاءِ لِيَبْلُغَ فَاهُ وَمَا هُوَ بِبَالِغِهِ وَمَا دُعَاءُ
الْكَافِرِينَ إِلَّا فِي ضَلَالٍ - (الرعد: ١٥)

ಸರ್ವಶಕ್ತನಾದ ಸತ್ಯದೇವನೇ ಯಥಾರ್ಥದಲ್ಲಿ ಪ್ರಾರ್ಥನೆಗರ್ಹನು. ಅವನ ಹೊರತು ಅನ್ಯರನ್ನು ಕರೆದು ಪ್ರಾರ್ಥಿಸುವವರಿಗೆ ಆ ಪ್ರಾರ್ಥಿತರು ಯಾವ ಉತ್ತರವನ್ನೂ ಕೊಡುವುದಿಲ್ಲ. ಅವರ ಸ್ಥಿತಿ, ತನ್ನ ಬಾಯಿಗೆ ನೀರು ಬಂದು ಬೀಳಲಿಕ್ಕಾಗಿ ಕೈಚಾಚಿ ಮೊರೆಯಿಡುವವನಂತಹದ್ದಾಗಿದೆ. ಆದರೆ ನೀರು ಅವನ ಬಾಯಿಯನ್ನು ಸೇರುವುದೋ? ಖಂಡಿತವಾಗಿಯೂ ಇಲ್ಲ. ಯಾರು ಸತ್ಯಸ್ವರೂಪನಾದ ದೇವನನ್ನು ಅರಿಯುವುದಿಲ್ಲವೋ ಅವರ ಪ್ರಾರ್ಥನೆಗಳೆಲ್ಲ ವ್ಯರ್ಥ. (13 : 15)

ಎರಡನೆಯ ಮಾರ್ಗವೇನೆಂದರೆ, ದೇವನ ಪರಿಪೂರ್ಣವಾದ ಸೌಂದರ್ಯ ಮಹಾತ್ಮೆಯ ಕುರಿತು ತಿಳಿದಿರುವುದು. ಸೌಂದರ್ಯವು ಸ್ವಾಭಾವಿಕವಾಗಿ ಹೃದಯವನ್ನು ಆಕರ್ಷಿಸಲಿಕ್ಕೂ ಪ್ರೀತಿಯನ್ನು ಅಂಕುರಿಸಲಿಕ್ಕೂ ಸಮರ್ಥವಾಗಿದೆ. ದೇವನ ಸೌಂದರ್ಯ ಮಹಿಮೆ ಅವನ ಏಕತ್ವದಲ್ಲೂ ಪ್ರಭಾವದಲ್ಲೂ ಪಾವನತೆಯಲ್ಲೂ ಇತರ ಉತ್ಕೃಷ್ಟ ಗುಣಗಳಲ್ಲೂ ಗೋಚರಿಸುತ್ತವೆ. ಈ ವಿಷಯದ ಕುರಿತು ಪವಿತ್ರ ಖುರ್‌ಆನ್ ನಮ್ಮ ಗಮನವನ್ನು ಹೀಗೆ ಸೆಳೆಯುತ್ತದೆ:

قُلْ هُوَ اللَّهُ أَحَدٌ - اللَّهُ الصَّمَدُ - لَمْ يَلِدْ وَلَمْ
يُولَدْ - وَلَمْ يَكُن لَّهُ كُفُوًا أَحَدٌ - (الاخلاص: ٢-٥)

ದೇವನು ಅಸ್ತಿತ್ವದಲ್ಲೂ ಗುಣದಲ್ಲೂ ಮಹಾತ್ಮೆಯಲ್ಲೂ ಏಕಮಾತ್ರನಾಗಿದ್ದಾನೆ. ಅವನ ಪಾಲುದಾರನಾಗಿ ಯಾರೂ ಇಲ್ಲ. ಸರ್ವವೂ ಅವನ ಸಹಾಯವನ್ನು ಆಶ್ರಯಿಸಿಕೊಂಡಿವೆ. ಪ್ರತಿಯೊಂದು ಅಣುವೂ ಅವನಿಂದ ಜೀವನವನ್ನು ಪಡೆಯುತ್ತದೆ. ಅವನು ಎಲ್ಲ ವಸ್ತುಗಳಿಗೂ ಆಶ್ರಯದಾತನು; ಅವನು ಯಾರನ್ನೂ ಆಶ್ರಯಿಸಿಕೊಂಡಿಲ್ಲ. ಅವನು ಯಾರ ಮಗನೂ ಅಲ್ಲ; ಯಾರ ಪಿತನೂ ಅಲ್ಲ. ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ. (ಅಧ್ಯಾಯ 112)

ಪವಿತ್ರ ಖುರ್‌ಆನ್ ಪದೇ ಪದೇ ಇಂತಹ ವಾಕ್ಯಗಳಿಂದ ದೇವನ ಮಹಿಮೆಯನ್ನೂ ಪ್ರಭಾವವನ್ನೂ ವರ್ಣಿಸಿಕೊಂಡು ಮನುಷ್ಯರ ಗಮನವನ್ನು ಸರ್ವಶಕ್ತನಾದ ಏಕದೇವನೆಡೆಗೆ ತಿರುಗಿಸಿ, ಅವನು ಮೃತ ಪ್ರಾಯನೋ, ದುರ್ಬಲನೋ, ನಿರ್ದಯನೋ, ಶಕ್ತಿಹೀನನೋ ಅಲ್ಲವೆಂದು ಬೋಧಿಸುತ್ತದೆ.

ಮೂರನೆಯ ಮಾರ್ಗವೇನೆಂದರೆ, ದೇವನ ಗುಣ ಮಹಾತ್ಮೆಗಳ ಮತ್ತು ಅವನ ಅನುಗ್ರಹಗಳ ಕುರಿತು ತಿಳಿಯುವುದು. ಸೌಂದರ್ಯ ಮತ್ತು ಸದ್ಗುಣ ಸ್ನೇಹವನ್ನು ಹುಟ್ಟಿಸುವ ಎರಡು ಪ್ರೇರಕಗಳಾಗಿವೆ. ದೇವನ ಅನುಗ್ರಹಕರ ಗುಣಮಹಾತ್ಮೆಗಳ ಒಂದು ಸಂಕ್ಷಿಪ್ತ ರೂಪವನ್ನು ಖುರ್‌ಆನಿನ ಪ್ರಥಮಾಧ್ಯಾಯವಾದ ಸೂರಃ ಫಾತಿಹದಲ್ಲಿ ಕಾಣಬಹುದು. ಅದು ಹೀಗಿದೆ:

اَلْحَمْدُ لِلَّهِ رَبِّ الْعٰلَمِيْنَ الرَّحْمٰنِ الرَّحِيْمِ مٰلِكِ يَوْمِ الدِّيْنِ

ಸಕಲ ಲೋಕಗಳ ಸೃಷ್ಟಿಕರ್ತ ಮತ್ತು ರಕ್ಷಕನಾದ ದೇವನಿಗೆ ಸರ್ವ ಸ್ತೋತ್ರಗಳು. ಅವನ ದಯೆ ಮತ್ತು ಅನುಗ್ರಹ ನಿಸ್ಸೀಮ. ಅವನು ಪ್ರತಿಫಲ ನೀಡಲ್ಪಡುವ ದಿನದ ಸರ್ವಾಧಿಪತಿಯು (1 : 2-4)

ನಾಸ್ತಿಯಾದ ಅವಸ್ಥೆಯಿಂದ ದೇವನು ಮನುಷ್ಯರನ್ನೂ ಇತರ ಜೀವಿಗಳನ್ನೂ ಸೃಷ್ಟಿಸಿ ಯಥೋಚಿತವಾಗಿ ಪರಿಪಾಲಿಸುತ್ತಲೂ ರಕ್ಷಿಸುತ್ತಲೂ ಇದ್ದಾನೆಂಬುದರಲ್ಲಿ ಅವನ ಅನುಗ್ರಹಪೂರ್ಣತೆ ನೆಲೆಗೊಳ್ಳುತ್ತದೆ. ಅವನ ಸೀಮಾತೀತ ಕರುಣಾನುಗ್ರಹಗಳು ಸೃಷ್ಟಿಗಳಲ್ಲಿ ಪ್ರಕಟಗೊಳ್ಳಬೇಕಾದುದು ಅವಶ್ಯ. ದೇವನ ಈ ಅನುಗ್ರಹಪೂರ್ಣತೆಯ ಕುರಿತು ಪವಿತ್ರ ಖುರ್‌ಆನ್ ಹಲವು ಬಾರಿ ನೆನಪು ಮಾಡಿಕೊಟ್ಟಿದೆ. ಒಂದೆಡೆಯಲ್ಲಿ ಅದು ಹೀಗೆನ್ನುತ್ತದೆ:

وَإِن تَعُدُّوا نِعْمَتَ اللَّهِ لَا تُحْصُوهَا - (ابراهيم: ٣٥)

ದೇವನ ಅನುಗ್ರಹಗಳನ್ನು ನೀವು ಲೆಕ್ಕಹಾಕಲು ಪ್ರಯತ್ನಿಸಿದರೆ ನಿಮಗೆ ಎಂದಿಗೂ ಅದು ಸಾಧ್ಯವಿಲ್ಲ. (14:35)

ಜೀವಿತೋದ್ದೇಶ ಸಿದ್ಧಿಗಾಗಿ ದೇವನು ನಿರ್ದೇಶಿಸಿದ ನಾಲ್ಕನೆಯ ಮಾರ್ಗ ಪ್ರಾರ್ಥನೆಯಾಗಿದೆ. ಅವನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

أُدْعُونِي أَسْتَجِبْ لَكُمْ - (المؤمن: ٦١)

ನೀವು ನನ್ನೊಡನೆ ಪ್ರಾರ್ಥಿಸಿರಿ, ನಾನು ನಿಮಗೆ ಉತ್ತರವೀಯುವೆನು. (40:61)

ಮನುಷ್ಯನಿಗೆ ದೇವನನ್ನು ಅವನ ಸಹಾಯವಿಲ್ಲದೆ ತನ್ನ ಸ್ವಂತ ಶಕ್ತಿ ಮೂಲಕ ಗಳಿಸಲು ಸಾಧ್ಯವಿಲ್ಲವಾದುದರಿಂದ ಪ್ರಾರ್ಥಿಸುತ್ತಾ ಇರಲಿಕ್ಕಾಗಿ ಪವಿತ್ರ ಖುರ್‌ಆನ್ ಪದೇ ಪದೇ ಬೋಧಿಸುತ್ತದೆ.

ಗುರಿ ಸಾಧನೆಯ ಐದನೆಯ ಮಾರ್ಗ 'ಮುಜಾಹಿದಃ' ಅಥವಾ 'ಧರ್ಮ ಕಾರ್ಯಕ್ಕಾಗಿ ಪ್ರಯತ್ನ'ವಾಗಿದೆ. ಎಂದರೆ, ತನ್ನ ಸಂಪಾದನೆಯನ್ನು ದೇವ ಮಾರ್ಗದಲ್ಲಿ ವ್ಯಯಿಸಿಕೊಂಡು ತನ್ನ ಶಕ್ತಿ ಸಾಮರ್ಥ್ಯಗಳನ್ನು ದೇವ ಪಥದಲ್ಲಿ ವಿನಿಯೋಗಿಸಿಕೊಂಡು, ಜೀವವನ್ನು ದೇವನಾಮದಲ್ಲಿ ಅರ್ಪಿಸಿಕೊಂಡು, ಬುದ್ಧಿಯನ್ನೂ ಜ್ಞಾನವನ್ನು ದೈವಿಕ ಧರ್ಮದ ಸೇವೆಗಾಗಿ ಉಪಯೋಗಿಸಿಕೊಂಡು ಆ ಸರ್ವೈಕ್ಯ ಕರ್ತನನ್ನು ಪಡೆಯಲು ಪ್ರಯತ್ನಿಸುವುದು.

ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

وَجَاهِدُوا بِأَمْوَالِكُمْ وَأَنفُسِكُمْ فِي سَبِيلِ اللَّهِ - (التوبة: ٤١)

ನೀವು ನಿಮ್ಮ ಧನದಿಂದಲೂ ಜೀವದಿಂದಲೂ ನಿಮ್ಮ ಸರ್ವವಿಧ ಶಕ್ತಿಗಳಿಂದಲೂ ದೇವಮಾರ್ಗದಲ್ಲಿ ವಿಶೇಷ ಪ್ರಯತ್ನ ಮಾಡಿರಿ. (9:41)

وَمِمَّا رَزَقْنَاهُمْ يُنفِقُونَ - (البقرة: ٤)

ನಾವು ಅವರಿಗೆ ನೀಡಿರುವವುಗಳನ್ನು, ಎಂದರೆ ಬುದ್ಧಿ ಶಕ್ತಿ, ಜ್ಞಾನ, ವಿವೇಚನೆ, ವಿದ್ಯೆ ಮುಂತಾದುವನ್ನೆಲ್ಲ ನಮ್ಮ ದಾರಿಯಲ್ಲಿ ವಿನಿಯೋಗಿಸುವವರು ವಿಜಯಿಗಳು. (2:4)

وَالَّذِينَ جَاهَدُوا فِينَا لَنَهْدِيَنَّهُمْ سُبُلَنَا - (العنكبوت: ٧٠)

ನಮ್ಮ ದಾರಿಯಲ್ಲಿ ಸರ್ವವಿಧದಲ್ಲೂ ಪರಿಶ್ರಮಿಸುವವರಿಗೆ ನಾವು ನಮ್ಮ ಮಾರ್ಗಗಳನ್ನು ತೋರಿಸಿಕೊಡುವೆವು. (29:70)

ಗುರಿ ಸಾಧನೆಯ ಆರನೆಯ ಮಾರ್ಗ ಸ್ಥಿರನಿಷ್ಠೆಯಾಗಿದೆ. ಎಂದರೆ, ಸತ್ಯ ಧರ್ಮಾಚರಣೆಯಲ್ಲಿ ದಣಿವು, ಆಯಾಸ ತೋರಿಸದೆ, ಯಾವುದೇ ಕಠಿಣ ಪರೀಕ್ಷೆಯಲ್ಲೂ ಭೀರುತ್ವ ತೋರ್ಪಡಿಸದೆ ದೃಢಚಿತ್ತದಿಂದ ವರ್ತಿಸಬೇಕಾಗಿದೆ. ಇದರ ಕುರಿತು ದೇವನು ಹೀಗೆ ಹೇಳುತ್ತಾನೆ:

إِنَّ الَّذِينَ قَالُوا رَبُّنَا اللَّهُ ثُمَّ اسْتَقَامُوا تَتَنَزَّلُ

عَلَيْهِمُ الْمَلَائِكَةُ أَلَّا تَخَافُوا وَلَا تَحْزَنُوا وَأَبْشِرُوا

بِالْجَنَّةِ الَّتِي كُنتُمْ تُوعَدُونَ - نَحْنُ أَوْلِيَاؤُكُمْ

فِي الْحَيَاةِ الدُّنْيَا وَفِي الْآخِرَةِ - (حم: ٣١-٣٢)

"ಸತ್ಯದೇವನಾದ ಅಲ್ಲಾಹನೇ ನಮ್ಮ ರಕ್ಷಕನು' ಎಂದು ಹೇಳಿ ಮಿಥ್ಯ ದೈವಗಳಿಂದೆಲ್ಲ ಮುಖ ತಿರುಗಿಸಿ ಸ್ಥಿರ ನಿಷ್ಠೆ ಪಾಲಿಸುವವರಿಗೆ, ಎಂದರೆ ಎಲ್ಲ ವಿಧ ಪರೀಕ್ಷಾ ಘಟ್ಟಗಳಲ್ಲೂ ಸಂಕಷ್ಟಾವಸ್ಥೆಗಳಲ್ಲೂ ದೃಢಚಿತ್ತದಿಂದ ವರ್ತಿಸುವವರಿಗೆ ದೇವದೂತರು ಇಳಿದು ಬಂದು ಹೇಳುವವರು: 'ನೀವು ಹೆದರಬೇಡಿರಿ, ಕೊರಗುವುದೂ ಬೇಡ. ಬದಲಿಗೆ, ನೀವು ಸಂತೋಷಭರಿತರಾಗಿರಿ. ನಿಮಗೆ ವಾಗ್ದಾನವಿತ್ತ ಸ್ವರ್ಗಸುಖಕ್ಕೆ ನೀವು ಹಕ್ಕುದಾರರಾಗಿರುವಿರಿ. ನಾವು ಇಹಲೋಕದ ಜೀವಿತದಲ್ಲೂ ಪರಲೋಕ ಜೀವಿತದಲ್ಲೂ ನಿಮ್ಮ ಮಿತ್ರರಾಗಿದ್ದೇವೆ.' (4:31, 32)

ಧರ್ಮಾನುಚರಣೆಯಲ್ಲಿ ಸ್ಥಿರನಿಷ್ಠೆ ದೇವನ ಪ್ರೀತಿಗೆ ಕಾರಣವಾಗುತ್ತದೆಂದು ಈ ವಚನಗಳು ನಮಗೆ ಬೋಧಿಸುತ್ತವೆ. ವಿಶ್ವಾಸ ಸ್ಥೈರ್ಯ ಪವಾಡಕ್ಕಿಂತ ಮಿಗಿಲೆಂಬುದು ವಾಸ್ತವಿಕ. ನಾನಾ ಕಡೆಗಳಿಂದ ಪ್ರತಿಕೂಲತೆಗಳೂ ಕ್ಲೇಶಗಳೂ ಸುತ್ತುವರಿದು, ದೇವಪಥದಲ್ಲಿ ಜೀವಕ್ಕೂ ಸಂಪತ್ತಿಗೂ ಹಾನಿಯುಂಟಾಗಿ ಅಸಮಾಧಾನಕರವಾದ ಪರಿಸ್ಥಿತಿಯಲ್ಲಿದ್ದುಕೊಂಡು, ಆಶ್ವಾಸದಾಯಕವಾದ ಆತ್ಮದರ್ಶನವೂ ಪ್ರಕಟನೆಯೂ ದೇವನ ಪರೀಕ್ಷೆಯೆಂಬಂತೆ ಸ್ಥಗಿತಗೊಂಡು, ಭಯಂಕರವಾದ ಪರಿಸ್ಥಿತಿಗಳನ್ನು ಅನುಭವಿಸುವ ಸಂದರ್ಭಗಳಲ್ಲೂ ಅಧೈರ್ಯವನ್ನು ತೋರಿಸದೆ, ಹೇಡಿಯಂತೆ ಹಿಮ್ಮೆಟ್ಟದೆ, ವಿಶ್ವಾಸದಲ್ಲಿ ಬಲಗುಂದದೆ, ಸತ್ಯ ನಿಷ್ಠೆ ಮತ್ತು ಸ್ಥಿರಚಿತ್ತತೆಗೆ ಕುಂದುಂಟಾಗದೆ, ಮಾನಹಾನಿಯುಂಟಾದರೂ ಅಸಂತುಷ್ಟಿ ತೋರಿಸದೆ, ಸ್ವಂತ ನಿಲುವಿಗಾಗಿ ಪರರ ಸಹಾಯವನ್ನು ನಿರೀಕ್ಷಿಸದೆ, ದೇವನ ಆಶ್ವಾಸ ವಚನಗಳನ್ನಾಗಲಿ ಆಶಿಸದೆ, ಬಲಹೀನತೆಯಲ್ಲೂ ನಿಸ್ಸಹಾಯಕತೆಯಲ್ಲೂ ಮನಃ ಚಾಂಚಲ್ಯವನ್ನು ತೋರಿಸದೆಯೂ ಅದೃಷ್ಟವನ್ನು ಹಳಿಯದೆಯೂ ಎದೆ ಎದೆ ಬಡಿದುಕೊಳ್ಳದೆಯೂ ದೈವಾಭೀಷ್ಟದಲ್ಲಿ ಸಂತೃಪ್ತನಾಗಿದ್ದುಕೊಂಡು ಆತ್ಮತ್ಯಾಗದ ಸನ್ನದ್ಧತೆಯಲ್ಲಿ ಮುಂದಕ್ಕೆ ಸಾಗುವುದೇ ಪರಿಪೂರ್ಣ ಹಾಗೂ ಪರಮ ಸ್ಥಿರಭಕ್ತಿಯಾಗಿದೆ. ಹೀಗೆ ಬಹುಮುಖ ಪರೀಕ್ಷಾ ಘಟ್ಟವನ್ನು ವಿಜಯಕರವಾಗಿ ಎದುರಿಸುವ ಸ್ಥಿರಭಕ್ತಿ ದೇವದರ್ಶನಕ್ಕೆ ಅರ್ಹವಾಗುತ್ತದೆ. ಈ ಮಹತ್ತಾದ ಸ್ಥಿರೋತ್ಸಾಹದ ಆಧ್ಯಾತ್ಮಿಕ ಸೌರಭ ಪ್ರವಾದಿಗಳ, ಸತ್ಯಸಂಧರಾದ ಮಹಾ ಪುರುಷರ ಮತ್ತು ಹುತಾತ್ಮರಾದ

ಮಹಾತ್ಮರ ಮಣ್ಣಿನಿಂದ ಈಗಲೂ ಸೂಸುತ್ತಿದೆ. ಈ ಸ್ಥಿರಭಕ್ತಿಯೇ ಸೂರಃ ಫಾತಿಹದ ಈ ಪ್ರಾರ್ಥನಾ ವಾಕ್ಯದಲ್ಲಿ ಸೂಚಿಸಲ್ಪಟ್ಟಿದೆ:

اهْدِنَا الصِّرَاطَ الْمُسْتَقِيمَ - صِرَاطَ الَّذِينَ أَنْعَمْتَ عَلَيْهِمْ (الفاتحة ٦-٧)

ಓ ದೇವಾ, ಯಾವ ದಾರಿಯನ್ನು ಅನುಸರಿಸುವುದರಿಂದ ನಿನ್ನ ಅನುಗ್ರಹ ಮತ್ತು ಪ್ರೀತಿ ಪ್ರಾಪ್ತವಾಗುವುದೋ, ಆ ಸ್ಥಿರತೆಯ ಮಾರ್ಗದಲ್ಲಿ ನೀನು ನಮ್ಮನ್ನು ನಡೆಸು. (1 : 6-7)

ಇದೇ ಸಂಗತಿಯನ್ನು ಪವಿತ್ರ ಖುರ್‌ಆನಿನ ಬೇರೊಂದು ಪ್ರಾರ್ಥನಾ ವಾಕ್ಯದಲ್ಲಿ ಸಹ ಹೀಗೆ ಸೂಚಿಸಲಾಗಿದೆ:

رَبَّنَا أَفْرِغْ عَلَيْنَا صَبْرًا وَتَوَفَّنَا مُسْلِمِينَ . (الأعراف ١٢٧)

ಓ ದೇವಾ, ಕಷ್ಟಾವಸ್ಥೆಯಲ್ಲಿ ಸಹನೆಯುಂಟಾಗಲಿಕ್ಕೆ ನೀನು ನಮಗೆ ಮನಃಶಾಂತಿಯನ್ನು ಪ್ರದಾನ ಮಾಡಿ, ನಮ್ಮ ಮರಣ ಇಸ್ಲಾಮಿನಲ್ಲಿ, ಎಂದರೆ ದೇವಹಿತಾನುಸರಣೆಯಲ್ಲಿ ಆಗಲಿಕ್ಕೆ ನಮ್ಮನ್ನು ಅನುಗ್ರಹಿಸು. (7 : 127)

ದುಃಖ ಮತ್ತು ಸಂಕಷ್ಟಕಾಲದಲ್ಲಿ ದೇವನು ತನ್ನ ಪ್ರೀತಿಯ ಭಕ್ತರ ಹೃದಯದಲ್ಲಿ ಒಂದು ತೇಜಸ್ಸನ್ನು ಸೃಷ್ಟಿಸುವನು. ಈ ದಿವ್ಯ ಪ್ರಕಾಶದಿಂದ ಪ್ರಶೋಭಿತರಾಗುವುದರಿಂದ ಅವರು ಸಕಲ ವಿಧ ಸಂಕಷ್ಟಗಳನ್ನು ಶಾಂತಚಿತ್ತದಿಂದ ಎದುರಿಸುತ್ತಾರೆ. ದೇವಮಾರ್ಗದಲ್ಲಿ ತಮ್ಮ ಪಾದಗಳಲ್ಲಿ ಸಿಲುಕುವ ಸಂಕಲೆಗಳನ್ನು ಅವರು ಧರ್ಮನಿಷ್ಠೆಯ ಮಾಧುರ್ಯದಿಂದ ಚುಂಬಿಸುತ್ತಾರೆ. ದೇವಭಕ್ತನಿಗೆ ಆಪತ್ತುಗಳೂ ಸಂಕಷ್ಟಗಳೂ ಬಂದೆರಗಿ ಮೃತ್ಯುವನ್ನು ಅಭಿಮುಖವಾಗಿ ಕಾಣುವಾಗ ಆತನು ತನ್ನ ಸಂರಕ್ಷಕನಾದ ದೇವನೊಡನೆ ದುಃಖ ವಿಮುಕ್ತಿಗಾಗಿ ವೃಥಾ ಕಲಹ ಆರಂಭಿಸುವುದಿಲ್ಲ. ಆ ಸಂದರ್ಭದಲ್ಲಿ ಸಂಕಷ್ಟ ನಿವಾರಣೆ ಮತ್ತು ದುಃಖ ವಿಮೋಚನೆಗಾಗಿ ಛಲವಿಡಿದು ಗೋಳಾಡುವುದು ದೇವೇಚ್ಛೆಯನ್ನು ವಿರೋಧಿಸುವುದಾಗಿದೆ. ಅದು ಪರಿಪೂರ್ಣವಾದ ದೇವಹಿತಾನುಸರಣೆಗೆ ವಿರುದ್ಧವಾಗಿದೆ. ಯಥಾರ್ಥ ದೇವ ಪ್ರೇಮಿ ಕಷ್ಟಾನುಭವ ಕಾಲದಲ್ಲಿ ತನ್ನ ಹೆಜ್ಜೆಯನ್ನು ಮುಂದಕ್ಕಲ್ಲದೆ ತುಸು ಮಾತ್ರವಾದರೂ ಹಿಂದಕ್ಕಿಡುವುದಿಲ್ಲ. ಈ ಘಟ್ಟದಲ್ಲಿ ಅವನು ಜೀವವನ್ನು ತೃಣ ಸಮಾನವಾಗಿ ಗಣಿಸಿ, ಜೀವದ ಹಂಗು ತೊರೆದು ದೇವೇಚ್ಛೆಗಾಗಿ ಸಂಪೂರ್ಣ ವಿಧೇಯನಾಗಿದ್ದುಕೊಂಡು ಅವನ ಪ್ರೀತಿಯನ್ನು ಮಾತ್ರ ಕಾಂಕ್ಷಿಸುತ್ತಾನೆ. ಇಂತಹ ಭಕ್ತನ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

وَمِنَ النَّاسِ مَنْ يَشْرِي نَفْسَهُ ابْتِغَاءَ مَرْضَاتِ
اللَّهِ وَاللَّهُ رَءُوفٌ بِالْعِبَادِ - (البقرة ٢٠٨)

ದೇವನ ಪ್ರಿಯ ದಾಸನು ತನ್ನ ಜೀವವನ್ನು ದೇವಪಥದಲ್ಲಿ ಅರ್ಪಿಸಿ ಅದರ ಬದಲಿಗೆ ದೇವಸಂತುಷ್ಟಿಯನ್ನು ಪಡೆಯುತ್ತಾನೆ. ಇಂತಹವರೊಡನೆ ದೇವನು ವಿಶಿಷ್ಟ ರೀತಿಯಲ್ಲಿ ದಯಾದಾಕ್ಷಿಣ್ಯವುಳ್ಳವನಾಗುತ್ತಾನೆ. (2 : 208)

ಸಂಕ್ಷಿಪ್ತವಾಗಿ, ದೇವನನ್ನು ಪಡೆಯಲಿಕ್ಕಾಗಿ ನಮ್ಮನ್ನು ಕೊಂಡೊಯ್ಯಲು ಶಕ್ತವಾದ ದೃಢಭಕ್ತಿಯ ಅಥವಾ ಸ್ಥಿರತೆಯ ಮೂಲತತ್ವ ಮೇಲೆ ವಿವರಿಸಲ್ಪಟ್ಟಿದೆ. ಗ್ರಹಿಸಲು ಮನಸ್ಸುಳ್ಳವರು ಗ್ರಹಿಸಿಕೊಳ್ಳಲಿ.

ಜೀವಿತೋದ್ದೇಶ ಸಿದ್ಧಿಯ ಏಳನೆಯ ಮಾರ್ಗ ಸುಕೃತರೊಡನೆ ಒಡನಾಟ ಮತ್ತು ಅವರ ಉತ್ತಮ ಆದರ್ಶಗಳ ಅನುಕರಣೆಯಾಗಿದೆ. ಪ್ರವಾದಿಗಳ ಆಗಮನದ ಪ್ರಧಾನ ಉದ್ದೇಶಗಳಲ್ಲಿ ಒಂದು ಇದೇ ಆಗಿದೆ. ಮನುಷ್ಯನು ಸಹಜವಾಗಿ ಮೇಲ್ಪಂಕ್ತಿಯನ್ನು ಅನುಕರಿಸುವ ಸ್ವಭಾವದಿಂದ ಕೂಡಿದವನಾಗಿದ್ದಾನೆ. ಪರಿಪೂರ್ಣ ಆದರ್ಶ ಅವನಲ್ಲಿ ಸತ್ಕರ್ಮದ ಆಸಕ್ತಿಯನ್ನೂ ಉತ್ಸಾಹವನ್ನೂ ವೃದ್ಧಿಗೊಳಿಸುತ್ತದೆ. ಉತ್ಕೃಷ್ಟ ಆದರ್ಶವನ್ನು ಅನುಕರಿಸದವನು ಆಲಸಿಗನಾಗಿ, ಕ್ರಮೇಣ ಸತ್ಕರ್ಮ ಪಥದಿಂದ ದೂರ ಸರಿಯುತ್ತಾನೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ಹೀಗೆ ಬೋಧಿಸುತ್ತದೆ:

كُونُوا مَعَ الصَّادِقِينَ - (توبة ١١٩)

ನೀವು ಸಾತ್ವಿಕರ ಸಹವಾಸ ಬೆಳೆಸಿರಿ. (9 : 119)

صِرَاطَ الَّذِينَ أَنْعَمْتَ عَلَيْهِمْ - (الفاتحة ٧)

ನಿಮಗೆ ಮುಂಚೆ ಅನುಗ್ರಹ ಸಿದ್ಧಿಸಿದವರ ಮಾರ್ಗವನ್ನು ಅನುಸರಿಸಿರಿ. (1 : 7)

ಜೀವಿತೋದ್ದೇಶ ಸಿದ್ಧಿಯ ಎಂಟನೆಯ ಮಾರ್ಗ ದೇವನಿಂದ ದಿವ್ಯ ದರ್ಶನ ಹಾಗೂ ದಿವ್ಯವಾಣಿಯನ್ನು ಪಡೆಯುವುದು ಮತ್ತು ಪಾವನವಾದ ಸ್ವಪ್ನಗಳನ್ನು ದರ್ಶಿಸುವುದಾಗಿದೆ. ದೇವನೆಡೆಗೆ ಸಾಗುವ ಸಂಚಾರ ಪಥವು ಕ್ಲೇಶಕರವೂ ದುಃಖಪೂರ್ಣವೂ ಆದ ಗೂಢ ಮಾರ್ಗವಾದುದರಿಂದ ಆಧ್ಯಾತ್ಮಿಕ ದಾರಿಹೋಕನು ಈ ಸತ್ಪಥದಿಂದ ವ್ಯತಿಕ್ರಮಿಸಲಿಕ್ಕೆ ಯಾ ಗುರಿಸಾಧನೆಯ ಕುರಿತು ಹತಾಶನಾಗಿ ಸಂಚಾರವನ್ನು ಮುಂದುವರಿಸಿಕೊಂಡು ಹೋಗದಿರಲಿಕ್ಕೆ ಅವಕಾಶವಿದೆ. ಆದ್ದರಿಂದ ಪರಮ ದಯಾವಂತನಾದ ದೇವನು ಆಧ್ಯಾತ್ಮಿಕ ಪಥದಲ್ಲಿ ಸಂಚರಿಸುವ ತನ್ನ ಭಕ್ತನನ್ನು ಸಾಂತ್ವನಗೊಳಿಸಿ, ಅವನಿಗೆ ಆಶ್ವಾಸನೆಯನ್ನಿತ್ತು, ಹಿಡಿದ ಹಾದಿಯಲ್ಲಿ ಮುಂದಕ್ಕೆ ಸಾಗಲು ಪ್ರೋತ್ಸಾಹ ಕೊಟ್ಟು ಆತನ ಆಸಕ್ತಿಯನ್ನು ವೃದ್ಧಿಗೊಳಿಸುವನು. ದೇವನ ಅಲಂಘ್ಯವಾದ ಈ ನಿಯಮವು ಆಧ್ಯಾತ್ಮಿಕ ಮಾರ್ಗದಲ್ಲಿ ಸಂಚರಿಸುವ ಭಕ್ತರಲ್ಲಿ ಗೋಚರಿಸುತ್ತದೆ. ಎಂದರೆ, ದೇವನು ದಿವ್ಯವಚನಗಳಿಂದಲೂ ಪ್ರಕಟನೆಗಳಿಂದಲೂ ತನ್ನ ಸಹಾಯದ ಕುರಿತು ಅವರಿಗೆ ಮನದಟ್ಟು ಮಾಡಿಕೊಡುವನು. ಹೀಗೆ, ದೈವಿಕ ಆಶ್ವಾಸನ ವಚನಗಳಿಂದ ದೃಢಚಿತ್ತರಾಗಿ ಅವರು ಪೂರ್ವಾಧಿಕ ಓಜಸ್ಸಿನಿಂದ ಸಂಚಾರವನ್ನು ಮುಂದುವರಿಸುತ್ತಾರೆ. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

لَهُمُ الْبُشْرَىٰ فِي الْحَيَاةِ الدُّنْيَا وَفِي الْآخِرَةِ - (يونس ٦٥)

ಅವರಿಗೆ ಐಹಿಕ ಜೀವಿತದಲ್ಲೂ ಪಾರತ್ರಿಕ ಜೀವಿತದಲ್ಲೂ ಶುಭವಾರ್ತೆಗಳಿವೆ. (10 : 65)

ಗುರಿ ಸಾಧನೆಗೆ ಸಹಾಯಕವಾದ ಬೇರೆಯೂ ಕೆಲವು ಮಾರ್ಗಗಳು ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಆದರೆ ವಿಸ್ತಾರ ಭಯ ಕಾರಣದಿಂದ ಅವುಗಳ ಕುರಿತು ಇಲ್ಲಿ ಪ್ರತಿಪಾದಿಸಲು ಸಾಧ್ಯವಿಲ್ಲ.

# ಪೋಪ್ ಬೆನೆಡಿಕ್ಟ್ XVI
# ಇಸ್ಲಾಮ್ ಧರ್ಮವನ್ನು ವಿಮರ್ಶಿಸಿ ನೀಡಿದ ಹೇಳಿಕೆಗೆ ಉತ್ತರ

ಪೋಪ್‌ರವರು ಜರ್ಮನಿಯ ರೆಜೆನ್ಸ್‌ಬರ್ಗ್ ಯುನಿವರ್ಸಿಟಿಯಲ್ಲಿ "ಧಾರ್ಮಿಕ ವಿಶ್ವಾಸ ಮತ್ತು ವೈಚಾರಿಕತೆ' ಬಗ್ಗೆ ಕೆಲ ಸಮಯದ ಹಿಂದೆ ಭಾಷಣ ನೀಡಿದಾಗ ರೂಢಿಯಂತೆ ಯುನಿವರ್ಸಿಟಿಯಲ್ಲಿ ತನ್ನ ವಿದ್ಯಾಭ್ಯಾಸದ ಕಾಲವನ್ನು ನೆನಪಿಸಬೇಕಾಗಿದ್ದರೂ ದುರದೃಷ್ಟಕರವಾಗಿ ಅವರ ಭಾಷಣವು ಇಸ್ಲಾಮ್ ಧರ್ಮದ ಕುರಿತು ಉದ್ಧಟತನದ ವಿಮರ್ಶೆಯನ್ನು ಒಳಗೊಂಡಿತು.

ಪೋಪ್‌ರವರು ತನ್ನ ಭಾಷಣದಲ್ಲಿ ಹದಿನಾಲ್ಕನೆಯ ಶತಮಾನದಲ್ಲಿ "ಪಾಂಡಿತ್ಯಶಾಲಿ ಬೈಝಾಂಟೈನ್ ಚಕ್ರವರ್ತಿ ಮ್ಯಾನುವೇಲ್II ಪಾಲಿಯೋಲೋಗಸ್ ಮತ್ತು ಪರ್ಶಿಯಾದ ಒಬ್ಬ ಮುಸ್ಲಿಮ್ ವಿದ್ವಾಂಸರ ಮಧ್ಯೆ ಕ್ರೈಸ್ತ ಧರ್ಮ ಮತ್ತು ಇಸ್ಲಾಮ್ ಬಗ್ಗೆ ನಡೆದ ವಾದ ವಿವಾದದ" ಭಾಷಾಂತರವನ್ನು ಉಲ್ಲೇಖಿಸಿದರು. ಆ ವಾದ ವಿವಾದದಲ್ಲಿ ಒಂದು ಕಡೆ ಚಕ್ರವರ್ತಿ ಒರಟಾಗಿ ಹೇಳಿದ ಮಾತುಗಳನ್ನು ಅವರು ಪ್ರಸ್ತಾಪಿಸಿದರು: ಚಕ್ರವರ್ತಿ ಹೀಗೆ ಹೇಳಿದ್ದನು:- "ಮುಹಮ್ಮದ್ ಹೊಸದಾಗಿ ತಂದುದೇನೆಂದು ನನಗೆ ತೋರಿಸಿಕೊಡಿರಿ. ಕೆಟ್ಟ ಮತ್ತು ಅಮಾನವೀಯ ಉಪದೇಶಗಳನ್ನು ಮಾತ್ರ ಅವರು ಮಾಡಿದರು. ಖಡ್ಗದ ಮೂಲಕ ತಾನು ಉಪದೇಶಿಸಿದ ಧರ್ಮವನ್ನು ಪ್ರಚಾರ ಮಾಡಬೇಕೆಂಬ ಅವರ ಆಜ್ಞೆಯು ಇದಕ್ಕೆ ಒಂದು ಉದಾಹರಣೆಯಾಗಿದೆ..... ಒಬ್ಬನನ್ನು ಸತ್ಯವಿಶ್ವಾಸಕ್ಕೆ ಕೊಂಡೊಯ್ಯಲು ಬಯಸುವವನಿಗೆ ಚೆನ್ನಾಗಿ ತರ್ಕಬದ್ಧವಾಗಿ ಮಾತನಾಡುವ ಸಾಮರ್ಥ್ಯವಿರಬೇಕು ಮತ್ತು ಹಿಂಸಾಚಾರ ಹಾಗೂ ಬೆದರಿಕೆಯನ್ನು ಆತನು ಬಳಸಬಾರದು."

ಪೋಪ್ ಹೇಳುತ್ತಾರೆ: "ಚಕ್ರವರ್ತಿಯ ಈ ಟಿಪ್ಪಣಿಯು ನನ್ನ ಭಾಷಣದ ವಿಷಯದ ಬಗ್ಗೆ ಚಿಂತಿಸಿ ಅದನ್ನು ಆರಂಭಿಸುವ ಒಂದು ಅಂಶವಾಯಿತು. ಬಲಾತ್ಕಾರದ ಮತಾಂತರದ ಬಗ್ಗೆ ಚಕ್ರವರ್ತಿಯ ನಿರ್ಣಾಯಕ ಹೇಳಿಕೆಯ ನಿಷ್ಕರ್ಷೆಯು ಇದಾಗಿದೆ. ವೈಚಾರಿಕತೆಗೆ ಅನುಯೋಜ್ಯವಾಗದ ರೀತಿಯಲ್ಲಿ ವರ್ತಿಸುವುದು ದೇವನ ಪ್ರಕೃತಿಗೆ ವಿರುದ್ಧವಾಗಿದೆ....."

ಅನಂತರ ಪೋಪ್‌ರವರು ಮೇಲೆ ವಿವರಿಸಿದ ವಾದ ವಿವಾದವನ್ನು ಉಲ್ಲೇಖಿಸಿದ ಗ್ರಂಥದ ಸಂಪಾದಕನಾದ ಪ್ರೊಫೆಸರ್ ಥಿಯೋಡೋರ್ ಖೌರಿ ಹೇಳಿದ ಈ ಮಾತನ್ನು ಉದ್ಧರಿಸುತ್ತಾರೆ:- "ಆದರೆ ಇಸ್ಲಾಮಿನ ಉಪದೇಶಗಳ ಪ್ರಕಾರ ದೇವನು ಪರಿಪೂರ್ಣವಾಗಿ ಅತೀಂದ್ರಿಯ ಸ್ಥಾನದಲ್ಲಿ ಇದ್ದಾನೆ. ಅವನ ಇಚ್ಛೆಯು ನಮ್ಮ ವಿಷಯ ವಿಭಜನೆಗಳಿಗೆ ಬದ್ಧವಾಗಿರುವುದಿಲ್ಲ. ವೈಚಾರಿಕತೆಗೂ ಅವನು ಬದ್ಧನಲ್ಲ."

ಮುಸ್ಲಿಮರ ಭಾವನೆಗಳಿಗೆ ನೋವನ್ನುಂಟು ಮಾಡಿದುದರ ಬಗ್ಗೆ ಕ್ಷಮೆಯನ್ನು ವಿನೀತನಾಗಿ ಅಪೇಕ್ಷಿಸಿದರೂ ಪೋಪ್ ತನ್ನ ಹೇಳಿಕೆಯನ್ನು ಹಿಂದಕ್ಕೆ ಪಡೆಯಲಿಲ್ಲ. ಅದಕ್ಕೆ ಬದಲಾಗಿ ವ್ಯಾಟಿಕನ್ ಸೆಕ್ರೆಟರಿ ಆಫ್ ಸ್ಟೇಟ್ (ಪೋಪ್ ಆಡಳಿತೆಯ ವ್ಯಾಟಿಕನ್ ಪ್ರದೇಶದ ವಿದೇಶ ಕಾರ್ಯ ಮಂತ್ರಿ) ಒಂದು ಹೇಳಿಕೆಯನ್ನು ಹೊರಡಿಸಿದರು. ಇಸ್ಲಾಮಿಕ ಜಗತ್ತು ಪೋಪ್‌ರವರ ಹೇಳಿಕೆಯನ್ನು ದುರ್ವ್ಯಾಖ್ಯಾನಗೊಳಿಸಿದುದು ಖೇದಕರವಾಗಿದೆ ಎಂದು ಆ ಹೇಳಿಕೆಯಲ್ಲಿ ಸೂಚಿಸಲಾಯಿತು. ಪೋಪ್‌ರವರು ಏನನ್ನು ಹೇಳ ಬಯಸಿದ್ದರೆಂಬುದನ್ನು ಊಹಿಸದೆ ಅವರು ಏನು ಹೇಳಿದರೆಂಬುದನ್ನು ನೋಡುವುದಾದರೆ ಅವರ ಹೇಳಿಕೆಯಲ್ಲಿ ಈ ಕೆಳಗಿನ ವಿಷಯವು ಅಡಕವಾಗಿದೆ ಎಂಬುದನ್ನು ನಿರಾಕರಿಸಲಾಗದು. ಬೈಝಾಂಟೈನ್ ಚಕ್ರವರ್ತಿ ಇಸ್ಲಾಮಿನ ವಿರುದ್ಧ ಮಾಡಿದ ಎರಡು ಆರೋಪಗಳನ್ನು ಪೋಪ್‌ರವರು ಅವಲಂಬಿಸಿ ಮಾತನಾಡಿರುವರು. ಇಸ್ಲಾಮಿನ ಪ್ರವಾದಿ ಮುಹಮ್ಮದ್‌ರವರು(ಸ) ತನ್ನ ಸಂದೇಶವನ್ನು ಹಿಂಸೆ ಮತ್ತು ಅಮಾನವೀಯ ವರ್ತನೆಯ ಮೂಲಕ ಪ್ರಚಾರಗೊಳಿಸಿದರು ಎಂಬುದು ಪ್ರಥಮ ಆರೋಪವಾಗಿದೆ. ಇಸ್ಲಾಮಿನ ದೇವನು ವೈಚಾರಿಕತೆಗೆ ಬದ್ಧನಲ್ಲ ಮತ್ತು ಅದರ ಫಲಸ್ವರೂಪವಾಗಿ ಮುಸ್ಲಿಮರು ಸಹ ವೈಚಾರಿಕತೆಗೆ ಬದ್ಧರಲ್ಲ ಎಂಬುದು ದ್ವಿತೀಯ ಆರೋಪವಾಗಿದೆ.

ಈ ಎರಡು ಆರೋಪಗಳನ್ನೂ ನಾವು ಖಂಡಿಸುತ್ತೇವೆ.

## ಪ್ರಥಮ ಆರೋಪದ ಖಂಡನೆ

ನಿಷ್ಕಳಂಕ ಜನರನ್ನು, ಅವರ ಧಾರ್ಮಿಕ ವಿಶ್ವಾಸಗಳು ಇಸ್ಲಾಮ್ ಧರ್ಮದ ವಿಶ್ವಾಸಗಳಿಗಿಂತ ಭಿನ್ನವಾದ ಕಾರಣ ಕೊಲ್ಲುವುದನ್ನು ಪವಿತ್ರ ಖುರ್‌ಆನಿನ ಯಾವುದೇ ವಚನ ಅನುಮತಿಸಿಲ್ಲ. ತದ್ವಿರುದ್ಧವಾಗಿ, ಪವಿತ್ರ ಖುರ್‌ಆನ್ ನಿಸ್ಸಂದಿಗ್ಧವಾಗಿ ಹೀಗೆ ಘೋಷಿಸುತ್ತದೆ:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ." (2 : 257)

ಪವಿತ್ರ ಖುರ್‌ಆನಿನ ಈ ವಚನದ ಕುರಿತು ಪೋಪ್ ಹೀಗೆ ವಿಮರ್ಶಿಸುತ್ತಾರೆ: "ಪರಿಣಿತರ ಅಭಿಪ್ರಾಯ, ಈ ವಚನ ಒಳಗೊಂಡಿರುವ ಖುರ್‌ಆನಿನ ಅಧ್ಯಾಯವು ಮುಹಮ್ಮದ್ ಅಧಿಕಾರರಹಿತರೂ ಬೆದರಿಕೆಗೆ ಪಾತ್ರರೂ ಆಗಿದ್ದ ಪ್ರವಾದಿತ್ವದ ಮೊದಲಿನ ಕಾಲಕ್ಕೆ ಸಂಬಂಧಿಸಿದುದಾಗಿದೆ."

ವಾಸ್ತವಿಕ ಸಂಗತಿಯೇನೆಂದರೆ, ಪ್ರವಾದಿಯವರು(ಸ) ಮದೀನದ ಆಡಳಿತಾಧಿಕಾರಿಯಾಗಿದ್ದಾಗ ಈ ವಚನವು ಅವತೀರ್ಣಗೊಂಡಿತು. ಇಸ್ಲಾಮ್ ಧರ್ಮದಲ್ಲಿ ಬಲಾತ್ಕಾರವನ್ನು ದೇವನು ಮನ್ನಿಸುವುದಿಲ್ಲವೆಂದು ಈ ವಚನ ಒತ್ತಿ ಹೇಳುತ್ತದೆ. ಈ ವಚನವು ಒಂದು ಸ್ಪಷ್ಟ ಆಜ್ಞೆಯಾಗಿದ್ದು ಇದಕ್ಕೆ ವಿರುದ್ಧವಾಗಿ ಸಾಬೀತುಗೊಳಿಸಲು ಏನೂ ಇರುವುದಿಲ್ಲ. ಈ ವಚನದ

ಮೊದಲು ಇರುವ ವಚನವನ್ನು ಮತ್ತು ಈ ವಚನದ ಮುಂದಿನ ಭಾಗವನ್ನು ಒಟ್ಟಿಗೆ ಪರಿಶೀಲಿಸುವುದಾದರೆ ಈ ವಚನವು ಬಲಾತ್ಕಾರದ ವಿರುದ್ಧ ವೈಚಾರಿಕವಾದ ಒಂದು ವಾದದ ಭಾಗವಾಗಿ ಪರಿಣಮಿಸುತ್ತದೆ. ಈ ವಚನದ ಮೊದಲು ಪವಿತ್ರ ಖುರ್‌ಆನ್‌ನಲ್ಲಿರುವ ವಚನ ಹೀಗಿದೆ:

**"ಅಲ್ಲಾಹ್ - ಅವನ ಹೊರತು ಬೇರೆ ಆರಾಧ್ಯನಿಲ್ಲ. ಅವನು ಸದಾ ಜೀವಂತನೂ ಸ್ವತಃ ನೆಲೆ ನಿಂತವನೂ (ಎಲ್ಲವನ್ನೂ) ನೆಲೆ ನಿಲ್ಲಿಸುವವನೂ ಆಗಿದ್ದಾನೆ. ತೂಕಡಿಕೆಯಾಗಲಿ ನಿದ್ರೆಯಾಗಲಿ ಅವನಿಗಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿವೆ. ಅವನ ಅನುಮತಿಯಿಲ್ಲದೆ ಅವನ ಸನ್ನಿಧಿಯಲ್ಲಿ ಶಿಫಾರಸು ಮಾಡುವವರು ಯಾರಿದ್ದಾರೆ? ಅವರ ಮುಂದೆ ಮತ್ತು ಹಿಂದೆ ಇರುವ ಎಲ್ಲವನ್ನೂ ಅವನು ಬಲ್ಲನು. ಅವನು ಇಚ್ಛಿಸುವುದರ ಹೊರತು, ಅವನ ಜ್ಞಾನದಿಂದ ಏನನ್ನೂ ಅವರು ಗಳಿಸುವುದಿಲ್ಲ. ಅವನ ಸಿಂಹಾಸನ ಆಕಾಶಗಳಲ್ಲೂ ಭೂಮಿಯಲ್ಲೂ ವ್ಯಾಪಿಸಿಕೊಂಡಿದೆ. ಅವುಗಳ ಸಂರಕ್ಷಣೆ ಅವನನ್ನು ಆಯಾಸಗೊಳಿಸುವುದಿಲ್ಲ. ಅವನು ಅತ್ಯುನ್ನತನೂ ಮಹಾಮಹಿಮನೂ ಆಗಿದ್ದಾನೆ." (2 : 256)**

ಅರಬಿ ವಿದ್ವಾಂಸರು ಈ ವಚನವನ್ನು "ಆಯತುಲ್ ಕುರ್‌ಸೀ" "ದೈವಿಕ ಶಕ್ತಿಯ ವಚನ" ಎಂದು ಕರೆದಿದ್ದಾರೆ. ಮನುಷ್ಯನಿಗೆ ಸಂರಕ್ಷಣೆ ನೀಡುವ ಏಕಮಾತ್ರ ಶಕ್ತಿ ದೇವನು ಮಾತ್ರವಾಗಿದ್ದಾನೆ ಎಂದು ಈ ವಚನದಲ್ಲಿ ಪ್ರತಿಪಾದಿಸಲಾಗಿದೆ. ಮನುಷ್ಯನ ಜ್ಞಾನವು ಸೀಮಿತವೂ ಅಪರಿಪೂರ್ಣವೂ ಶಕ್ತಿ ಹೀನವೂ ಆಗಿದ್ದು ಅದಕ್ಕೆ ವಿರುದ್ಧವಾಗಿ ದೇವನ ಜ್ಞಾನವು ಮಿತಿಯಿಲ್ಲದ್ದೂ ಪರಿಪೂರ್ಣವೂ ಶಕ್ತಿಭರಿತವೂ ಆಗಿದೆ. ಮನುಷ್ಯನ ಕಲ್ಪನೆಗಳ ತಪ್ಪಿನ ಬಗ್ಗೆ ಈ ವಚನವು ಸೂಚಿಸುತ್ತಿದೆ ಹಾಗೂ ಮನುಷ್ಯನ ಕುರಿತು ಪರಿಪೂರ್ಣ ಮತ್ತು ಬೇರೆ ಯಾರಿಗೂ ಅಸಾಧ್ಯವಾಗಿರುವ ತೀರ್ಪು ನೀಡಲು ದೇವನಿಗೆ ಮಾತ್ರ ಇರುವ ಸಾಮರ್ಥ್ಯದ ಕುರಿತು ನೆನಪಿಟ್ಟುಕೊಳ್ಳುವ ಆವಶ್ಯಕತೆಯನ್ನೂ ಸೂಚಿಸುತ್ತದೆ.

ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 257ರ ಪೂರ್ಣ ರೂಪ ಹೀಗಿದೆ:

**"ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟ ಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಅವನು ಸುದೃಢವಾದೊಂದು ಕೈಯಾಸರೆಯನ್ನು ಹಿಡಿದಿರುವನು (ಎಂದು ತಿಳಿದುಕೊಳ್ಳಲಿ). ಅದು ಎಂದಿಗೂ ಮುರಿದು ಹೋಗುವಂತಹದ್ದಲ್ಲ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ." (2 : 257)**

ಈ ವಚನದಲ್ಲಿ ಸತ್ಯ ವಿಶ್ವಾಸಿಗಳ ಮತ್ತು ದುಷ್ಟ ಶಕ್ತಿಗಳನ್ನು ಅನುಸರಿಸುವವರ ಎಂದರೆ ಅರಬ್ ದೇಶದ ಬಹುದೈವಾರಾಧಕರ ಮಧ್ಯೆ ಇರುವ ಭಿನ್ನತೆಯನ್ನು ವಿವರಿಸಲಾಗಿದೆ. ಮುಸ್ಲಿಮೇತರ ಅರಬಿಗಳ ಮೇಲೆ ಮುಸ್ಲಿಮರು ನಡೆಸಬಹುದಾದ ಶಕ್ತಿಪ್ರಯೋಗವನ್ನು ನಿರೀಕ್ಷಿಸಿ ಈ ವಚನದಲ್ಲಿ ಹೀಗೆ ಪ್ರತಿಪಾದಿಸಲಾಗಿದೆ. ಮುಸ್ಲಿಮರಿಗೆ ದೇವನು ಸನ್ಮಾರ್ಗವನ್ನು ದಯಪಾಲಿಸುತ್ತಾನೆ. ಆ ಸನ್ಮಾರ್ಗದ ಉಪದೇಶಗಳು ಮನುಷ್ಯ ನಿರ್ಮಿತವೆಂದು ಗಣಿಸಬಾರದು. ಆದುದರಿಂದ ಸತ್ಯ ವಿಶ್ವಾಸಿಗಳು ಇತರರನ್ನು ತಮ್ಮ ನಂಬಿಕೆಗಳನ್ನು ಅಂಗೀಕರಿಸಲು ಬಲಾತ್ಕಾರ ಮಾಡಬಾರದು. ಅವರಿಗೆ ಅಂತಹ ಅಧಿಕಾರ ನೀಡಲ್ಪಟ್ಟಿಲ್ಲ. ದೇವನಿಗಿರುವಂತಹ ಅಧಿಕಾರ ತಮಗಿದೆ ಎಂದು ಸತ್ಯವಿಶ್ವಾಸಿಗಳು ಭಾವಿಸಬಾರದು. ಸತ್ಯವು ಅಸತ್ಯದಿಂದ ಭಿನ್ನವಾಗಿದೆ. ಆದುದರಿಂದ ಸತ್ಯ ವಿಶ್ವಾಸಿಗಳು ಬಲಾತ್ಕಾರದಿಂದ ಸತ್ಯವನ್ನು ಮುನ್ನಡೆಸಬೇಕಿಲ್ಲ. ಹಾಗೆ ಮಾಡುವುದು ಮೌಢ್ಯಭರಿತವೂ ಅತಾರ್ಕಿಕವೂ ಆದ ವರ್ತನೆಯಾಗಿದೆ.

ಪವಿತ್ರ ಖುರ್‌ಆನ್ ಪದೇ ಪದೇ ಅನೇಕ ಸಂದರ್ಭಗಳಲ್ಲಿ ಅವಿಶ್ವಾಸಿಗಳ ವಿರುದ್ಧ ಬಲಪ್ರಯೋಗ ಮಾಡುವುದನ್ನು ತೀವ್ರವಾಗಿ ಖಂಡಿಸಿದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ಪರೀಶೀಲಿಸಿರಿ :

**"ನಿನ್ನ ಪ್ರಭು ಇಚ್ಛಿಸಿದ್ದರೆ, ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದುತ್ತಿದ್ದರು. (ಆದರೆ ಅವನು ನಿರ್ಬಂಧಿಸುವುದಿಲ್ಲ) ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವೆಯೋ?" (10 : 100)**

**"ಹೇಳು! 'ಇದು ನಿನ್ನ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ.' " (18 : 30)**

**"ಆದ್ದರಿಂದ ನೀನು ಉಪದೇಶಿಸು; ನೀನಾದರೋ ಕೇವಲ ಉಪದೇಶಕನಾಗಿರುವೆ. ನೀನು ಅವರ ಮೇಲೆ ಕಾವಲುಗಾರನಲ್ಲ." (88 : 22,23)**

ಬಲಪ್ರಯೋಗಕ್ಕೆ ವಿರುದ್ಧವಾಗಿ ಪವಿತ್ರ ಖುರ್‌ಆನ್ ಸತ್ಯವಿಶ್ವಾಸಿಗಳಿಗೆ ಹೀಗೆ ಉಪದೇಶಿಸುತ್ತದೆ:

**"ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು (ಜನರನ್ನು) ಆಮಂತ್ರಿಸು. ಉತ್ತಮವಾದ ರೀತಿಯಲ್ಲಿ ಅವರೊಡನೆ ವಾಗ್ವಾದಮಾಡು." (16 : 126)**

ದೇವನಿಂದ ತನಗೆ ಈ ರೀತಿಯ ವಚನಗಳು ಅವತೀರ್ಣವಾಗಿರುವಾಗ ಪ್ರವಾದಿಯವರು(ಸ) ಈ ಉಪದೇಶಗಳಿಗೆ ವಿರುದ್ಧವಾದ ವರ್ತನೆಗಳನ್ನು ಕಡೆಗಣಿಸಿರಬಹುದಾದರೂ ಹೇಗೆ?

ವಾಸ್ತವಿಕ ಸಂಗತಿಯೇನೆಂದರೆ, ಪ್ರವಾದಿಯವರು(ಸ) ಇಸ್ಲಾಮ್ ಧರ್ಮವನ್ನು ಪ್ರಚಾರ ಮಾಡಲು ಖಡ್ಗ ಪ್ರಯೋಗ ಮಾಡಿದರು ಎಂಬ ವಾದವನ್ನು ಪುರಸ್ಕರಿಸುವ ಒಂದೇ ಒಂದು ಚಾರಿತ್ರಿಕ ಘಟನೆಯನ್ನು ಉಲ್ಲೇಖಿಸಲು ಸಾಧ್ಯವಿಲ್ಲ. ಪ್ರವಾದಿಯವರ(ಸ) ಸ್ನೇಹದ ಸಂದೇಶ ಮತ್ತು ತನ್ನ ಸಹಜೀವಿಗಳ ಬಗ್ಗೆ ಅವರಿಗಿದ್ದ ಕರುಣೆ ಅವರ ಸಂದೇಶವನ್ನು ಜನರು ಅಂಗೀಕರಿಸುವಂತೆ ಮಾಡಿತು. ಪ್ರವಾದಿ(ಸ) ಯುದ್ಧವನ್ನೂ ನಾಶವನ್ನೂ ಇಷ್ಟಪಡುತ್ತಿರಲಿಲ್ಲ. ಏಕದೇವನನ್ನು ನಂಬಿದ ಏಕಮಾತ್ರ ಕಾರಣದಿಂದಾಗಿ

ಅವರು ಮತ್ತು ಅವರ ಶಿಷ್ಯರು ತಾವು ಹುಟ್ಟಿದ ನಗರವಾದ ಮಕ್ಕದಲ್ಲಿ ಶತ್ರುಗಳ ಕಠಿಣ ಹಿಂಸಾಚಾರವನ್ನು ಹದಿಮೂರು ವರ್ಷಗಳ ಕಾಲ ಸಹನೆಯಿಂದ ಅನುಭವಿಸಿದರು. ಮದೀನಕ್ಕೆ ವಲಸೆಹೋದ ನಂತರ ಸಹ ಮಕ್ಕದ ಶತ್ರುಗಳು ತಮ್ಮ ಆಕ್ರಮಣಗಳನ್ನು ಮುಂದುವರಿಸಿದಾಗ ಪ್ರವಾದಿಯವರು[ಸ] ತನ್ನ ಮತ್ತು ತನ್ನ ಅನುಯಾಯಿಗಳ ರಕ್ಷಣೆಗಾಗಿ ಹೋರಾಡಿದರು. ಯುದ್ಧಗಳಲ್ಲಿ ಜಯಗಳಿಸದರೂ ಅವರು ಮಕ್ಕದ ಜನರನ್ನು ಒಂದು ಶಾಂತಿ ಒಪ್ಪಂದ ಮಾಡಲಿಕ್ಕಾಗಿ ಪ್ರೇರೇಪಿಸಿದರು. ಹುದೈಬಿಯಾ ಒಪ್ಪಂದದ ನಂತರದ ಶಾಂತಿಯ ಕಾಲದಲ್ಲಿ ಇಸ್ಲಾಮ್ ಧರ್ಮವು ಹೇಗೆ ವ್ಯಾಪಿಸಿತೆಂದರೆ ಒಪ್ಪಂದ ಮಾಡಿದ ಎರಡು ವರ್ಷಗಳ ನಂತರ ಮಕ್ಕದವರು ಒಪ್ಪಂದವನ್ನು ಭಂಗ ಪಡಿಸಿದಾಗ ಪ್ರವಾದಿಯವರು[ಸ] ಹೊಸದಾಗಿ ಇಸ್ಲಾಮಿಗೆ ಸೇರಿದ ಹತ್ತುಸಾವಿರ ಅನುಯಾಯಿಗಳೊಂದಿಗೆ ಮಕ್ಕವನ್ನು ಪ್ರವೇಶಿಸಿದರು. ಬೃಹತ್ತಾದ ಸೈನ್ಯವನ್ನು ನೋಡಿ ಮಕ್ಕದವರು ಶರಣಾಗತರಾದರು. ಈ ಘಟನೆಯ ಸಂದರ್ಭದಲ್ಲಿ ಯಾವುದೇ ರಕ್ತಪಾತ ನಡೆಯಲಿಲ್ಲ ಮತ್ತು ಪ್ರತೀಕಾರ ಕೃತ್ಯಗಳು ಸಂಭವಿಸಲಿಲ್ಲವೆಂಬುದು ಈ ಸಂದರ್ಭದ ಮಹತ್ವಪೂರ್ಣ ಅಂಶವಾಗಿದೆ. ಅಲ್ಲಿ ಯಾವುದೇ ಬಲಾತ್ಕಾರವೂ ನಡೆಯಲಿಲ್ಲ. ಪ್ರವಾದಿಯವರು[ಸ] ಮಕ್ಕದ ಜನರನ್ನು ಕ್ಷಮಿಸಿದರು. ಮಕ್ಕದ ಜನರಿಗೆ ತಮಗಿಷ್ಟವಿರುವ ನಂಬಿಕೆ ಹೊಂದುವ ಸ್ವಾತಂತ್ರ್ಯವನ್ನೂ ರಕ್ಷಣೆಯನ್ನೂ ನೀಡಲಾಯಿತು. ಪ್ರವಾದಿಯವರು[ಸ] ತನ್ನ ಶತ್ರುಗಳಿಗೆ ಸಹ ತೋರಿಸಿದ ಪ್ರೀತಿ ಮತ್ತು ಕರುಣೆ ಜನರ ಸ್ವಭಾವ ಗುಣಗಳನ್ನು ಪರಿವರ್ತಿಸಿ ಅವರು ದೇವನ ಪ್ರಿಯ ದಾಸರಾಗುವಂತೆ ಮಾಡಿತು.

## ದ್ವಿತೀಯ ಆರೋಪದ ಖಂಡನೆ

ಖೌರಿ ಹೇಳಿದ "ಇಸ್ಲಾಮಿನ ದೇವನ ಇಚ್ಛೆಯು ನಮ್ಮ ವಿಷಯ ವಿಭಜನೆಗಳಿಗೆ ಬದ್ಧವಾಗಿರುವುದಿಲ್ಲ. ವೈಚಾರಿಕತೆಗೂ ಅವನು ಬದ್ಧನಲ್ಲ" ಎಂಬ ಮಾತುಗಳನ್ನು ಪೋಪ್‌ರವರು ಪುನರಾವರ್ತಿಸಿ ಇಸ್ಲಾಮ್ ಧರ್ಮದ ಬಗ್ಗೆ ಅವರಿಗಿರುವ ತಪ್ಪು ತಿಳುವಳಿಕೆಯನ್ನು ಬಹಿರಂಗಗೊಳಿಸಿರುವರು.

ಖೌರಿ ಹೇಳಿದ ಮಾತು ಅಸಂಬದ್ಧವಾಗಿದೆ. ಖೌರಿ ಹೇಳಿದ ಮಾತು ಸರಿಯಾಗಿದ್ದರೆ ಮುಸ್ಲಿಮರು ದೇವನ ಕುರಿತು, ಅವನು ಸುಮಾರು ನೂರು ಗುಣನಾಮಗಳನ್ನು ಹೊಂದಿರುವನೆಂದೂ ಅವುಗಳನ್ನು ಅನುಕರಿಸಲು ಮುಸ್ಲಿಮರು ಪ್ರಯತ್ನಿಸುತ್ತಾ ಇರಬೇಕೆಂದೂ ನಂಬುವುದಾದರೂ ಏಕೆ?

ಆ ಗುಣನಾಮಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ಪದೇ ಪದೇ ದೇವನೇ ತನ್ನ ಕುರಿತು ಪ್ರಸ್ತಾಪಿಸಿದ್ದು ಅವುಗಳ ಪೈಕಿ ಕೆಲವನ್ನು ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯವಾದ ಅಲ್‌ಫಾತಿಹದಲ್ಲಿ ವಿವರಿಸಲಾಗಿದೆ. ಅಲ್‌ಫಾತಿಹ ಪ್ರತಿದಿನ 30 ಬಿಲಿಯನ್‌ಗಿಂತ ಹೆಚ್ಚು ಸಲ ಪ್ರಾರ್ಥನೆಗಳಲ್ಲಿ ಮುಸ್ಲಿಮರಿಂದ ಪಠಿಸಲ್ಪಡುತ್ತಿದೆ. ಅದು ಹೀಗಿದೆ:-

**ಪರಮ ದಯಾವಂತನೂ ಕಾರುಣ್ಯ ನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ).**

**ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. ಅವನು ಪರಮ ದಯಾವಂತನೂ ಕಾರುಣ್ಯ ನಿಧಿಯೂ ನ್ಯಾಯ ತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ.**

**(ಓ ದೇವಾ) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ (ಪವಿತ್ರ ಖುರ್‌ಆನ್ 1 : 1-7)**

ಮೇಲೆ ಬರೆದ ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದಲ್ಲಿ ದೇವನ ನೂರಕ್ಕಿಂತಲೂ ಹೆಚ್ಚು ಗುಣನಾಮಗಳ ಪೈಕಿ ಅಡಿಗೆರೆ ಹಾಕಿದ ಕೇವಲ ನಾಲ್ಕು ಗುಣನಾಮಗಳನ್ನು ದೇವನು ಸೂಚಿಸಿದ್ದಾನೆ. ಈ ಗುಣನಾಮಗಳ ಕುರಿತು ಮುಸ್ಲಿಮರ ಹೇಳಿಕೆ ಏನೆಂದರೆ:-

ಆ ಗುಣಗಳನ್ನು ತಮ್ಮಲ್ಲಿಯೂ ಅಳವಡಿಸಲು ಪ್ರಯತ್ನಿಸಬೇಕು ಅಥವಾ ಅವುಗಳ ಬಗ್ಗೆ ಸಾಧ್ಯವಿರುವಷ್ಟು ಗಮನಹರಿಸಬೇಕು.

ನೇತೃತ್ವದ ಸ್ಥಾನದಲ್ಲಿರುವ ಮುಸ್ಲಿಮರು ದೇವನ "ಸರ್ವಲೋಕಗಳ ಪರಿಪಾಲಕ" (ರಬ್ಬುಲ್ ಆಲಮೀನ್) ಎಂಬ ಗುಣನಾಮದ ಕುರಿತು ಚಿಂತಿಸಿ, ದೇವನು ಮಾತ್ರ ಸರ್ವೋಚ್ಚ ನಾಯಕನೆಂಬ ಸ್ತುತಿಗೆ ಅರ್ಹನಾಗಿದ್ದಾನೆ; ಆದುದರಿಂದ ತಾವು ತಮ್ಮ ನಾಯಕತ್ವಕ್ಕೆ ಅಧೀನರಾಗಿರುವವರೊಂದಿಗೆ ವರ್ತಿಸುವಾಗ ದುರಹಂಕಾರದಿಂದ ವರ್ತಿಸಬಾರದೆಂದು ಮನವರಿಕೆ ಮಾಡಿಕೊಳ್ಳಬೇಕು. ಇದೇ ರೀತಿ ಮುಸ್ಲಿಮರು ದೇವನ ಪರಮ ದಯಾವಂತ (ಅರ್ರಹ್ಮಾನ್) ಮತ್ತು ಕಾರುಣ್ಯ ನಿಧಿ (ಅರ್ರಹೀಮ್) ಎಂಬ ಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಲು ಯತ್ನಿಸುತ್ತಾರೆ ಮತ್ತು ತಮ್ಮ ಕೆಲಸಗಳ ಬಗ್ಗೆ "ನ್ಯಾಯ ತೀರ್ಮಾನ ದಿನದ ಅಧಿಪತಿ" (ಮಾಲಿಕಿ ಯೌಮಿದ್ದೀನ್) ಆಗಿರುವ ದೇವನು ಪರಲೋಕದಲ್ಲಿ ತೀರ್ಪುನೀಡುವನೆಂಬುದರ ಬಗ್ಗೆ ತಮಗೆ ತಾವೇ ನೆನಪಿಸಿಕೊಡುತ್ತಿರುತ್ತಾರೆ. ಇವೆಲ್ಲಾ ಗುಣನಾಮಗಳು ಸೂಚಿಸುವುದೇನೆಂದರೆ ಖೌರಿ ಹೇಳಿದ ಮಾತು ಸರಿಯಾದುದಲ್ಲ. ದೇವನು ಲೌಕಿಕವಾಗಿ ಸಂಬಂಧಿಸಿರುವ ಅನೇಕ ವಿಷಯ ವಿಭಜನೆಗಳಿಗೆ ತನ್ನನ್ನು ಬದ್ಧನಾಗಿ ಮಾಡಿದ್ದಾನೆ. ದೇವನು ಸ್ವತಃ ಪವಿತ್ರ ಖುರ್‌ಆನ್‌ನಲ್ಲಿ ಇದನ್ನು ಪ್ರಸ್ತಾಪಿಸಿದ್ದಾನೆ.

ಇಸ್ಲಾಮ್ ಧರ್ಮವು ಪ್ರತಿಪಾದಿಸುವ ದೇವನು ತರ್ಕಸಮ್ಮತವಾದ ವಿಚಾರವಂತನಾಗಿದ್ದಾನೆ ಎಂಬ ವಿಷಯದ ಬಗ್ಗೆ ಪುನಃ ವಿವರಣೆ ನೀಡುವುದಾದರೆ, ನಾವು ಪವಿತ್ರ ಖುರ್‌ಆನ್‌ನಲ್ಲಿ ದೇವನ ಬಗ್ಗೆ ಹಲವಾರು ಸಾರಿ ವರ್ಣಿಸಲಾದ ಗುಣನಾಮದ ಕಡೆಗೆ ಗಮನ ಹರಿಸೋಣ. ದೇವನು ಪವಿತ್ರ ಖುರ್‌ಆನಿನ ಎರಡನೆಯ ಅಧ್ಯಾಯವಾದ ಅಲ್‌ಬಖರದಲ್ಲಿ ತನ್ನ ಬಗ್ಗೆ "ನಾನು ಅಲ್ಲಾಹನು ಎಲ್ಲವನ್ನೂ ಬಲ್ಲವನು" ಎಂದು ಪ್ರಾರಂಭದಲ್ಲಿಯೇ ಹೇಳುತ್ತಾನೆ. ಇಸ್ಲಾಮ್ ಧರ್ಮವು ಪ್ರತಿಪಾದಿಸುವ ದೇವನು ವಿಚಾರವಂತನೆಂದು ಸಾಬೀತು ಪಡಿಸಲು ಈ ಒಂದು ಹೇಳಿಕೆಯೇ ಸಾಕಾಗಿದೆ. ದೇವನೆಂದರೆ ಎಲ್ಲವನ್ನೂ ಬಲ್ಲವನು ಎಂದು ನಂಬುವ

ಮುಸ್ಲಿಮರಿಗೆ ದೇವನ ಸೃಷ್ಟಿಯಾದ ಈ ಪ್ರಪಂಚ, ದೇವನ ಸುಂದರ ತರ್ಕಬದ್ಧತೆ ಮತ್ತು ನಿಖರತೆಗೆ ಪಾತ್ರವಾಗಿದೆ ಎಂದು ಕಲಿಸಲಾಗಿದೆ.

ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ಗಮನಿಸಿರಿ:

**"ಪರಮ ದಯಾವಂತನ (ಅಲ್ಲಾಹನ) ಸೃಷ್ಟಿ ಕಾರ್ಯದಲ್ಲಿ ಯಾವ ಅಸಂಬದ್ಧತೆಯನ್ನೂ ನೀನು ಕಾಣಲಾರೆ. ನೀನು ಪುನಃ ನೋಡು. ಏನಾದರೂ ಲೋಪದೋಷವಿದೆಯೇ?"**

**"ಪುನಃ ಎರಡು ಸಲ ದೃಷ್ಟಿ ಹರಿಸಿ ನೋಡು. ದೃಷ್ಟಿ ಸೋತು, ಬಳಲಿ ನಿನ್ನೆಡೆಗೆಯೇ ಮರಳುವುದು." (67 : 4,5)**

ಈ ಕೆಳಗಿನ ವಚನವನ್ನೂ ನೋಡಿರಿ:

**"ಅವರು ತಮ್ಮ ಮನಸ್ಸಿನಲ್ಲಿಯೇ ಆಲೋಚಿಸುವುದಿಲ್ಲವೇನು? ಅಲ್ಲಾಹನು ಆಕಾಶಗಳನ್ನೂ ಭೂಮಿಯನ್ನೂ ಅವುಗಳ ಮಧ್ಯದಲ್ಲಿರುವ ಎಲ್ಲವನ್ನೂ ಯಥೋಚಿತವಾಗಿಯೂ ಒಂದು ನಿಶ್ಚಿತ ಅವಧಿಗೋಸ್ಕರವೂ ಹೊರತು ಸೃಷ್ಟಿಸಲಿಲ್ಲ." (30 : 9)**

ನಮ್ಮ ಸುತ್ತಮುತ್ತಲಿರುವ ಲೋಕವನ್ನು ಮನವರಿಕೆ ಮಾಡಿಕೊಳ್ಳಲು ಇಸ್ಲಾಮ್ ಧರ್ಮವು ಒಂದು ವೈಚಾರಿಕ ಅಸ್ತಿಭಾರವನ್ನು ಒದಗಿಸಿಕೊಡುತ್ತದೆ.

ಇದರ ಮೊದಲು ಹೇಳಿದಂತೆ ಇಸ್ಲಾಮ್ ಧರ್ಮವು ಮನಸ್ಸಾಕ್ಷಿಯ ಸಂಪೂರ್ಣ ಸ್ವಾತಂತ್ರ್ಯವನ್ನು ಸುರಕ್ಷಿತಗೊಳಿಸುತ್ತದೆ. ಎಲ್ಲಾ ಧರ್ಮಗಳ ಅನುಯಾಯಿಗಳು ತಮಗೆ ಇಷ್ಟವಿರುವ ಪ್ರಕಾರ ತಮ್ಮ ಧರ್ಮವನ್ನು ನಂಬಲು ಮತ್ತು ಇತರರಿಗೆ ಪ್ರಚಾರ ಮಾಡಲು ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಪವಿತ್ರ ಖುರ್‌ಆನ್ ಇನ್ನೊಂದು ವಿಷಯವನ್ನೂ ಹೇಳುತ್ತದೆ. ಅದೇನೆಂದರೆ, ದೇವನ ಕೃತಿ (ಎಂದರೆ ನಿಸರ್ಗ) ಮತ್ತು ಅವನ ನುಡಿ (ಅವತೀರ್ಣವಾದ ಗ್ರಂಥ ಖುರ್‌ಆನ್) ಇವುಗಳ ಮಧ್ಯೆ ವೈರುಧ್ಯವಿರಲು ಸಾಧ್ಯವಿಲ್ಲ.

ಪವಿತ್ರ ಖುರ್‌ಆನಿನ ಎಂಟನೆಯ ಒಂದು ಭಾಗ ಎಂದರೆ ಅಂದಾಜು 750 ವಚನಗಳು ನಿಸರ್ಗವನ್ನು ಅಧ್ಯಯನ ಮಾಡಿ ಅದರಿಂದ ಪಾಠ ಕಲಿಯಲು ಜನರಿಗೆ ಒತ್ತಿ ಹೇಳುತ್ತದೆ. ಈ ಕೆಳಗಿನ ಖುರ್‌ಆನ್ ವಚನಗಳನ್ನು ಗಮನಿಸಿರಿ:-

**"ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲೂ ರಾತ್ರಿ-ಹಗಲುಗಳ ರೂಪಾಂತರದಲ್ಲೂ ದಿಟವಾಗಿಯೂ ಬುದ್ಧಿಶಾಲಿಗಳಿಗೆ (ಹಲವು) ದೃಷ್ಟಾಂತಗಳಿವೆ." (3 : 191)**

**"ಇರುಳನ್ನೂ ಹಗಲನ್ನೂ ಸೂರ್ಯನನ್ನೂ ಚಂದ್ರನನ್ನೂ ಅವನು ನಿಮ್ಮ ಪ್ರಯೋಜನಕ್ಕಾಗಿ ವ್ಯವಸ್ಥೆಗೊಳಿಸಿದ್ದಾನೆ. ನಕ್ಷತ್ರಗಳನ್ನು ಸಹ ಅವನ ಆಜ್ಞೆಯನುಸಾರ ನಿಮ್ಮ ಪ್ರಯೋಜನಕ್ಕಾಗಿ ವ್ಯವಸ್ಥೆಗೊಳಿಸಲಾಗಿದೆ. ವಿವೇಕಶಾಲಿಗಳಿಗೆ ಖಂಡಿತವಾಗಿಯೂ ಅದರಲ್ಲಿ ದೃಷ್ಟಾಂತಗಳಿವೆ. (16 : 13)**

ಪವಿತ್ರ ಖುರ್‌ಆನಿನ ಈ ವಚನಗಳು ಮಹಾನ್ ಮುಸ್ಲಿಮ್ ವಿಜ್ಞಾನಿಗಳನ್ನು "ಅರಬ್ ವಿಜ್ಞಾನದ ಸುವರ್ಣಯುಗ"ದಲ್ಲಿ ಪ್ರಚೋದಿಸಿತು ಮತ್ತು ಅವರು ನಾಗರಿಕತೆಗೆ ಮಹತ್ವಪೂರ್ಣವಾದ ಮತ್ತು ಅಭೂತಪೂರ್ವವಾದ ಕಾಣಿಕೆಗಳನ್ನು ನೀಡುವಂತೆ ಮಾಡಿತು. ಫಲಾಗಸ್ ಮತ್ತು ಅವರ ಸಹೋದ್ಯೋಗಿಗಳು ಕೆಲವು ತಿಂಗಳ ಹಿಂದೆ ಹೀಗೆ ಬರೆದರು:

"ಜೀವಶಾಸ್ತ್ರ ಮತ್ತು ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಿಸಿದ ವಿಜ್ಞಾನಗಳು ಅರಬಿಕ್-ಇಸ್ಲಾಮಿಕ್ ಲೋಕದಲ್ಲಿ ಕ್ರಿಸ್ತಶಕ ಎಂಟರಿಂದ ಹದಿಮೂರನೆ ಶತಮಾನದ ತನಕ ಮಹತ್ವಪೂರ್ಣ ಬೆಳವಣಿಗೆಯನ್ನು ಪಡೆದುವು. ಅದು ಜ್ಞಾನ ಮತ್ತು ಬುದ್ಧಿಶಕ್ತಿಯ ಪುಷ್ಪ ಸಮೃದ್ಧಿಯ ಕಾಲವಾಗಿತ್ತು. ಅನಂತರ ಅವುಗಳು ಯುರೋಪಿನಾದ್ಯಂತ ಹರಡಿ ವೈದ್ಯಕೀಯ ಚಿಕಿತ್ಸೆ ಮತ್ತು ವಿದ್ಯಾಭ್ಯಾಸವನ್ನು ಬಹಳ ಪ್ರಭಾವಕ್ಕೊಳಪಡಿಸಿದುವು."

("ARAB SCIENCE IN THE GOLDEN AGE (750-1258 C.E.) AND TODAY." FASEB Journal 20 : 1581-1586 (2006)

ತನ್ನ ತರ್ಕಸಮ್ಮತ ಸಿದ್ಧಾಂತಕ್ಕೆ ಬೆಂಬಲ ನೀಡುತ್ತಿರುವ ಇಸ್ಲಾಮ್ ಧರ್ಮದ ಒಂದು ವೈಶಿಷ್ಟ್ಯವು ಅದು ಖುರ್‌ಆನ್ ಮೂಲಕ (ವಚನ 34 : 29) ಮುಹಮ್ಮದ್ ಪೈಗಂಬರರನ್ನು(ಸ) ದೇವನ ಸಾರ್ವಲೌಕಿಕ ಪ್ರವಾದಿಯೆಂದು ಘೋಷಿಸಿ ಅವರನ್ನು ಸಕಲ ಮನುಷ್ಯರಿಗಾಗಿರುವ ಸಂದೇಶದೊಂದಿಗೆ ಕಳುಹಿಸಲ್ಪಟ್ಟ ಪ್ರವಾದಿ ಎಂದು ಹೇಳುತ್ತದೆ. ಆ ಪ್ರವಾದಿ(ಸ) 1400 ವರ್ಷಗಳ ಮೊದಲು ಆಗಮಿಸಿದರು. ಆ ಕಾಲದ ವರೆಗೆ ಮನುಷ್ಯ ಕುಲವು ಭೂವಿಭಾಗ ಮತ್ತು ಸಮುದ್ರಗಳ ಕಾರಣದಿಂದ ತುಂಡು ತುಂಡುಗಳಾಗಿ ಮಾಡಲ್ಪಟ್ಟಿದ್ದಿತು. ಮತ್ತೆ ಆ ತುಂಡರಿಸಲ್ಪಟ್ಟಿದ್ದ ಜನಸಮೂಹಗಳು ಪರಸ್ಪರ ಸಂಪರ್ಕ ಹೊಂದಲು ಮತ್ತು ಪರಸ್ಪರ ಕಾರ್ಯನಿರತರಾಗಲು ಪ್ರಾರಂಭಿಸಿದುವು.

ಇಸ್ಲಾಮ್ ಧರ್ಮದ ಆಗಮನಕ್ಕೆ ಮೊದಲು ಎಲ್ಲಾ ಜನಾಂಗಗಳಿಗೆ ವಿವಿಧ ಪ್ರವಾದಿಗಳನ್ನೂ ಸಂದೇಶವಾಹಕರನ್ನೂ ಕಳುಹಿಸಲಾಗಿತ್ತೆಂದೂ ಜಗತ್ತಿನ ಮನುಷ್ಯರನ್ನೆಲ್ಲಾ ಏಕದೇವನ ಪತಾಕೆಯಡಿಯಲ್ಲಿ ಒಗ್ಗೂಡಿಸಲು ಏಕಸಂದೇಶ (ಎಂದರೆ ಇಸ್ಲಾಮ್) ಆವಶ್ಯಕವಾಗಿದೆ ಎಂದೂ ಪವಿತ್ರ ಖುರ್‌ಆನ್ ಘೋಷಿಸುತ್ತದೆ. ಹಿಂದೆ ಅವತೀರ್ಣವಾದ ಧರ್ಮಗಳನ್ನು ಅಂಗೀಕರಿಸುವ ವಿಶ್ವಾಸ ಮತ್ತು ತನ್ನ ಸಂದೇಶ ಸಕಲ ಮಾನವರಿಗೂ ಅನ್ವಯಿಸುವುದೆಂದು ಘೋಷಿಸಿರುವುದು ಇಸ್ಲಾಮ್ ಧರ್ಮದ ತರ್ಕಬದ್ಧ ತಳಹದಿಯನ್ನು ಬಲಯುತವಾಗಿ ಸ್ಥಾಪಿಸುತ್ತದೆ. ಇಸ್ಲಾಮ್ ಧರ್ಮವು ಅನ್ಯ ಧರ್ಮಗಳ ಮತ್ತು ಪಂಥಗಳ ಹಿಂಸಾಚಾರಗಳನ್ನು ಸ್ಪಷ್ಟವಾಗಿ ಖಂಡಿಸುತ್ತದೆಯಲ್ಲದೆ ಇಸ್ಲಾಮಿನ ಸುಂದರ ಉಪದೇಶಗಳನ್ನು ತಮ್ಮ ಸ್ವಾರ್ಥ ಉದ್ದೇಶಗಳಿಗಾಗಿ ತಿರುಚುವ ತಥಾ ಕಥಿತ ಇಸ್ಲಾಮಿಕ ತೀವ್ರವಾದಿ ಗುಂಪುಗಳ ಚಟುವಟಿಕೆಗಳನ್ನೂ ಸ್ಪಷ್ಟವಾಗಿ ಖಂಡಿಸುತ್ತದೆ.

ಯಾವುದೇ ಧರ್ಮದ ಸನ್ಮಾರ್ಗ ಶೂನ್ಯರಾದ ಧಾರ್ಮಿಕ ನಾಯಕರ ತರ್ಕರಹಿತ ನಡೆವಳಿಕೆಗಳು ಆ ಧರ್ಮದ ಪರಿಶುದ್ಧ ಮತ್ತು ತರ್ಕಬದ್ಧ ಸಂದೇಶವನ್ನು ಕಳಂಕಿತಗೊಳಿಸಬಾರದು.

ಧಾರ್ಮಿಕ ನಾಯಕರ ತರ್ಕರಹಿತ ನಡೆವಳಿಕೆಯಲ್ಲಿ ಮಧ್ಯಕಾಲೀನ ಕ್ರೈಸ್ತ ಪಾದ್ರಿಗಳು ನಡೆಸಿದ ಮಾಟಗಾರರ ಕುಪ್ರಸಿದ್ಧ ನ್ಯಾಯ ವಿಚಾರಣೆಗಳು ಉದಾಹರಣೆಗಳಾಗಿವೆ. ಇದಲ್ಲದೆ ಪೋಪ್‌ರವರ ಆಡಳಿತವಲ್ಲವೇ ಗ್ಯಾಲಿಲಿಯೋರನ್ನು ಗೃಹಬಂಧದಲ್ಲಿರಿಸಿ ಅವರು ತನ್ನ ತರ್ಕಬದ್ಧ ವೈಜ್ಞಾನಿಕ ನಿರೀಕ್ಷೆಯನ್ನು ಅಲ್ಲಗಳೆಯುವಂತೆ ಮಾಡಿದುದು? ಭೂಮಿಯ ಸುತ್ತಲೂ ಸೂರ್ಯನು ತಿರುಗುತ್ತಾನೆ ಎಂಬ ಕ್ರೈಸ್ತ ಪುರೋಹಿತರ ಪ್ರಬಲ ವಿಶ್ವಾಸಕ್ಕೆ ವಿರುದ್ಧವಾಗಿ ಭೂಮಿಯು ಸೂರ್ಯನ ಸುತ್ತಲೂ ಸಂಚರಿಸುತ್ತದೆ ಎಂದು ಅವರು ಕಂಡುಹಿಡಿದಿದ್ದರು. (Theories of the world from Antiquity to the Copernicon Revolution. pp 157-159)

ಯುರೋಪಿನ ಪುನರುತ್ಥಾನದ ಕಾಲದ ಮಹಾನ್ ವಿಜ್ಞಾನಿಯಾಗಿದ್ದ ಭೌತಶಾಸ್ತ್ರಜ್ಞ ಸರ್ ಐಸಾಕ್ ನ್ಯೂಟನ್‌ರವರು ಏಕದೇವ ವಿಶ್ವಾಸವನ್ನು ಹೊಂದಿ ತ್ರಿತ್ವ ಸಿದ್ಧಾಂತವನನು ಅಂಗೀಕರಿಸಲು ನಿರಾಕರಿಸಿದುದರಿಂದ ಅವರು ಲಂಡನಿನ ಟ್ರಿನಿಟಿ ಕಾಲೇಜಿನ ಭೌತಶಾಸ್ತ್ರದ ಮೇಧಾವಿತ್ವದ ಸ್ಥಾನದಿಂದ ಹೊರಗೆ ಹೋಗಬೇಕಾಯಿತು. (Life of ISSAC NEWTON - R.C. WESTFALL Cambridge University Press 1993. pp 121-124)

ಈಗ ಲೋಕವು ಪುನಃ ವಿಚಾರಹೀನ ನಡೆವಳಿಕೆಗಳಲ್ಲಿ ಮುಳುಗಿಹೋಗಿದೆ. ಎಲ್ಲಾ ಧರ್ಮಗಳ ಮೂಲಭೂತವಾದಿ ಮತಪಂಡಿತರು ಹಿಂಸಾಚಾರವನ್ನೂ ಒಡಕನ್ನೂ ಉತ್ತೇಜಿಸುವ ಹೇಳಿಕೆಗಳನ್ನು ನೀಡುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಪವಿತ್ರ ಖುರ್‌ಆನ್ ಪದೇ ಪದೇ ನಿರೂಪಿಸಿದ ಪ್ರಕಾರ ಮತ್ತು ಆದಿಕಾಲದ ಮುಸ್ಲಿಮರು ತಮ್ಮ ನಡೆವಳಿಕೆಗಳಲ್ಲಿ ಕೃತಿರೂಪಕ್ಕೆ ಇಳಿಸಿದ ಪ್ರಕಾರ ಇಸ್ಲಾಮ್ ಧರ್ಮವು ತರ್ಕಬದ್ಧ ಅಸ್ತಿಭಾರದ ಮೇಲೆ ಸ್ಥಾಪಿತವಾಗಿದೆ. ಇಸ್ಲಾಮ್ ಧರ್ಮದ ಶಾಂತಿ ಪ್ರತಿಪಾದಿಸುವ ತತ್ವಗಳನ್ನು ಅನುಸರಿಸುವ ಲೋಕದ ಬಹುತೇಕ ಮುಸ್ಲಿಮರು ಅನ್ಯಧರ್ಮಗಳ ಮತ್ತು ಪಂಥಗಳ ಹಿಂಸಾಚಾರಗಳನ್ನು ಸ್ಪಷ್ಟವಾಗಿ ಖಂಡಿಸುತ್ತಾರಲ್ಲದೆ ಇಸ್ಲಾಮಿನ ಸುಂದರ ಉಪದೇಶಗಳನ್ನು ತಮ್ಮ ಸ್ವಾರ್ಥ ಉದ್ದೇಶಗಳಿಗಾಗಿ ತಿರುಚುವ ತಥಾಕಥಿತ ಇಸ್ಲಾಮಿಕ ತೀವ್ರವಾದಿ ಗುಂಪುಗಳ ಚಟುವಟಿಕೆಗಳನ್ನೂ ಖಂಡಿಸುತ್ತಾರೆ.

ಬುದ್ಧಿವಂತರಿಗೆ ಅಧಿಕಾರ, ಬಲಪ್ರಯೋಗ ಮತ್ತು ಆಯುಧಗಳ ಆವಶ್ಯಕತೆಯಿಲ್ಲ ಎಂದು ಪೋಪ್‌ರವರು ಹೇಳಿದ ಮಾತುಗಳನ್ನು ನಾವು ಸರಿಯೆಂದು ಅಂಗೀಕರಿಸುತ್ತೇವೆ. ಉದಾಹರಣೆಗೆ, ಹತ್ತೊಂಬತ್ತನೆಯ ಶತಮಾನದಲ್ಲಿ ಆಗಮಿಸಿ ಅಹ್ಮದಿಯಾ ಮುಸ್ಲಿಮ್ ಸಂಘಟನೆಯನ್ನು ಸ್ಥಾಪಿಸಿದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಹೀಗೆ ಹೇಳುತ್ತಾರೆ:

"ಸರಿಯಾದ ಭೌದ್ಧಿಕ ವಾದಗಳಿಂದಲೂ ದೈವಿಕ ದೃಷ್ಟಾಂತಗಳಿಂದಲೂ ಅಥವಾ ಬೇರೆ ನಂಬಲರ್ಹ ಸಾಕ್ಷ್ಯಗಳಿಂದಲೂ ತನ್ನ ಸತ್ಯತೆಯನ್ನು ಸ್ಥಾಪಿಸಬಲ್ಲ ಧರ್ಮಕ್ಕೆ ಜನರಿಗೆ ಖಡ್ಗದ ಮೂಲಕ ಬೆದರಿಕೆ ನೀಡಿ ಅವರಿಂದ ಧರ್ಮದ ಸತ್ಯತೆಯ ಬಗ್ಗೆ ಹೇಳಿಕೆ ಪಡೆಯುವ ಆವಶ್ಯಕತೆ ಇರುವುದಿಲ್ಲ." ("Jihad"-Review of Religions 1902)

ಅತಿ ಕ್ರೌರ್ಯದ ಯುದ್ಧಗಳನ್ನು ಮಾಡುತ್ತಿರುವ ಜಾಗತಿಕ ಮಹಾಶಕ್ತಿ ರಾಷ್ಟ್ರಗಳು ಈ ತತ್ವಗಳನ್ನು ಪಾಲಿಸಬೇಕೆಂದು ನಾವು ಆಶಿಸುತ್ತೇವೆ.

ಪುನಃ ನಾವು ಚರಿತ್ರೆಯ ಕಡೆಗೆ ತಿರುಗೋಣ. ಸ್ಪಾನಿಶ್ ಇಂಕ್ವಿಝಿಷನ್ ಕಾಲದಲ್ಲಿ ಹಿಂಸಾಚಾರ ಮಾಡಿದ ಕ್ರೈಸ್ತರು ತರ್ಕಬದ್ಧವಾಗಿ ಮತ್ತು ಅಹಿಂಸೆಯನ್ನು ಪಾಲಿಸಿ ವರ್ತಿಸಿದ್ದರೆ? ರೋಮನ್ ಕ್ಯಾಥಲಿಕ್ ಚರ್ಚ್‌ನಿಂದ ಅಂಗೀಕಾರ ಪಡೆದ ಹಿಂಸಕರು ಹಲವು ದಶಕಗಳ ಕಾಲ ಕ್ರೈಸ್ತ ಧರ್ಮ ವಿಶ್ವಾಸಿಗಳಲ್ಲದ ಜನರನ್ನು ಮತ್ತು ಬಹುತೇಕವಾಗಿ ಮುಸ್ಲಿಮರನ್ನೂ ಯಹೂದಿಯರನ್ನೂ ಕ್ರೂರ ಹಿಂಸಾಚಾರಗಳಿಗೆ ಗುರಿಪಡಿಸಿದ್ದರು, ಕೊಂದಿದ್ದರು ಮತ್ತು ಸ್ಪೈಯಿನ್‌ನಿಂದ ಗಡಿಪಾರು ಮಾಡಿದ್ದರು. ಅವರ ಅಪರಾಧವು ಯೇಸುವನ್ನು ದೇವನೆಂದು ಅಂಗೀಕರಿಸದೆ ಇದ್ದುದಾಗಿತ್ತು.

ನಮ್ಮ ಹಿಂದಿನ ಚರಿತ್ರೆಯನ್ನು ಕಳಂಕಿತಗೊಳಿಸಿದ ಇತ್ತೀಚೆಗಿನ ಒಂದು ಉದಾಹರಣೆ, ಆಫ್ರಿಕನ್ ಕಪ್ಪು ಜನರನ್ನು ವ್ಯವಸ್ಥಿತವಾಗಿ ಹಿಡಿಗೂಡಿ ಅವರನ್ನು ಯುರೋಪಿನ ಮತ್ತು ಆಫ್ರಿಕದ ಗುಲಾಮರ ಸಂತೆಗೆ ತಲುಪಿಸಿ ಮಾರಾಟ ಮಾಡುತ್ತಿದ್ದುದಾಗಿದೆ.

ನಿರಪರಾಧಿಗಳಾದ ಆಫ್ರಿಕನ್ ಕಪ್ಪು ಜನರನ್ನು ಗುಲಾಮಗಿರಿಗೆ ಗುರಿಪಡಿಸಿದುದಕ್ಕೆ ಅಮೇರಿಕದಲ್ಲಿ ಬೈಬಲಿನ ವಚನಗಳನ್ನು* ಉಲ್ಲೇಖಿಸಿ ಸಮರ್ಥಿಸಲಾಯಿತು. ಪ್ರವಾದಿ ನೋಹರ(ಅ) ಶಾಪಗ್ರಸ್ತ ಪುತ್ರನ ಬುಡಕಟ್ಟಿಗೆ ಸೇರಿದವರು ಅವರೆಂದು ವಾದಿಸಲಾಯಿತು.

ಬೈಬಲಿನ ಬೆಂಬಲವೆಂಬ ಶಸ್ತ್ರದಿಂದ ಸಜ್ಜಿತರಾದ ಅಮೇರಿಕನರು ಆಫ್ರಿಕನ್ ಕಪ್ಪು ಜನರ ಅನೇಕ ಪೀಳಿಗೆಗಳನ್ನು ತಮ್ಮ ದಬ್ಬಾಳಿಕೆಗೆ ಗುರಿಪಡಿಸಿದರು ಮತ್ತು ಅತ್ಯಂತ ನಿಕೃಷ್ಟ ಅಮಾನವೀಯವಾಗಿ ಅವರೊಂದಿಗೆ ವರ್ತಿಸಿದರು.

ಪವಿತ್ರ ಖುರ್‌ಆನ್ ಪ್ರಕಾರ ಯೇಸು ಕ್ರಿಸ್ತರು(ಅ) ಮತ್ತು ನೋಹರು(ಅ) ದೇವನ ಪ್ರೀತಿಗೆ ಪಾತ್ರರಾದ ಪ್ರವಾದಿಗಳಾಗಿದ್ದರು. ಅವರಿಬ್ಬರೂ ಮತಪ್ರಚಾರಕ್ಕಾಗಿ ಖಡ್ಗ ಎತ್ತುವುದನ್ನು ಅಥವಾ ಜನರನ್ನು ಯಾವುದೇ ಕಾರಣಕ್ಕೆ ದಾಸರನ್ನಾಗಿ ಮಾಡುವುದನ್ನು ಉಪದೇಶಿಸಿರಲಿಲ್ಲ. ಪವಿತ್ರ ಖುರ್‌ಆನಿನಲ್ಲಿರುವ "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ" ಎಂಬ ದೈವಿಕವಾದ ಸಂದೇಶವನ್ನು ಆ ಇಬ್ಬರು ಪ್ರವಾದಿಗಳೂ ತಮ್ಮ ಸಮುದಾಯದವರಿಗೆ ಕಲಿಸಿದ್ದರು.

ಕೆಲವು ಮುಸ್ಲಿಮ್ ತೀವ್ರವಾದಿಗಳು ಪೋಪ್‌ರವರ ಹೇಳಿಕೆಗೆ ಸೇಡು ತೀರಿಸುವ ರೀತಿಯಲ್ಲಿ ಅವರ ಪ್ರತಿರೂಪವನ್ನು ಸುಡುವ ಮೂಲಕ ಮತ್ತು ಕೆಲವು ಚರ್ಚ್‌ಗಳನ್ನು ಧ್ವಂಸ ಮಾಡುವ ಮೂಲಕ ಪ್ರತಿಕ್ರಿಯೆ ಸೂಚಿಸಿದರು. ಅವರ ವರ್ತನೆಯು ಸರಿಯಾದುದಲ್ಲ. ಅವರು ಪವಿತ್ರ ಖುರ್‌ಆನಿನ ಈ ಕೆಳಗಿನ ಉಪದೇಶಗಳಿಗೆ ಅವಿಧೇಯರಾಗಿ ವರ್ತಿಸಿರುವರು:

* ಬೈಬಲಿನ GENESIS (ಆದಿ ಕಾಂಡ) 9 : 19-27ರಲ್ಲಿ ನೋಹರ ಶಾಪಕ್ಕೆ ಗುರಿಯಾದ ಅವರ ಪುತ್ರನಾದ ಹಾಮ್ ಮತು ಅವನ ಮಗನಾದ ಕಾನಾನನ ಕಥೆ ವಿವರಿಸಲಾಗಿದೆ.

"ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ." (22 : 41)

ಸ್ಪಾನಿಶ್ ಇಂಕ್ವಿಝಿಷನ್ ಕಾಲದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ಮಾಡಿದ ಕ್ರೈಸ್ತರು ಮತ್ತು ಗುಲಾಮಗಿರಿಯನ್ನು ಪ್ರೋತ್ಸಾಹಿಸಿದ ಕ್ರೈಸ್ತರು ಯೇಸು ಕ್ರಿಸ್ತರ ಉಪದೇಶಗಳನ್ನು ಪ್ರತಿನಿಧೀಕರಿಸುವುದಿಲ್ಲ. ಹಾಗೆಯೇ ಭಯೋತ್ಪಾದಕ ಚಟುವಟಿಕೆಗಳಲ್ಲಿ ನಿರತರಾದ ಕೆಲವು ಮುಸ್ಲಿಮರು ಇಸ್ಲಾಮ್ ಧರ್ಮವನ್ನಾಗಲಿ ಅದರ ಪ್ರವಾದಿಯನ್ನಾಗಲಿ ಪ್ರತಿನಿಧೀಕರಿಸುವುದಿಲ್ಲ.

ಇಸ್ಲಾಮ್ ಧರ್ಮದ ಕುರಿತು ಅಧ್ಯಯನ ನಡೆಸಿದ ಮುಸ್ಲಿಮೇತರ ವಿದ್ವಾಂಸರು ಇಸ್ಲಾಮಿನ ಪ್ರವಾದಿಯ ಶಾಂತಿಯುತ, ತರ್ಕಸಮ್ಮತ ಮತ್ತು ಔದಾರ್ಯಪೂರ್ಣ ವ್ಯಕ್ತಿತ್ವದ ಕುರಿತು ಮತ್ತು ಇಸ್ಲಾಮ್ ಧರ್ಮದ ಶಾಂತಿಪ್ರಿಯತೆಯ ಬಗ್ಗೆ ಈ ಕೆಳಗಿನಂತೆ ಪ್ರತಿಕ್ರಿಯೆ ನೀಡಿದ್ದಾರೆ:

ಡಾಕ್ಟರ್ D.W. ಲೈಟ್‌ಝ್ ಹೀಗೆ ಹೇಳುತ್ತಾರೆ:

"All these arguments, advanced to prove that the purpose of jihad was to spread Islam by force, are contradictated by the Qur'an. The Qur'an says that the purpose of jihad is to protect mosques, churches, synagogues and cloisters."

"ಜಿಹಾದ್ ಉದ್ದೇಶಿಸಿರುವುದು ಬಲಾತ್ಕಾರದ ಮೂಲಕ ಇಸ್ಲಾಮ್ ಧರ್ಮವನ್ನು ಹರಡಲಿಕ್ಕಾಗಿದೆ ಎಂಬ ಈ ವಾದಗಳನ್ನು ಖುರ್‌ಆನ್ ಖಂಡಿಸುತ್ತದೆ. ಮಸ್‌ಜಿದ್‌ಗಳನ್ನು, ಚರ್ಚ್‌ಗಳನ್ನು, ಯಹೂದಿ ದೇವಾಲಯಗಳನ್ನು ಮತ್ತು ಸನ್ಯಾಸಿ ಮಠಗಳನ್ನು ಸಂರಕ್ಷಿಸುವುದೇ ಜಿಹಾದಿನ ಉದ್ದೇಶವೆಂದು ಖುರ್‌ಆನ್ ಹೇಳುತ್ತದೆ. (Dr. D.W. Leitzh - ASIATIC QUARTERLY REVIEW - October 1886)

ಸರ್ ಜಾರ್ಜ್ ಬರ್ನಾರ್ಡ್ ಶಾ ಬರೆಯುತ್ತಾರೆ:

"I have always held the religion of Muhammad in high estimation because of its wonderful vitality.It is the only religion which apperars to me to possess that assimilating capacity to the changing phase of existence which can make itself appeal to every age. I have studied him - the wonderful man- and in my opinion far from being an anti-Christ, he must be called the Savior of Humanity."

"ಮುಹಮ್ಮದರ ಧರ್ಮವನ್ನು ಅದರ ಆಶ್ಚರ್ಯಕರ ಚೈತನ್ಯದ ಕಾರಣದಿಂದ ನಾನು ಯಾವಾಗಲೂ ಬಹಳ ಆದರ ಭಾವದಿಂದ ಕಾಣುತ್ತಿದ್ದೇನೆ. ಜೀವಿತದ ಬದಲಾಯಿಸುತ್ತಿರುವ ಸನ್ನಿವೇಶಗಳನ್ನು ಮೈಗೂಡಿಸಿಕೊಳ್ಳುವ ಶಕ್ತಿ ಇರುವ ಏಕಮಾತ್ರ ಧರ್ಮ ಇದೆಂದು ನನಗೆ ತೋರುತ್ತದೆ. ಆದುದರಿಂದ ಅದು ಎಲ್ಲಾ ಕಾಲಘಟ್ಟಗಳಲ್ಲಿಯೂ ಜನರಿಗೆ ಹಿತಕರವಾಗಬಲ್ಲದು. ಆಶ್ಚರ್ಯಕರ ವ್ಯಕ್ತಿತ್ವಹೊಂದಿದ ಆ ಮಹಾನುಭಾವರ ಕುರಿತು ನಾನು ಅಧ್ಯಯನ ಮಾಡಿದ್ದೇನೆ. ಅವರನ್ನು ಕ್ರಿಸ್ತ ವಿರೋಧಿ ಎಂದು ಕರೆಯುವುದಕ್ಕೆ ಪ್ರತಿಯಾಗಿ ಅವರನ್ನು ಮಾನವರ ವಿಮೋಚಕನೆಂದು ಕರೆಯಬೇಕೆಂದು ನಾನು ಅಭಿಪ್ರಾಯಪಡುತ್ತೇನೆ." (Sir George Bernard Shaw - The Genuine Islam - Vol 1 No.8 (1936)

ಡೇ ಲೇಸಿ ಓಲಿಯರೀ ಬರೆಯುತ್ತಾರೆ:

"History makes it clear, however, that the legend of fanatical Muslims sweeping through the world and forcing Islam at the point of sword upon conquered races is one of the most fantastically absurd mythes that historians have repeated."

"ಮತಭ್ರಾಂತ ಮುಸ್ಲಿಮರು ಲೋಕದಾದ್ಯಂತ ಓಡಾಡಿ ಜನಾಂಗಗಳನ್ನು ಸೋಲಿಸಿ ಅವರನ್ನು ಖಡ್ಗ ಬಲದಿಂದ ಇಸ್ಲಾಮ್ ಧರ್ಮಕ್ಕೆ ಮತಾಂತರಿಸಿದರೆಂದು ಚರಿತ್ರೆಗಾರರು ಪುನರಾವರ್ತಿಸಿ ಹೇಳುತ್ತಿರುವ ದಂತ ಕಥೆಗಳು ಅತ್ಯಂತ ಅತಿ ಕಲ್ಪನೆಯ ಅಸಂಬದ್ಧಗಳೆಂದು ಚರಿತ್ರೆಯು ಸ್ಪಷ್ಟಪಡಿಸುತ್ತದೆ." (De Lacy O'Leary - Islam at the Cross roads (London, 1923)

ಎಡ್‌ವರ್ಡ್ ಮೊಂಟೆಟ್ ಹೀಗೆ ಬರೆದರು:

"Islam is a religion that is essentially rationalistic in the widest sense of this term considered etymologically and historically....the teachings of the Prophet, the Qur'an has invariably kept its place as the fundamental starting point, and the dogma of unity of God has always been proclaimed therein with a grandeur a majesty, an invariable purity and with a note of sure conviction, which it is hard to find surpassed outside the pale of Islam...A creed so precise, so stripped of all theological complexities snd consequently so accessible to the ordinary understanding might be expected to possess and does indeed possess a marvelous power of winning its way into the consciences of men."

"ಇಸ್ಲಾಮ್ ಧರ್ಮವು ಅರ್ಥದ ದೃಷ್ಟಿಯಲ್ಲಿಯೂ ಚಾರಿತ್ರಿಕವಾಗಿಯೂ ಮೂಲತಃ ತರ್ಕಬದ್ಧ ಧರ್ಮವಾಗಿದೆ........ ಪ್ರವಾದಿಯ ಉಪದೇಶಗಳು ಮತ್ತು ಖುರ್‌ಆನ್ ಇದಕ್ಕೆ ಬದಲಾಗದ ಮೂಲಭೂತ ಪ್ರಾರಂಭದ ಸ್ಥಾನವನ್ನು ನೀಡಿದೆ. ದೇವನ ಏಕತ್ವದ ಸಿದ್ಧಾಂತವು ಈ ಧರ್ಮದಲ್ಲಿ ಎಷ್ಟು ಭವ್ಯವಾಗಿಯೂ ವೈಭವಪೂರ್ಣವಾಗಿಯೂ ಎಷ್ಟು ಪರಿಶುದ್ಧವಾಗಿಯೂ ಎಷ್ಟು ದೃಢತೆಯಿಂದಲೂ ಪ್ರಕಟಿಸಲ್ಪಟ್ಟಿದೆಯೆಂದರೆ ಇದಕ್ಕಿಂತ ಮಿಗಿಲಾದ ವರ್ಣನೆಯನ್ನು ಇಸ್ಲಾಮಿನ ಸರಹದ್ದಿನ ಹೊರಗೆ ಕಾಣಲಾರೆವು....... ಈ ಧರ್ಮದ ತತ್ವಗಳು ಎಷ್ಟು ನಿಖರವಾಗಿವೆ! ವೇದಾಂತದ ಸಂಕೀರ್ಣತೆಗಳಿಂದ ಎಷ್ಟು ಮುಕ್ತವಾಗಿವೆ! ಅದನ್ನು ಮೈಗೂಡಿಸಿಕೊಳ್ಳಲು ಸಾಮಾನ್ಯ ತಿಳುವಳಿಕೆಯುಳ್ಳವನಿಗೂ ಸಾಧ್ಯವಿದೆ. ಮನುಷ್ಯರ ಮನಸ್ಸಾಕ್ಷಿಯನ್ನು ಗೆಲ್ಲುವ ಶಕ್ತಿ ಅದಕ್ಕಿದೆಯೆಂದು ನಿರೀಕ್ಷಿಸಬಹುದು ಮಾತ್ರವಲ್ಲ ನಿಜವಾಗಿಯೂ ಅದಕ್ಕೆ ಆ ಶಕ್ತಿಯು ಇದೆ."

(Edward Montet - a Propagande Christienne et ses Adversaries Musulmans (Paris, 1890)

ಮಹಾತ್ಮ ಗಾಂಧೀಜಿ ಹೀಗೆ ಹೇಳಿದರು:

"I wanted to know the best of the life of one who holds today an undisputed sway over the hearts of millions of mankind..... I became more than ever convinced that it was not the sword that won a place for Islam in those days in the scheme of life. It was the rigid simplicity, the utter self-effacement of the Prophet the scrupulous regard for pledges, his intense devotion to his friends and followers, his intrepidity, his fearlessness, his absolute trust in God and in his own mission. These and not the sword carried everything before them and surmounted every obstacle. When I closed the second volume (of the Prophet's biography), I was sorry there was not more for me to read of that great life."

"ಮಿಲಿಯಾಂತರ ಜನರ ಹೃದಯಗಳ ಮೇಲೆ ಇಂದು ಸಹ ಆಧಿಪತ್ಯವನ್ನು ಹೊಂದಿರುವ ಮಹಾನುಭಾವರ ಜೀವಿತ ಕಥೆಯ ಉತ್ತಮ ಅಂಶಗಳನ್ನು ತಿಳಿದುಕೊಳ್ಳಲು ನಾನು ಬಯಸಿದೆ....... ಆ ಕಾಲದಲ್ಲಿ ಇಸ್ಲಾಮಿಗೆ ಮಾನವರ ಜೀವಿತದಲ್ಲಿ ಒಂದು ಸ್ಥಾನವನ್ನು ಗಳಿಸಿಕೊಟ್ಟದ್ದು ಖಡ್ಗವಲ್ಲವೆಂದು ನನಗೆ ಹಿಂದಿನ ಕಾಲಕ್ಕಿಂತ ಇಂದು ಹೆಚ್ಚು ಚೆನ್ನಾಗಿ ಮನವರಿಕೆಯಾಯಿತು. ಪ್ರವಾದಿಯ ಕಟ್ಟುನಿಟ್ಟಿನ ಸರಳತೆ, ಪರಿಪೂರ್ಣ ನಿಸ್ವಾರ್ಥತೆ, ಒಪ್ಪಂದ ಪಾಲನೆಯ ಬಗ್ಗೆ ಅತ್ಯಂತ ಹೆಚ್ಚಿನ ಕಾಳಜಿ, ಸ್ನೇಹಿತರು ಮತ್ತು ಅನುಯಾಯಿಗಳ ಬಗ್ಗೆ ಅತ್ಯಂತ ಶ್ರದ್ಧೆ, ಶೌರ್ಯ, ಭಯವಿಲ್ಲದಿರುವಿಕೆ, ದೇವನಲ್ಲಿ ಮತ್ತು ತನ್ನ ದೌತ್ಯದ ಬಗ್ಗೆ ಪರಿಪೂರ್ಣ ನಂಬಿಕೆ ಇವುಗಳೇ ಹೊರತು ಖಡ್ಗವಲ್ಲ ತಮ್ಮ ಮುಂದಿರುವುದನ್ನು ಜಯಿಸಿದ್ದು ಮತ್ತು ಎಲ್ಲಾ ಅಡ್ಡಿ ಆತಂಕಗಳನ್ನು ನಿವಾರಿಸಿದ್ದು. ಪ್ರವಾದಿಯ ಜೀವನ ಚರಿತ್ರೆಯ ಎರಡನೆಯ ಭಾಗವನ್ನು ಓದಿ ಮುಗಿಸಿದಾಗ ಅವರ ಮಹತ್ವಪೂರ್ಣ ಜೀವನದ ಇನ್ನಷ್ಟು ವಿಷಯಗಳನ್ನು ತಿಳಿಯಲು ಸಾಧ್ಯವಾಗದುದರಿಂದ ನನಗೆ ದುಃಖವಾಯಿತು." (YOUNG INDIA, 1924)

## ಉಪಸಂಹಾರ

ಚಕ್ರವರ್ತಿಯು ಇಸ್ಲಾಮಿನ ವಿರುದ್ಧ ಮಾಡಿದ ಎರಡು ಆರೋಪಗಳೂ ನಿರಾಧಾರವೆಂದು ಮೇಲೆ ಸ್ಪಷ್ಟಪಡಿಸಲಾಗಿದೆ. ಪವಿತ್ರ ಖುರ್‌ಆನ್ ಮತ್ತು ಇಸ್ಲಾಮಿಕ ಚರಿತ್ರೆಯನ್ನು ಗಾಢವಾಗಿ ಅಧ್ಯಯನ ಮಾಡದೆ ಮೇಲಿಂದ ಮೇಲೆ ನೋಡಿದರೂ ಸಹ ಇಸ್ಲಾಮ್ ಧರ್ಮವು ಬಲಾತ್ಕಾರದಿಂದ ಮತಾಂತರಗೊಳಿಸುವುದನ್ನು ಸ್ಪಷ್ಟವಾಗಿ ವಿರೋಧಿಸುವುದನ್ನು ಕಾಣಬಹುದಾಗಿದೆ. ಅನೇಕ ಮುಸ್ಲಿಮೇತರ ವಿದ್ವಾಂಸರು ಸಾಕ್ಷ್ಯ ಹೇಳಿದ ಹಾಗೆ ಇಸ್ಲಾಮಿನ ಪ್ರವಾದಿ ಹಿಂಸಾಚಾರದ ವಿರುದ್ಧ ಉಪದೇಶಿಸಿದ ಅನುಪಮ ಜನೋಪಕಾರಿಯಾಗಿದ್ದರು. ಇಸ್ಲಾಮ್ ತರ್ಕಬದ್ಧತೆಯನ್ನು ಅಳವಡಿಸಿಕೊಂಡಿದ್ದು ದೇವಾಸ್ತಿಕ್ಯವನ್ನು ತರ್ಕಬದ್ಧವಾಗಿ ಸಾಬೀತುಗೊಳಿಸುತ್ತದೆ. ಪೋಪ್‌ರವರು ಚಕ್ರವರ್ತಿಯ ವಿಮರ್ಶೆಗಳನ್ನು ಅವಲಂಬಿಸಿರುವುದು ಅವರಿಗೆ ಇಸ್ಲಾಮಿನ ಕುರಿತು ಇರುವ ಅಜ್ಞಾನವನ್ನು ಬಹಿರಂಗಗೊಳಿಸುತ್ತಿದ್ದು ಅದು ಖೇದಕರವಾಗಿದೆ. ಇಸ್ಲಾಮಿನ ನಿಜವಾದ ತತ್ವಗಳನ್ನು ಕಲಿತು ಪೋಪ್‌ರವರು ತನ್ನ ಅನುಯಾಯಿಗಳಿಗೆ ಕಲಿಸಬಹುದಾಗಿದೆ.

ಹೆಚ್ಚಿನ ವಿದ್ಯಾಭ್ಯಾಸ ಪಡೆಯುವುದರ ಮೂಲಕ ಮುಸ್ಲಿಮರ ಮತ್ತು ಕ್ರೈಸ್ತರ ನಡುವೆ ಅರ್ಥವತ್ತಾದ ಮಾತುಕತೆ ನಡೆಸಲು ಸಾಧ್ಯತೆಯು ನಿಜವಾಗಿಯೂ ಉಂಟಾಗಲಿರುವುದು.

(ಅಹ್ಮದಿಯಾ ಗಝೆಟ್ ಯು.ಎಸ್.ಎ. ನವೆಂಬರ್-ಡಿಸೆಂಬರ್ 2006)

ಅನುವಾದ: ಎಂ. ಉಬೈದುಲ್ಲಾ

"ಇನ್ಸಾನಿಯತ್ ಝಿಂದಾಬಾದ್"
"ಮಾನವೀಯತೆ ಚಿರಕಾಲ ಬಾಳಲಿ"

# ನಮಾಝ್ ಮತ್ತು ಆರೋಗ್ಯ

★ ಸಿದ್ದೀಖ್ ಅಶ್ರಫ್ ಅಲಿ

ಅಲ್ಲಾಹನು ಇಸ್ಲಾಮ್ ಧರ್ಮವನ್ನು ಪರಿಪೂರ್ಣವನ್ನಾಗಿ ಮಾಡಿ ಒಂದು ಪರಿಪೂರ್ಣ ಜೀವಿತ ಪದ್ಧತಿಯನ್ನು ಲೋಕದ ಮುಂದಿರಿಸಿರುವನು. ಇದೇ ಕಾರಣದಿಂದ ಇಸ್ಲಾಮ್ ಧರ್ಮವು ಮನುಷ್ಯನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಆವಶ್ಯಕತೆಗಳ ಎಲ್ಲಾ ಅಂಶಗಳನ್ನು ಪರಿಗಣಿಸಿದೆ. ಅದು ಮನುಷ್ಯನ ಅರ್ಹ ಆವಶ್ಯಕತೆಗಳನ್ನು ಯಾವ ರೀತಿಯಲ್ಲೂ ಕಡೆಗಣಿಸಿಲ್ಲ.

ತನ್ನ ಆರಾಧನೆ ಮಾಡುವುದು ಮನುಷ್ಯನನ್ನು ಸೃಷ್ಟಿಸಿದುದರ ಉದ್ದೇಶವೆಂದು ಅಲ್ಲಾಹನು ಹೇಳಿರುವನು ಮತ್ತು ಆಧ್ಯಾತ್ಮಿಕ ಅಭಿವೃದ್ಧಿಯ ಎಲ್ಲಾ ಹಂತಗಳ ಬಗ್ಗೆ ವಿಶದವಾಗಿ ಬೆಳಕು ಚೆಲ್ಲಿರುವನು. ಪರಲೋಕ ಜೀವಿತಕ್ಕೆ ಆದ್ಯತೆ ನೀಡಿ ಅದರ ಗಳಿಕೆಯು ಮಾನವರ ಉದ್ದೇಶ ಲಕ್ಷ್ಯವಾಗಿರಬೇಕೆಂದೂ ಮನುಷ್ಯ ಶರೀರವು ಆತ್ಮದ ಎರಕದ ಅಚ್ಚು ಎಂದೂ ಹೇಳಿರುವನಲ್ಲದೆ ಆರೋಗ್ಯದಿಂದ ಕೂಡಿದ ಆತ್ಮವನ್ನು ಹೊಂದಲು ಆರೋಗ್ಯಪೂರ್ಣ ಶರೀರದ ಆವಶ್ಯಕತೆ ಇದೆ ಎಂದು ಸಹ ಅಲ್ಲಾಹನು ಸೂಚಿಸಿರುವನು. ಇಸ್ಲಾಮ್ ಧರ್ಮವು ಆತ್ಮದ ಆವಶ್ಯಕತೆಗಳನ್ನು ಶರೀರದ ಆವಶ್ಯಕತೆಗಳಿಗಿಂತ ಬೇರೆಯಾಗಿ ಗಣಿಸಿಲ್ಲ. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:- "ಮನುಷ್ಯನ ಸಹಜಗುಣಗಳನ್ನೂ ಶಕ್ತಿಗಳನ್ನೂ ಧರ್ಮಶಾಸ್ತ್ರದ ನಿಯಮ ನಿರ್ದೇಶನಗಳನ್ನು ಅನುಸರಿಸಿ ಉಪಯೋಗಪಡಿಸುವುದಾದರೆ....... ಅವು ಸಹ ನೈತಿಕ ಗುಣಗಳಾಗಿ ಪರಿವರ್ತಿತವಾಗಿ ಆಧ್ಯಾತ್ಮಿಕಾವಸ್ಥೆಯ ಮೇಲೆ ಪ್ರಭಾವವನ್ನು ಬೀರುತ್ತವೆ. ಈ ಕಾರಣದಿಂದಲೇ ಉಪಾಸನಾ ಕರ್ಮಗಳಿಗೂ ದೇವಾರಾಧನೆಗೂ ಏಕಾಗ್ರಚಿತ್ತತೆಗೂ ಬಾಹ್ಯ ಶುಚಿತ್ವವನ್ನೂ ಶಾರೀರಿಕ ನಿರ್ಮಲತೆಯನ್ನೂ ವಿನಯಶೀಲತೆಯನ್ನೂ ಅಂಗವಿನ್ಯಾಸವನ್ನೂ ಪವಿತ್ರ ಖುರ್‌ಆನ್ ಕಡ್ಡಾಯವಾಗಿ ವಿಧಿಸಿರುತ್ತದೆ. ಬಾಹೇಂದ್ರಿಯಗಳ ವಿವಧ ಚಟುವಟಿಕೆಗಳನ್ನೂ ಅವು ಮನುಷ್ಯನ ಆತ್ಮದ ಮೇಲೆ ಉಂಟುಮಾಡುವ ಪ್ರಭಾವದ ಕುರಿತೂ ಗಾಢವಾಗಿ ಆಲೋಚಿಸಿದರೆ, ಮನುಷ್ಯನ ಶರೀರಕ್ಕೂ ಆತ್ಮಕ್ಕೂ ಇರುವ ನಿಕಟ ಸಂಬಂಧವು ವ್ಯಕ್ತವಾಗುತ್ತದೆ. ನಮ್ಮ ಬಾಹ್ಯ ಚಟುವಟಿಕೆಗಳು ಶರೀರಕ್ಕೆ ಸಂಬಂಧಿಸಿವೆಯಾದರೂ ಅವು ಆತ್ಮದ ಸ್ಥಿತಿಯನ್ನು ಸಂಪೂರ್ಣವಾಗಿ ಸ್ವಾಧೀನಪಡಿಸುತ್ತವೆಯೆಂಬುದನ್ನು ಕಾಣಬಹುದು. ಉದಾಹರಣೆಗೆ, ನಾವು ಅಳಲು ಪ್ರಾರಂಭಿಸಿದಾಗ, ಅದು ಕೃತ್ರಿಮವಾಗಿದ್ದರೂ ಸರಿ ಆ ಬಾಷ್ಪಧಾರೆಯಿಂದ ನಿರ್ಗಮಿಸುವ ಜ್ವಾಲ ತರಂಗವು ಶೀಘ್ರವಾಗಿ ಹೃದಯವನ್ನು ತಲಪುತ್ತದೆ. ಹೃದಯವು ಕಣ್ಣುಗಳನ್ನು ಅನುಸರಿಸಿ ಶೋಕಭರಿತವಾಗುತ್ತದೆ. ಕೃತ್ರಿಮವಾಗಿ ನಗುವುದಾದರೂ ಸರಿ, ಆ ಕಾರಣದಿಂದ ಹೃದಯವು ಹರ್ಷಭರಿತವಾಗುತ್ತದೆ. ಇದೇ ಪ್ರಕಾರ ಪ್ರಾರ್ಥನೆಯಲ್ಲಿ ಮಾಡುವ ಶಾರೀರಿಕ ಪ್ರಣಾಮವು ಆತ್ಮದಲ್ಲೂ ಭಕ್ತಿ ವಿನಯಾದಿ ನಮ್ರ ಭಾವಗಳನ್ನು ಉಂಟುಮಾಡುತ್ತದೆ."

(ಇಸ್ಲಾಮೀ ಉಸೂಲ್ ಕೀ ಫಿಲಾಸಫಿ - ಕನ್ನಡ ಭಾಷಾಂತರ: "ಇಸ್ಲಾಮ್ ಧರ್ಮ ತತ್ವಜ್ಞಾನ" - ಪುಟ 7)

ಇಸ್ಲಾಮ್ ಧರ್ಮವು ನಮಾಝ್, ಉಪವಾಸ, ಹಜ್ಜ್ ಮೊದಲಾದ ಧಾರ್ಮಿಕ ಅನುಷ್ಠಾನ ಕರ್ಮಗಳಲ್ಲಿ ಶಾರೀರಿಕ ಕ್ರಿಯೆಗಳನ್ನು ಆಧ್ಯಾತ್ಮಿಕ ಅಭಿವೃದ್ಧಿಗೆ ಸಮನ್ವಯಗೊಳಿಸಿ ಉಪದೇಶಿಸಿದೆ. ಶಾರೀರಿಕವಾಗಿ ಮಾಡುವ ಅನುಷ್ಠಾನ ಕರ್ಮಗಳ ಅಂತಿಮ ಉದ್ದೇಶವು ಆಧ್ಯಾತ್ಮಿಕ ಪ್ರಗತಿಯಾಗಿದೆ. ಹದೀಸಿನಲ್ಲಿ 'ಅತ್ತಹಾರತು ನಿಸ್‌ಫುಲ್ ಈಮಾನ್'- ಶುಚಿತ್ವವು ಸತ್ಯವಿಶ್ವಾಸದ ಅರ್ಧಭಾಗವಾಗಿದೆ ಎಂದು ಹೇಳಲಾಗಿದೆ. ಈ ಹದೀಸು ಸಹ ಮೇಲೆ ಉಲ್ಲೇಖಿಸಿದ ವಿಚಾರವನ್ನು ಪ್ರತಿಪಾದಿಸುತ್ತದೆ.

ಇಂದಿನ ಕಾಲದಲ್ಲಿ ಆರೋಗ್ಯವು ಕೆಟ್ಟುಹೋಗುವುದು ಸಮಾಜದ ಬಹಳ ದೊಡ್ಡ ಸಮಸ್ಯೆಯಾಗಿದೆ. ಪರಿಸರದ ಮಾಲಿನ್ಯವು ಲೋಕವನ್ನು ಗಾಬರಿಗೊಳಿಸಿದೆ. ಆತ್ಮದೊಂದಿಗೆ ಶರೀರವು ರೋಗ ಬಾಧಿತವಾಗಿದೆ. ವಾತಾವರಣದಲ್ಲಿ ಅನೇಕ ರೀತಿಯ ಮಾಲಿನ್ಯಗಳು ಹರಡಿಹೋಗಿವೆ. ಶುಚಿಯಾದ ಉತ್ತಮ ಆಹಾರದ ಕೊರತೆ ಮತ್ತು ಪರಿಸರ ಮಾಲಿನ್ಯದ ಕಾರಣದಿಂದ ಮನುಷ್ಯರು ನಾನಾ ವಿಧ ರೋಗಗಳಿಗೆ ತುತ್ತಾಗಿದ್ದಾರೆ. ರಕ್ತದ ಒತ್ತಡ, ದಢೂತಿತನ, ಕೊಲೆಸ್ಟ್ರೋಲ್‌ಗಳ ವರ್ಧನೆ, ಶ್ವಾಸಕೋಶ ಮತ್ತು ಹೃದಯದ ಕಾಯಿಲೆಗಳಿಂದ ಮನುಷ್ಯರು ದುಃಖಿಸುತ್ತಿದ್ದಾರೆ. ಔಷಧಿಗಳು ಅನೇಕವಿವೆಯಾದರೂ ಜನರು ಹೆಚ್ಚು ರೋಗ ಬಾಧಿತರೂ ಹೆಚ್ಚು ಬಲಹೀನರೂ ಹೆಚ್ಚು ಅನಾರೋಗ್ಯಗ್ರಸ್ತರೂ ಆಗುತ್ತಾ ಇದ್ದಾರೆ. ಈ ರೋಗಗಳಿಗೆ ಅನೇಕ ಕಾರಣಗಳನ್ನು ಹೇಳಲಾಗುತ್ತದೆ. ಅವುಗಳಲ್ಲಿ ಅತಿ ದೊಡ್ಡ ಕಾರಣ ವ್ಯಾಯಾಮದ ಕೊರತೆ ಮತ್ತು ಕಾಲ್ನಡಗೆಯ ಕೊರತೆ. ಎರಡನೇ ಕಾರಣ ಫಾಸ್ಟ್‌ಫುಡ್ ಹೆಚ್ಚಳ ಮತ್ತು ಮಾಂಸಾಹಾರದ ಆಧಿಕ್ಯ. ಮೂರನೇ ಕಾರಣ ಮಾನಸಿಕ ಒತ್ತಡ ಮತ್ತು ಚಿಂತೆ.

ಮೇಲೆ ವಿವರಿಸಲಾದ ರೋಗಗಳಿಗೆ ತುತ್ತಾದವರು ತಮ್ಮ ದೈನಂದಿನ ಕೆಲಸಗಳ ಮಧ್ಯೆ ವ್ಯಾಯಮಕ್ಕೆ ಸಮಯವನ್ನು ಕಂಡುಕೊಳ್ಳಲು ಅಸಮರ್ಥರಾದವರಾಗಿದ್ದಾರೆ. ಇದೇ ಕಾರಣದಿಂದ ಅವರು ಈ ರೋಗಗಳಿಂದ ಹೆಚ್ಚು ಬಾಧಿತರಾಗುತ್ತಾರೆ.

ಅಲ್ಲಾಹನು ಮುಸ್ಲಿಮರಿಗೆ ಐದು ಹೊತ್ತಿನ ನಮಾಝನ್ನು ಕಡ್ಡಾಯಗೊಳಿಸಿದುದು ಬಹಳ ದೊಡ್ಡ ಅನುಗ್ರಹವೇ ಆಗಿದೆ. ನಮಾಝ್ ಮಾಡುವುದರಿಂದ ನಮಾಝ್ ಮಾಡುವವನ ಆತ್ಮಕ್ಕೆ ಲಾಭ ಸಿಗುವುದರ ಜೊತೆಗೆ ಅವರ ಶರೀರಕ್ಕೆ ಸಹ ಸಮತೋಲನದಿಂದ ಕೂಡಿದ ಶಿಷ್ಟಾಚಾರಭರಿತ ಸಮರ್ಪಕವಾದ ಒಂದು ವ್ಯಾಯಾಮವೂ ಆಗುತ್ತದೆ. ಇದರಿಂದ ಶ್ರೀಮಂತರೂ ಬಡವರೂ ಪುರುಷರೂ ಮಹಿಳೆಯರೂ ವೃದ್ಧರೂ ಮಕ್ಕಳೂ ಒಂದೇ ರೀತಿಯ ಲಾಭ ಗಳಿಸಬಹುದಾಗಿದೆ. ಎಲ್ಲರಿಗೂ ಇದು ಅನುಷ್ಠಿಸಲು ಸುಲಭವೂ ಆಗಿದೆ.

ಯೋಗದ ಬಗ್ಗೆ ಆಸಕ್ತಿಯುಳ್ಳ ಒಬ್ಬ ವಿದ್ಯಾವಂತ ಹಿಂದೂ ಮಂಗಳೂರಿನ ತನ್ನ ಒಬ್ಬ ಅಹ್ಮದೀ ಸ್ನೇಹಿತರೊಂದಿಗೆ ಹೀಗೆ ಹೇಳಿದರು:- "ದಿನಂಪ್ರತಿ ನೀವು ಐದು ಸಲ ನಮಾಝ್ ಮಾಡುವುದರಿಂದ ನಿಮಗೆ ಬೇರೆ ವ್ಯಾಯಾಮದ ಆವಶ್ಯಕತೆಯೇ ಇರುವುದಿಲ್ಲ." ಈಗ ಎಲ್ಲಾ ಕಡೆಗಳಿಂದ

ಯೋಗಾಭ್ಯಾಸದ ಕೂಗು ಕೇಳುತ್ತಾ ಇರುತ್ತದೆ. ಆದರೆ ಇಸ್ಲಾಮ್ ಧರ್ಮವು ಹದಿನಾಲ್ಕು ನೂರು ವರ್ಷಗಳ ಹಿಂದೆ ಮನುಷ್ಯನ ಆರೋಗ್ಯದ ಸಂರಕ್ಷಣೆಗಾಗಿ ಒಂದು ಪರಿಪೂರ್ಣ ವ್ಯಾಯಾಮದ ಚೌಕಟ್ಟನ್ನು ಲೋಕದ ಮುಂದಿರಿಸಿದೆ. ಅದು ಮನುಷ್ಯನ ಆಧ್ಯಾತ್ಮಿಕ ಅಭಿವೃದ್ಧಿಗೆ ಸಹಾಯಕವಾಗುವುದರೊಂದಿಗೆ ಅದು ಅವನ ಶಾರೀರಿಕ ಆವಶ್ಯಕತೆಗಳನ್ನೂ ಪೂರೈಸುತ್ತದೆ ಹಾಗೂ ಅವನನ್ನು ಚುರುಕುಳ್ಳವನನ್ನಾಗಿ ಮಾಡುತ್ತದೆ. ಈ ಸಂಗತಿಯನ್ನು ಮನವರಿಕೆ ಮಾಡಿಕೊಳ್ಳಲು ನಮಾಝ್ ಬಗ್ಗೆ ಆಳವಾಗಿ ಚಿಂತಿಸುವುದು ಆವಶ್ಯಕವಾಗಿದೆ.

ನಮಾಝ್‌ಗಾಗಿ ಸಿದ್ಧನಾಗುವ ಮೊದಲು ವುಝು (ಶುಚೀಕರಣ ಕ್ರಿಯೆ) ಮಾಡುವುದು ಕಡ್ಡಾಯವಾಗಿದೆ. ಒಬ್ಬನು ನಮಾಝ್‌ಗಾಗಿ ಸಿದ್ಧನಾಗಲು ತನ್ನನ್ನು ಎಲ್ಲಾ ವಿಧಗಳ ಕೊಳೆಯಿಂದ ಮುಕ್ತನನ್ನಾಗಿ ಮಾಡಿದ ನಂತರ ವುಝು ಮಾಡುತ್ತಾನೆ. ವುಝು ಮಾಡುವವನು ಬಾಯಿ ಮುಕ್ಕಳಿಸುತ್ತಾನೆ. ಮೂಗಿನೊಳಗೆ ನೀರು ಹಾಯಿಸಿ ತೊಳೆಯುತ್ತಾನೆ. ಮುಖ ತೊಳೆಯುತ್ತಾನೆ. ಕೈಕಾಲುಗಳನ್ನೂ ತೊಳೆಯುತ್ತಾನೆ. ಇವೆಲ್ಲಾ ಮನುಷ್ಯನ ಆರೋಗ್ಯದ ಮೇಲೆ ಬಹಳ ಉತ್ತಮ ಪ್ರಭಾವವನ್ನುಂಟುಮಾಡುತ್ತವೆ. ನಮಾಝ್ ಮಾಡಲು ಮಸ್‌ಜಿದ್ ಕಡೆಗೆ ನಡೆದು ಹೋಗುವಾಗಲೂ ಆತನು ಒಂದು ರೀತಿಯ ವ್ಯಾಯಾಮ ಮಾಡುತ್ತಿದ್ದು ಅದು ಅವನ ಆರೋಗ್ಯಕ್ಕೆ ಲಾಭದಾಯಕವಾಗುತ್ತದೆ.

ನಾನು ಓದುಗರಿಗೆ ಒಂದು ವಿಷಯವನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ನಾನು ಈ ಲೇಖನದಲ್ಲಿ ನಮಾಝ್‌ನಿಂದ ದೊರಕುವ ಆಧ್ಯಾತ್ಮಿಕ ಲಾಭಗಳ ಕುರಿತು ಪ್ರತಿಪಾದಿಸಲು ಉದ್ದೇಶಿಸಿಲ್ಲ. ನಮಾಝ್‌ನಿಂದ ಅಗಣಿತ ಆಧ್ಯಾತ್ಮಿಕ ಲಾಭಗಳು ದೊರೆಯುತ್ತವೆ. ಆದರೆ ನಾನು ಈ ಲೇಖನದಲ್ಲಿ ನಮಾಝ್‌ನಿಂದ ಲಭಿಸುವ ಶಾರೀರಿಕ ಲಾಭಗಳ ಬಗ್ಗೆ ಜನರ ಗಮನವನ್ನು ಸೆಳೆಯಲು ಬಯಸುತ್ತೇನೆ. ಮುಸ್ಲಿಮರೂ ಮುಸ್ಲಿಮೇತರರೂ ನಮಾಝಿನ ಬಾಹ್ಯ ಒಳಿತುಗಳ ಕುರಿತು ತಿಳಿದುಕೊಂಡು ಅದರ ಆಧ್ಯಾತ್ಮಿಕ ಅನುಗ್ರಹಗಳ ಲಾಭ ಪಡೆಯಬಹುದಾಗಿದೆ.

ನೀವು ನಮಾಝ್ ಅನುಷ್ಠಾನ ಕ್ರಿಯೆಗಳ ಕುರಿತು ಗಮನವಿಟ್ಟು ಯೋಚಿಸಿರಿ. ಅದರಲ್ಲಿ ಅಡಕವಾಗಿರುವ ನಿಂತುಕೊಳ್ಳುವಿಕೆ, ಬಾಗುವಿಕೆ, ಸಾಷ್ಟಾಂಗ ಪ್ರಣಾಮ ಮಾಡುವಿಕೆ, ಮಧ್ಯೆ ಕುಳಿತುಕೊಳ್ಳುವಿಕೆ ಇವುಗಳ ಬಗ್ಗೆ ಚಿಂತಿಸಿರಿ. ಮನುಷ್ಯನನ್ನು ಸೃಷ್ಟಿಸಿರುವ ಅಲ್ಲಾಹನು ಮನುಷ್ಯನ ಸೂಕ್ಷ್ಮಾತಿ ಸೂಕ್ಷ್ಮ ನರನಾಡಿಗಳನ್ನು ಬಲ್ಲವನಾಗಿದ್ದಾನೆ. ಅವನು ಮನುಷ್ಯನಿಗೆ ಎಂತಹ ಆರಾಧನೆಯ ಕ್ರಮವನ್ನು ಕಡ್ಡಾಯಗೊಳಿಸಿರುವನೆಂದರೆ ಅದು ಅತ್ಯಂತ ಯೋಗ್ಯವೂ ಆರೋಗ್ಯವರ್ಧಕವೂ ಆಗಿದ್ದು ಅದು ಮನುಷ್ಯನ ಆಧ್ಯಾತ್ಮಿಕ ದಾಹವನ್ನು ಹೋಗಲಾಡಿಸುವುದರೊಂದಿಗೆ ಅವನ ಶರೀರಕ್ಕೆ ಉತ್ತಮ ವ್ಯಾಯಾಮವನ್ನು ನೀಡಿ ಅವನನ್ನು ಆರೋಗ್ಯಭರಿತ ಸಮಾಜದ ಒಬ್ಬ ಸದಸ್ಯನನ್ನಾಗಿ ಮಾಡುತ್ತದೆ.

ನಮಾಝ್ ಮಾಡುವವನು ಮೊತ್ತ ಮೊದಲು ನೇರವಾಗಿ ನಿಲ್ಲುತ್ತಾನೆ. ಅನಂತರ ವಿವಿಧ ಅನುಷ್ಠಾನ ಕರ್ಮಗಳನ್ನು ಮಾಡುವಾಗ ತನ್ನ ಮೊಣಕಾಲುಗಳನ್ನೂ ಮೊಣಕೈಗಳನ್ನೂ ಮಡಚುತ್ತಾನೆ ಮತ್ತು ನೇರವಾಗಿ ಮಾಡುತ್ತಾನೆ. ಅವನ ಸೊಂಟವೂ ಕೈಕಾಲುಗಳೂ ಸಾಕಷ್ಟು ವ್ಯಾಯಾಮ ಪಡೆಯುತ್ತವೆ. ಸಾಷ್ಟಾಂಗ ಪ್ರಣಾಮ ಮಾಡುವಾಗ ತಲೆಯಿಂದ ಮೊದಲುಗೊಂಡು ಪಾದಗಳ ತನಕ ಪ್ರತಿಯೊಂದು ಅಂಗವೂ ವ್ಯಾಯಾಮ ಕ್ರಿಯೆಯಲ್ಲಿ ಪಾಲುಗೊಳ್ಳುತ್ತದೆ. ತಲೆ, ಬೆನ್ನು ಮತ್ತಿತರ ಅಂಗಗಳು ಸಹ ಇದರಲ್ಲಿ ಸೇರುತ್ತವೆ. ಕಾಲು ಮತ್ತು ಕೈಗಳ ಬೆರಳುಗಳನ್ನು ಸಹ ನಮಾಝ್ ಮಾಡುವಾಗ ಮಡಚಲಾಗುತ್ತದೆ ಮತ್ತು ನೇರವಾಗಿ ಮಾಡಲಾಗುತ್ತದೆ. ನಮಾಝ್ ಮಾಡುವಾಗ ಪ್ರತಿಯೊಂದು ಅಂಗವಿನ್ಯಾಸದ ಸಂದರ್ಭದಲ್ಲಿ ಮಾಡುವ ಪ್ರಾರ್ಥನೆಗಳು ಅನುಯೋಜ್ಯವಾದೊಂದು ಬಿಡುಸಮಯವನ್ನು ನೀಡುತ್ತಿದ್ದು ನಮಾಝನ್ನು ನಿಧಾನವಾಗಿ ಅನುಷ್ಠಿಸಲು ಸಹಾಯಕವಾಗುತ್ತವೆ. ಬೇಗ ಬೇಗನೇ ನಮಾಝ್ ಅನುಷ್ಠಿಸದೆ ಇರಲು ಮತ್ತು ನಮಾಝಿನ ಘನತೆಯನ್ನು ಕಾಪಾಡಲು ಇದು ಸಹಾಯಕವಾಗಿದೆ.

ನಮಾಝನ್ನು ಲಕ್ಷ್ಯವಿಟ್ಟು ಅನುಷ್ಠಿಸಲು ಮತ್ತು ವಿವಿಧ ಯೋಚನೆಗಳು ನಮಾಝ್ ಮಾಡುವವನನ್ನು ವಿಚಲಿತನನ್ನಾಗಿ ಮಾಡದಿರಲು ಸಾಕಷ್ಟು ಗಮನ ನೀಡಲಾಗಿದೆ.

ನಮಾಝ್ ಮಾಡುವವನು ಆರಂಭದಲ್ಲಿ "ನಾನು ನನ್ನ ಗಮನವನ್ನು ಭೂಮ್ಯಾಕಾಶಗಳ ಸೃಷ್ಟಿಕರ್ತನ ಕಡೆಗೆ ತಿರುಗಿಸುತ್ತೇನೆ" ಎಂದು ಸೂಚಿಸುವ ಪ್ರಾರ್ಥನೆಯೊಂದಿಗೆ ಆರಂಭಿಸುತ್ತಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: "ವೈಲುನ್ ಲಿಲ್ ಮುಸಲ್ಲೀನಲ್ಲಧೀನ ಹುಮ್ ಅನ್ ಸಲಾತಿಹಿಮ್ ಸಾಹೂನ್" - ಅಂತು, ತಮ್ಮ ಪ್ರಾರ್ಥನೆಯ ಬಗ್ಗೆ ಶ್ರದ್ಧೆ ಇಲ್ಲದೆ ಪ್ರಾರ್ಥಿಸುವವರಿಗೆ ವಿನಾಶ.

ಹಝ್‌ರತ್ ಅಬೂ ಹುರೈರ ಹೀಗೆ ವರದಿಮಾಡಿದ್ದಾರೆ: ಒಮ್ಮೆ ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಮಸ್‌ಜಿದ್‌ನಲ್ಲಿ ಕುಳಿತಿದ್ದಾಗ ಒಬ್ಬ ವ್ಯಕ್ತಿ ಬಂದು ನಮಾಝ್ ಮಾಡಿದ ನಂತರ ಹಝ್‌ರತ್ ಪೈಗಂಬರರ(ಸ) ಸಮೀಪಕ್ಕೆ ಹೋಗಿ ಸಲಾಮ್ ಹೇಳಿದರು. ಹಝ್‌ರತ್ ಪೈಗಂಬರ್‌ರವರು(ಸ) ಸಲಾಮ್‌ಗೆ ಉತ್ತರ ಹೇಳಿದ ನಂತರ "ನೀವು ಹೋಗಿ ಪುನಃ ನಮಾಝ್ ಮಾಡಿರಿ. ನಿಮ್ಮ ನಮಾಝ್ ಅನುಷ್ಠಾನ ಪೂರ್ಣವಾಗಿಲ್ಲ" ಎಂದರು. ಆ ವ್ಯಕ್ತಿ ಎರಡನೆಯ ಬಾರಿ ನಮಾಝ್ ಮಾಡಿದರು. ಅನಂತರ ಹಝ್‌ರತ್ ಪೈಗಂಬರ್‌ರವರಿಗೆ(ಸ) ಸಲಾಮ್ ಹೇಳಿದಾಗ ಹಝ್‌ರತ್ ಪೈಗಂಬರ್‌ರವರು(ಸ) ಪುನಃ ನಮಾಝ್ ಮಾಡಲು ಆ ವ್ಯಕ್ತಿಯೊಂದಿಗೆ ಹೇಳಿದರು. ಮೂರನೆ ಸಲ ನಮಾಝ್ ಮಾಡಿದ ನಂತರ ಆ ವ್ಯಕ್ತಿ ಹೇಳಿದರು: "ತಮ್ಮನ್ನು ಪ್ರವಾದಿಯಾಗಿ ನೇಮಿಸಿದ ಅಲ್ಲಾಹನಾಣೆ, ನನಗೆ ಇದಕ್ಕಿಂತಲೂ ಉತ್ತಮವಾಗಿ ನಮಾಝ್ ಮಾಡಲು ತಿಳಿದಿಲ್ಲ. ಆದುದರಿಂದ ತಾವು ನನಗೆ ನಮಾಝ್ ಮಾಡುವ ಸರಿಯಾದ ರೀತಿ ಹೇಳಿಕೊಡಿರಿ." ಆಗ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಹೇಳಿದರು: "ನೀವು ನಮಾಝ್‌ಗಾಗಿ ನಿಲ್ಲುವಾಗ ಅಲ್ಲಾಹು ಅಕ್‌ಬರ್ ಎಂದು ಹೇಳಿರಿ. ಅನಂತರ ಸೂರತುಲ್ ಫಾತಿಹ ಮತ್ತು ಪವಿತ್ರ ಖುರ್‌ಆನಿನ ನಿಮಗೆ ತಿಳಿದಿರುವ ವಚನಗಳನ್ನು ಓದಿರಿ. ಅನಂತರ ಬಾಗಿ ಪ್ರಾರ್ಥಿಸಿರಿ. ಅನಂತರ ನೇರವಾಗಿ ನಿಲ್ಲಿರಿ. ಅನಂತರ ಸಾವಧಾನವಾಗಿ ಸಾಷ್ಟಾಂಗ ಪ್ರಣಾಮ ಮಾಡಿರಿ. ಅನಂತರ ಎದ್ದು ಸರಿಯಾಗಿ ಕುಳಿತುಕೊಳ್ಳಿರಿ. ಅನಂತರ ಎರಡನೆಯ ಸಾಷ್ಟಾಂಗ ಪ್ರಣಾಮ ಮಾಡಿರಿ. ಇದೇ ರೀತಿ

ನಮಾಝುನ್ನು ನಿಧಾನವಾಗಿ ಶ್ರದ್ಧೆಯಿಂದ ಅನುಷ್ಠಿಸಿರಿ." (ಬುಖಾರಿ)

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ನಮಾಝುನ್ನು ಹೇಗೆ ಅನುಷ್ಠಿಸುತ್ತಿದ್ದರು ಎಂಬುದರ ಬಗ್ಗೆ ಅವರ ಪತ್ನಿ ಹಝ್‌ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೀಗೆ ಹೇಳುತ್ತಾರೆ:

"ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಅಲ್ಲಾಹು ಅಕ್‌ಬರ್ ಎಂದು ಹೇಳಿ ನಮಾಝುನ್ನು ಪ್ರಾರಂಭಿಸುತ್ತಿದ್ದರು. ಅವರು ಸೂರತುಲ್ ಫಾತಿಹ ಮತ್ತು ಇತರ ಪವಿತ್ರ ಖುರ್‌ಆನ್ ವಚನಗಳನ್ನು ಓದಿದ ಬಳಿಕ ಬಾಗುವಾಗ ತಲೆಯನ್ನು ಮೇಲೆತ್ತುತ್ತಲೂ ಇರಲಿಲ್ಲ ಬಗ್ಗಿಸುತ್ತಲೂ ಇರಲಿಲ್ಲ. ಅವರು ತಲೆಯನ್ನು ಬೆನ್ನಿಗೆ ಸಮವಾಗಿ ಇರಿಸುತ್ತಿದ್ದರು. ಬಾಗಿದ ಅನಂತರ ನೇರವಾಗಿ ನಿಲ್ಲುತ್ತಿದ್ದರು. ಅನಂತರ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದರು. ಸಾಷ್ಟಾಂಗ ಪ್ರಣಾಮದ ನಂತರ ಎದ್ದು ಸರಿಯಾಗಿ ಕುಳಿತುಕೊಳ್ಳುತ್ತಿದ್ದರು. ಅನಂತರ ಎರಡನೆಯ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದರು. ಎರಡು ರಕ್‌ಅತ್‌ಗಳ ನಂತರ ತಶಹ್ಹುದ್‌ಗಾಗಿ ಕುಳಿತುಕೊಳ್ಳುತ್ತಿದ್ದರು. ಆಗ ಅವರು ಬಲಗಾಲಿನ ಪಾದವನ್ನು ನೇರವಾಗಿ ಇರಿಸಿ ಎಡಗಾಲಿನ ಪಾದವನ್ನು ಚಾಚಿ ಅದರ ಮೇಲೆ ಕುಳಿತುಕೊಳ್ಳುತ್ತಿದ್ದರು. ಶೈತಾನನ ಹಾಗೆ ಕುಳಿತುಕೊಳ್ಳುವುದನ್ನು, ಎಂದರೆ ಹಿಮ್ಮಡಿಗಳ ಮೇಲೆ ಕುಳಿತುಕೊಳ್ಳುವುದನ್ನು ಅವರು ತಡೆಯುತ್ತಿದ್ದರು. ಸಾಷ್ಟಾಂಗ ಪ್ರಣಾಮ ಮಾಡುವಾಗ ಮುಂಗೈಗಳನ್ನು ನಾಯಿ ಮಲಗುವಾಗ ನೆಲಕ್ಕೆ ಚಾಚುವಂತೆ ನೆಲಕ್ಕೆ ಚಾಚಬಾರದೆಂದು ಹೇಳುತ್ತಿದ್ದರು. ಕೊನೆಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹ್ ಎಂದು ಹೇಳಿ ನಮಾಝುನ್ನು ಮುಕ್ತಾಯಗೊಳಿಸುತ್ತಿದ್ದರು." (ಮುಸ್‌ನದ್ ಅಹ್ಮದ್)

ಇಂದಿನ ಕಾಲದಲ್ಲಿ ಟೆಲಿವಿಷನ್ ಮತ್ತು ಪತ್ರಿಕೆಗಳಲ್ಲಿ ವಿವಿಧ ರೋಗ ಪರಿಹಾರ ಮಾರ್ಗವಾಗಿ ವ್ಯಾಯಾಮಗಳನ್ನು ಮಾಡಲು ಕಲಿಸಲಾಗುತ್ತಿದೆ. ವಿವಿಧ ರೀತಿಯ ಯೋಗಾಸನಗಳ ಚಿತ್ರಗಳು ವೈದ್ಯಕೀಯ ಪತ್ರಿಕೆಗಳಲ್ಲಿ ಮುದ್ರಿತವಾಗುತ್ತಿವೆ. ಯೋಗಾಭ್ಯಾಸಗಳ ಬಗ್ಗೆ ಬಹಳ ಹೆಚ್ಚು ಹೆಚ್ಚಾಗಿ ಚರ್ಚಿಸಲಾಗುತ್ತಿದೆ. ಹೊಸ ಹೊಸ ರೀತಿಯ ಜೀವಿತ ವಿಧಾನಗಳನ್ನು ಸಹ ಕಲಿಸಲಾಗುತ್ತಿದೆ.

ಇವುಗಳಲ್ಲಿ ಹಲವು ಎಲ್ಲರಿಗೂ ಅನುಷ್ಠಿಸಲು ಅಸಾಧ್ಯವಾದುವುಗಳಾಗಿವೆ. ಅವುಗಳಲ್ಲಿ ಕೆಲವು ಅಪಹಾಸ್ಯಕರವೂ ಆಗಿವೆ. ಉದಾಹರಣೆಗೆ, ಹೊಟ್ಟೆಯನ್ನು ವೃತ್ತಾಕಾರದಲ್ಲಿ ಚಲಾಯಿಸುವುದು, ಎದೆಯನ್ನು ಬಡಬಡಿಸುವಂತೆ ಮಾಡುವುದು, ತುಂಬಾ ನೀರು ಕುಡಿದ ನಂತರ ಒಂದು ಸಪೂರವಾದ ಪೈಪನ್ನು ಬಾಯಿಯ ಮೂಲಕ ಹೊಟ್ಟೆಯೊಳಗೆ ಇಳಿಸಿ ನೀರನ್ನು ಹೊರ ತೆಗೆಯುವುದು, ತಲೆಯ ಮೇಲೆ ನಿಲ್ಲುವುದು ಇತ್ಯಾದಿ.

ಮೇಲಿನ ಈ ಕ್ರಿಯೆಗಳ ಉಪಯುಕ್ತತೆಯನ್ನು ನಿರಾಕರಿಸದಿದ್ದರೂ ಸಹ ಈ ಕ್ರಿಯೆಗಳನ್ನು ಸುಶಿಕ್ಷಿತ, ನಾಗರಿಕ ಸಮಾಜದ ಎಲ್ಲಾ ವಿಭಾಗದ ಜನರು ಅಂಗೀಕರಿಸಲಾರರು. ಮಹಿಳೆಯರು, ಮಕ್ಕಳು, ವೃದ್ಧರು ಮತ್ತು ರೋಗಿಗಳು ಸೇರಿರುವ ಸಮಾಜದ ಎಲ್ಲಾ ಜನರು ಈ ಕ್ರಿಯೆಗಳನ್ನು ಅನುಷ್ಠಾನಕ್ಕೆ ತರಲು ಸಮರ್ಥರಾಗಲಾರರು.

ಹತ್ತು ಲಕ್ಷಕ್ಕಿಂತಲೂ ಹೆಚ್ಚು ಪ್ರತಿಗಳನ್ನು ಮುದ್ರಿಸುತ್ತಿರುವ ಕೇರಳದ "ಮಾತೃಭೂಮಿ" ದೈನಿಕದಲ್ಲಿ ಇತ್ತೀಚೆಗೆ, ಡಾಕ್ಟರ್ ಕೆ. ಆರ್. ರಮಣನ್ ನಂಬೂದಿರಿ ಬರೆದ ಒಂದು ಲೇಖನ ಪ್ರಕಟವಾಗಿತ್ತು. ಆ ಲೇಖನದ ಸಾರಾಂಶ ಹೀಗಿದೆ:- ಅಮೇರಿಕದ ಮಿಸ್ಸೋರಿ ಸ್ಟೇಟ್ ಯುನಿವರ್ಸಿಟಿಯಲ್ಲಿ ಏಳು ಪುರುಷರ ಮತ್ತು ಹನ್ನೊಂದು ಮಹಿಳೆಯರ ಒಂದು ತಂಡದ ಮೇಲೆ ಒಂದು ಪ್ರಯೋಗ ಮಾಡಲಾಯಿತು. ಮೊದಲು ಕೆಲವು ದಿನಗಳಲ್ಲಿ ಅವರಿಗೆ ಅರ್ಧಗಂಟೆಗಳ ಕಾಲ ವ್ಯಾಯಾಮವನ್ನು ಮಾಡಿಸಲಾಯಿತು. ವ್ಯಾಯಾಮದ ನಂತರ ಪ್ರತಿದಿನ ರಕ್ತಪರೀಕ್ಷೆ ನಡೆಸಲಾಯಿತು. ಕೆಲವು ದಿನಗಳ ನಂತರ ಅವರಿಗೆ ದಿನದ ವಿವಿಧ ಸಮಯಗಳಲ್ಲಿ ಹತ್ತು ನಿಮಿಷಗಳ ವ್ಯಾಯಾಮ ಮೂರು ಸಲ ಮಾಡಿಸಲಾಯಿತು. ಪ್ರತಿ ಹತ್ತು ನಿಮಿಷಗಳ ನಂತರ ರಕ್ತಪರೀಕ್ಷೆ ಮಾಡಲಾಯಿತು. ಅನಂತರ ಕೆಲವು ದಿವಸಗಳ ತನಕ ಅವರಿಗೆ ಯಾವುದೇ ವ್ಯಾಯಾಮ ಮಾಡಿಸದೆ ಅನಂತರ ರಕ್ತದ ಪರೀಕ್ಷೆ ನಡೆಸಲಾಯಿತು. ಈ ಮೂರು ರೀತಿಯ ರಕ್ತ ಪರೀಕ್ಷೆಗಳಿಂದ ಹೀಗೆ ತಿಳಿದು ಬಂತು: ಹತ್ತು ಹತ್ತು ಮಿನಿಟುಗಳ ಕಾಲ ದಿನದ ಬೇರೆ ಬೇರೆ ಸಮಯಗಳಲ್ಲಿ ಮಾಡುವ ವ್ಯಾಯಾಮವು ಒಮ್ಮೆಯೇ ಮೂವತ್ತು ಮಿನಿಟುಗಳ ಕಾಲ ಮಾಡುವ ವ್ಯಾಯಾಮಕ್ಕಿಂತ ಅಥವಾ ವ್ಯಾಯಾಮ ಮಾಡದೆ ಇರುವುದಕ್ಕಿಂತ ಆರೋಗ್ಯಕ್ಕೆ ಹೆಚ್ಚು ಉತ್ತಮವಾಗಿದೆ ಮತ್ತು ಆರೋಗ್ಯಕ್ಕೆ ಹಾನಿಕಾರಕವಾದ ಕೊಲೆಸ್ಟ್ರೋಲನ್ನು ಕರಗಿಸಲು ಹೆಚ್ಚು ಉಪಯುಕ್ತವಾಗಿದೆ.

ನೀವು ಈ ಪ್ರಯೋಗವನ್ನು ನಮಾಝಿಗೆ ಅನ್ವಯಿಸಿ ನೋಡಿರಿ. ಮುಸ್ಲಿಮರು ದಿನಂಪ್ರತಿ ಐದು ಸರ್ತಿ ನಮಾಝ್ ಮಾಡುತ್ತಾರೆ. ಪ್ರತಿ ನಮಾಝಿಗಾಗಿ ಸರಾಸರಿ ಹತ್ತು ನಿಮಿಷ ಬೇಕಾಗುತ್ತದೆ. ನೀವು ಅಲ್ಲಾಹನು ದಯಪಾಲಿಸಿದ ಅನುಗ್ರಹವನ್ನು ಸ್ಮರಿಸಿರಿ. ಅವನು ನಮಗೆ ನಮಾಝುನ್ನು ಕಡ್ಡಾಯಗೊಳಿಸಿ ನಮಗೆ ಆಧ್ಯಾತ್ಮಿಕ ಲಾಭವನ್ನು ದಯಪಾಲಿಸುವುದರೊಂದಿಗೆ ನಮ್ಮ ಆರೋಗ್ಯಕ್ಕೂ ಲಾಭವನ್ನುಂಟು ಮಾಡಿರುವನು.

ಮುಸ್ಲಿಮರ ಇಂದಿನ ಸ್ಥಿತಿ ಉರ್ದು ಗಾದೆ "ಘರ್ ಕೀ ಮುರ್ಗೀ ದಾಲ್ ಬರಾಬರ್" - ಮನೆಯ ಕೋಳಿ ಬೇಳೆಗೆ ಸಮ ಎಂಬಂತಿದೆ ಅಥವಾ ಅವರ ಸ್ಥಿತಿ ಇನ್ನೊಂದು ಉರ್ದು ಗಾದೆ "ಬಗಲ್ ಮೇಂ ಬಚ್ಚಾ ಔರ್ ಬಾಝಾರ್ ಮೇಂ ಡಂಡೋರ" - ಕಂಕುಳಲ್ಲಿ ಮಗು, ಆದರೆ ಪೇಟೆಯಲ್ಲಿ ಡಂಗುರ ಎಂಬಂತಿದೆ. ಅವರು ತಮ್ಮ ಅತ್ಯುತ್ತಮವಾದ ನಮಾಝುನ್ನು ಬಿಟ್ಟು ಡೊಂಬರಾಟಗಳನ್ನೂ ಜಾಲ ವಿದ್ಯೆಗಳನ್ನೂ ಮೋಹಿಸುವವರಾಗಿದ್ದಾರೆ ಮತ್ತು ತಮ್ಮನ್ನು ಬಹಳ ಆಧುನಿಕರೆಂದು ಭಾವಿಸುತ್ತಾರೆ.

ನನ್ನ ಸ್ವಂತ ಅಭಿಪ್ರಾಯವೇನೆಂದರೆ. ನಮಾಝಿನ ಅನುಷ್ಠಾನ ಕ್ರಿಯೆಗಳನ್ನು ಎಕ್ಸ್‌ರೇ ಮತ್ತು ಸ್ಕ್ಯಾನಿಂಗ್ ಯಂತ್ರಗಳ ಮೂಲಕ ತಪಾಸಣೆ ಮಾಡಿದರೆ ಶಾರೀರಿಕ ವ್ಯಾಯಾಮದ ಎಂತಹ ಚಿತ್ರಣ ದೊರಕುವುದೆಂದರೆ ಅದಕ್ಕಿಂತ ಉತ್ತಮವಾದ ಆರೋಗ್ಯದಾಯಕವಾದ ಮತ್ತು ಎಲ್ಲರಿಗೂ ಅನುಷ್ಠಿಸಲು ಸಾಧ್ಯವಾಗುವಂತಹ ಬೇರೊಂದು ಶಾರೀರಿಕ ವ್ಯಾಯಾಮ ಇಲ್ಲವೆಂದು ಸಾಬೀತಾಗುವುದು. ನಮಾಝಿನ ಸರಿಯಾದ ಮಹತ್ವವನ್ನು ಮನಗಾಣಲು ಅಲ್ಲಾಹನು ನಮಗೆಲ್ಲರಿಗೂ ಸೌಭಾಗ್ಯವನ್ನು ದಯಪಾಲಿಸಲಿ.

◆◆◆

ಮಕ್ಕಳ ಪಂಕ್ತಿ

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಮಹಾಮಹಿಮ ಅಲ್ಲಾಹ್

ಅಲ್ಲಾಹ್ ಒಬ್ಬನೇ. ಅವನು ಎಲ್ಲ ಗುಣಗಳ ಮತ್ತು ಪರಿಪೂರ್ಣತೆಗಳ ಒಡೆಯನು. ಅವನಿಗೆ ಯಾರೂ ಸರಿಸಾಟಿ ಇಲ್ಲ. ಅವನಿಗೆ ಯಾರ ಆವಶ್ಯಕತೆಯೂ ಇಲ್ಲ. ಅವನೂ ಯಾರನ್ನೂ ಆಶ್ರಯಿಸಿಕೊಂಡಿಲ್ಲ. ಎಲ್ಲರೂ ಅವನ ಆಶ್ರಯವನ್ನು ಆಶಿಸುವವರಾಗಿದ್ದಾರೆ. ಅವನಿಗೆ ಯಾವ ಪುತ್ರನೂ ಇಲ್ಲ. ಅವನು ಯಾರ ಪುತ್ರನೂ ಅಲ್ಲ. ಅವನ ಹಾಗೆ ಬೇರೆ ಯಾರೂ ಇಲ್ಲ. ಅವನಿಗೆ ಯಾವ ಪತ್ನಿಯೂ ಇಲ್ಲ. ಅವನೇ ನಮ್ಮ ಪಾಲನೆ ಪೋಷಣೆ ಮಾಡುತ್ತಿದ್ದಾನೆ. ಅವನೇ ನಮಗೆ ಆಹಾರ ನೀಡುತ್ತಾನೆ. ಅವನು ನೋಡುತ್ತಿದ್ದಾನೆ. ಆದರೆ ಅವನಿಗೆ ಕಣ್ಣುಗಳ ಆವಶ್ಯಕತೆ ಇಲ್ಲ. ಅವನು ಮಾತನಾಡುತ್ತಾನೆ. ಆದರೆ ಅವನಿಗೆ ನಾಲಗೆಯ ಆವಶ್ಯಕತೆ ಇಲ್ಲ. ಅವನು ಆಲಿಸುತ್ತಾನೆ. ಅವನು ತನ್ನ ದಾಸರ ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ. ಅವನು ಯಾವಾಗಲೂ ಜೀವಂತವಾಗಿಯೇ ಇರುತ್ತಾನೆ. ಅವನು ಅನಾದ್ಯನೂ ಅನಂತನೂ ಆಗಿದ್ದಾನೆ. ಯಾವ ವಸ್ತುಗಳು ನೆಲೆನಿಂತಿರುವವೋ ಅವುಗಳು ಅಲ್ಲಾಹನ ಆಜ್ಞೆಗಳ ಪ್ರಕಾರವೇ ನೆಲೆನಿಂತಿವೆ. ಅವನು ನಿದ್ರಿಸುವುದಿಲ್ಲ. ಅವನು ತೂಕಡಿಸುವುದಿಲ್ಲ. ಅವನು ಭೂಮಿ ಮತ್ತು ಆಕಾಶಗಳ ಒಡೆಯನಾಗಿರುವನು. ಅವನು ಅವುಗಳನ್ನು ಸಂರಕ್ಷಿಸುತ್ತಾನೆ. ಅವನು ಗೋಚರ ಮತ್ತು ಅಗೋಚರವಾಗಿರುವ ಎಲ್ಲ ಸಂಗತಿಗಳನ್ನು ಬಲ್ಲವನಾಗಿದ್ದಾನೆ. ಯಾವುದೇ ಅಣು ಸಹ ಅವನ ಜ್ಞಾನಕ್ಕೆ ಅಗೋಚರವಲ್ಲ. ಅವನು ಎಲ್ಲ ವಸ್ತುಗಳನ್ನು ಸೃಷ್ಟಿಸಿದವನಾಗಿದ್ದಾನೆ. ಯಾವುದೇ ಸಂಗತಿ ಅವನಿಗೆ ಅಸಾಧ್ಯವಲ್ಲ. ಸೂರ್ಯ ಚಂದ್ರರನ್ನೂ ಭೂಮಿ ಆಕಾಶಗಳನ್ನೂ ಅವನು ನಮ್ಮ ಉಪಯೋಗಕ್ಕಾಗಿ ಸೃಷ್ಟಿಸಿರುವನು. ಪ್ರಾಣಿಗಳನ್ನು ನಮ್ಮ ಸೌಕರ್ಯಕ್ಕಾಗಿಯೂ ನೀರನ್ನು ನಮಗೆ ಕುಡಿಯಲಿಕ್ಕಾಗಿಯೂ ಧಾನ್ಯಗಳನ್ನು ಮತ್ತು ಹಣ್ಣುಹಂಪಲುಗಳನ್ನು ನಮಗೆ ತಿನ್ನಲಿಕ್ಕಾಗಿಯೂ ಅವನು ಸೃಷ್ಟಿಸಿರುವನು. ಪ್ರವಾದಿಗಳನ್ನು ನಮ್ಮ ಮಾರ್ಗದರ್ಶನಕ್ಕಾಗಿ ಅವನು ಕಳುಹಿಸಿದನು. ಅವನು ಹಗಲನ್ನು ಕೆಲಸ ಮಾಡಲಿಕ್ಕಾಗಿಯೂ ರಾತ್ರಿಯನ್ನು ವಿಶ್ರಾಂತಿಗಾಗಿಯೂ ಉಂಟು ಮಾಡಿದನು.

ಅವನು ನಮ್ಮನ್ನು ಸದಾ ಕಾಲ ನೋಡುತ್ತಿದ್ದಾನೆ. ಆದರೆ ನಮ್ಮ ಕಣ್ಣುಗಳು ಅವನನ್ನು ಕಾಣಲಾರವು. ಅವನು ಕೇಳದೆ ಕೊಡುತ್ತಾನೆ. ಅವನು ರಾಜಾಧಿರಾಜನಾಗಿದ್ದಾನೆ. ಅವನು ಶ್ರೀಮಂತರನ್ನು ಬಡವರನ್ನಾಗಿಯೂ ಬಡವರನ್ನು ಶ್ರೀಮಂತರನ್ನಾಗಿಯೂ ಮಾಡುತ್ತಾನೆ. ಅವನು ಬಲಹೀನನ ಪ್ರಾರ್ಥನೆಯನ್ನು ಆಲಿಸುತ್ತಾನೆ. ಅವನೇ ಪ್ರಾರ್ಥನೆಗೆ ಅರ್ಹನಾಗಿದ್ದಾನೆ. ನಾವು ಬೇಡಿದಾಗ ಅವನೇ ನಮಗೆ ನೀಡುತ್ತಾನೆ. ಅವನೇ ಜೀವಂತಗೊಳಿಸುತ್ತಾನೆ ಮತ್ತು ಅವನೇ ಮರಣಪಡಿಸುತ್ತಾನೆ. ನಾವು ಮೃತರಾದ ನಂತರ ಅವನು ನಮ್ಮನ್ನು ಪುನರುಜ್ಜೀವನಗೊಳಿಸುವನು. ಅವನು ನಮ್ಮ ಸತ್ಕೃತ್ಯಗಳಿಗೆ ನಮಗೆ ಉತ್ತಮ ಪ್ರತಿಫಲ ನೀಡುವನು. ಕೆಟ್ಟ ಕೆಲಸಗಳಿಗಾಗಿ ಅವನು ಶಿಕ್ಷೆ ನೀಡುವನು. ನಾವು ಕಷ್ಟಕಾಲದಲ್ಲಿಯೂ ಸುಖದ ಕಾಲದಲ್ಲಿಯೂ ಅವನ ಕಡೆಗೆಯೇ ಬಾಗಬೇಕು. ಕಷ್ಟದ ಕಾಲದಲ್ಲಿ ಅವನನ್ನೇ ಕರೆಯಬೇಕು. ಅವನನ್ನೇ ಪ್ರಾರ್ಥಿಸಬೇಕು. ಅವನು ಒಳ್ಳೆಯವರಿಗೆ ಸಹಾಯ ಮಾಡುತ್ತಾನೆ ಮತ್ತು ಎಲ್ಲ ಕಾಲಗಳಲ್ಲೂ ಅವರ ಜೊತೆ ಇರುತ್ತಾನೆ. ಅವನು ಉತ್ತಮ ಜನರೊಂದಿಗೆ ಮಾತನಾಡುತ್ತಾನೆ ಮತ್ತು ಅವರನ್ನು ನೇರವಾದ ಮಾರ್ಗದಲ್ಲಿ ನಡೆಸುತ್ತಾನೆ. ಅವನು ನಮ್ಮೆಲ್ಲರನ್ನು ಪ್ರೀತಿಸುತ್ತಾನೆ. ಅವನು ತಂದೆ ತಾಯಂದಿರಿಗಿಂತಲೂ ಹೆಚ್ಚಾಗಿ ನಮ್ಮನ್ನು ಪ್ರೀತಿಸುತ್ತಾನೆ.

## ದೇವದೂತರು (ಮಲಾಇಕ್)

ದೇವದೂತರು ಅಲ್ಲಾಹನ ಆಧ್ಯಾತ್ಮಿಕ ಸೃಷ್ಟಿಗಳಾಗಿದ್ದಾರೆ. ನಮ್ಮ ಕಣ್ಣುಗಳಿಗೆ ಅವರು ಗೋಚರಿಸಲಾರರು. ಅವರು ಸದಾ ಕಾಲ ಅಲ್ಲಾಹನ ಪ್ರಾರ್ಥನೆ ಮತ್ತು ಅವನ ಆಜ್ಞೆಗಳ ಪಾಲನೆಯಲ್ಲಿ ಮಗ್ನರಾಗಿರುತ್ತಾರೆ. ಅಲ್ಲಾಹನು ದೇವದೂತರನ್ನು ನಮ್ಮ ಕೆಲಸಗಳಿಗಾಗಿ ನೇಮಿಸಿರುವನು. ಅಲ್ಲಾಹನ ಸಂದೇಶವಾಣಿಯನ್ನು ಅಲ್ಲಾಹನ ಒಳ್ಳೆಯ ಮತ್ತು ಪರಿಶುದ್ಧ ದಾಸರ ಮೇಲೆ ಅವತೀರ್ಣಗೊಳಿಸುವುದು, ಗಾಳಿ ಬೀಸುವಂತೆ ಮಾಡುವುದು, ಮಳೆ ಸುರಿಸುವುದು, ಗರ್ಭಪಿಂಡದಲ್ಲಿ ಜೀವ (ರೂಹ್) ಹಾಕುವುದು, ಜೀವವನ್ನು ಶರೀರದಿಂದ ಹೊರತೆಗೆಯುವುದು - ಹೀಗೆ ದೇವದೂತರು ಕೆಲಸಗಳನ್ನು ನಮಗೋಸ್ಕರ ಮಾಡುತ್ತಾರೆ. ಅವರು ಅಸಂಖ್ಯಾತರಾಗಿದ್ದಾರೆ. ಅವರ ಬಗ್ಗೆ ನಂಬಿಕೆ ಇರಿಸುವುದು ಅತ್ಯಾವಶ್ಯಕವಾಗಿದೆ.

ದೇವದೂತರು ಯಾವುದೇ ಪಾಪ ಮಾಡುವುದಿಲ್ಲ. ಅವರು ಅಲ್ಲಾಹನ ಇಷ್ಟದ ಪ್ರಕಾರ ಕೆಲಸ ಮಾಡುತ್ತಾರೆ. ಪ್ರಸಿದ್ಧ ದೇವದೂತರು ಇವರಾಗಿದ್ದಾರೆ: 1. ಜಿಬ್ರೀಲ್ 2. ಮೀಕಾಈಲ್ 3. ಇಸ್ರಾಫೀಲ್ 4. ಅಝ್ರಾಈಲ್

ಮನುಷ್ಯರ ಹೃದಯಗಳಲ್ಲಿ ಸ್ಫುರಿಸುವ ಉತ್ತಮ ಯೋಚನೆಗಳು ದೇವದೂತರ ಮೂಲಕ ಉಂಟಾಗುತ್ತವೆ. ಆ ಯೋಚನೆಗಳನ್ನು ಅಂಗೀಕರಿಸಿ ಅವುಗಳ ಪ್ರಕಾರ ಕೃತಿಶೀಲರಾಗುವುದು ಅತ್ಯಾವಶ್ಯಕವಾಗಿದೆ. ಯಾವ ಕಾರ್ಯವನ್ನು ಮಾಡಬೇಕೆಂದು ಅಲ್ಲಾಹನು ಆಜ್ಞೆ ನೀಡುತ್ತಾನೋ ಅದೇ ಕಾರ್ಯವನ್ನು ಮಾತ್ರ ದೇವದೂತರು ಮಾಡುತ್ತಾರೆ.

# ಸಾಹಿಬ್‌ಝಾದ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ನಿಧನ



ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರ ಪೌತ್ರ ಹಾಗೂ ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಸಾಹೇಬರ ಪುತ್ರ - ಭಾರತ ಅಹ್ಮದಿಯಾ ಜಮಾಅತಿನ ನಾಝಿರ್ ಅಅ್‌ಲಾ, ಸಾಹಿಬ್‌ಝಾದ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು 29-04-2007ರಂದು ರಾತ್ರಿ ಅಮೃತಸರದಲ್ಲಿ ತನ್ನ 80ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಜಿದ್ದದ ಸೇಟ್ ಅಬೂಬಕರ್ ಯೂಸುಫ್ ಸಾಹೇಬರ ಪುತ್ರಿ ಸಯ್ಯದ ಅಝೀಝು ಬೇಗಮ್ ಸಾಹಿಬರ ಮಗನಾಗಿ 1927ರಲ್ಲಿ ಅವರು ಜನಿಸಿದರು.

ಭಾರತ - ಪಾಕಿಸ್ಥಾನ ವಿಭಜನೆಯ ಕಾಲದಲ್ಲಿ ಖಾದಿಯಾನಿನಲ್ಲಿರುವ ಅಹ್ಮದಿಯಾ ಪುಣ್ಯ ಸ್ಥಳಗಳ ರಕ್ಷಣೆಗೋಸ್ಕರ ಸನ್ನದ್ಧರಾದ 313 ದರ್ವೇಶ್‌ಗಳ ಪೈಕಿ ವಸೀಂ ಅಹ್ಮದ್ ಸಾಹೇಬರು ಒಬ್ಬರಾಗಿದ್ದರು. ಆಗ ಅವರ ಪ್ರಾಯ ಕೇವಲ 20 ವರ್ಷವಾಗಿತ್ತು. ಅವರು ಸದರ್ ಖುದ್ದಾಮುಲ್ ಅಹ್ಮದಿಯಾ ಭಾರತ್, ನಾಝಿರ್ ತಅ್‌ಲೀಂ, ನಾಝಿರ್ ದಾವತ್ ತಬ್ಲೀಗ್ ಎಂಬೀ ಉನ್ನತ ಹುದ್ದೆಗಳನ್ನು ವಹಿಸಿ ಜಮಾಅತಿನ ಸೇವೆಮಾಡಿದ್ದಾರೆ. 1977ನೇ ಇಸವಿಯಲ್ಲಿ ಹಝ್ರತ್ ಖಲೀಫತುಲ್ ಮಸೀಹ್ III ರವರು ಅವರನ್ನು ಭಾರತದ ನಾಝಿರ್ ಅಅ್‌ಲಾ ಆಗಿ ನೇಮಿಸಿದರು.

ದಿವಂಗತರು ಮೃದು ಸ್ವಭಾವಿಯೂ ಬಹಳ ತ್ಯಾಗಶೀಲರೂ ದರ್ವೇಶ್‌ಗಳಿಗೂ ಬಡವರಿಗೂ ವಿಧವೆಯರಿಗೂ ರೋಗಿಗಳಿಗೂ ಸದಾ ಸಹಾಯಮಾಡುವವರೂ ಆಗಿದ್ದರು. ಅವರು ಹಿಂದೂ ಮತ್ತು ಸಿಖ್ಖ್ ಜನರೊಡನೆ ಬಹಳ ಉತ್ತಮ ಬಾಂಧವ್ಯವನ್ನು ಹೊಂದಿದ್ದರು. ಬಿಹಿಶ್ತಿ ಮಖ್‌ಬರದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮಾಧಿ ಇರುವ ಕಂಪೌಂಡಿನ ಒಳಗೆ ಮೇ 1ರಂದು ಸಂಜೆ ಅವರನ್ನು ದಫನಮಾಡಲಾಯಿತು. ಮೌಲಾನ ಮುಹಮ್ಮದುದ್ದೀನ್ ಸಾಹೇಬರು ಜನಾಝ ನಮಾಝಿನ ನೇತೃತ್ವ ವಹಿಸಿದ್ದರು. ಅಂದು ಅವರ ಗೌರವಾರ್ಥ ಖಾದಿಯಾನಿನಲ್ಲಿ ಬಂದ್ ಆಚರಿಸಲಾಯಿತು. ಅವರ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಲು ಭಾರತದ ಎಲ್ಲಾ ಪ್ರಾಂತ್ಯಗಳಿಂದಲೂ ಅಮೇರಿಕ, ಕೆನಡಾ, ಜರ್ಮನಿ, ಇಂಗ್ಲೆಂಡ್, ಮೊರಿಷ್ಯಸ್, ಪಾಕಿಸ್ಥಾನ ಮುಂತಾದ ದೇಶಗಳಿಂದಲೂ ಅಹ್ಮದಿಯರು ಆಗಮಿಸಿದ್ದರು. ಪಂಜಾಬಿನ ಮೂವರು ಮಂತ್ರಿಗಳೂ ಕೆಲವು ಪಾರ್ಲಿಮೆಂಟ್ ಸದಸ್ಯರೂ ಪೋಲೀಸ್ ಅಧಿಕಾರಿಗಳೂ ಉಪಸ್ಥಿತರಿದ್ದರು.

ದಿವಂಗತರು ಪತ್ನಿಯನ್ನೂ ಒಬ್ಬ ಪುತ್ರನನ್ನೂ ಮೂವರು ಪುತ್ರಿಯರನ್ನೂ ಅಗಲಿರುವರು.

ಅಲ್ಲಾಹನು ದಿವಂಗತರಿಗೆ ಮಗ್‌ಫಿರತನ್ನೂ ಜನ್ನತ್‌ನಲ್ಲಿ ಉನ್ನತ ಸ್ಥಾನವನ್ನು ದಯಪಾಲಿಸಲಿ.

ಆಮೀನ್.

ಪುಸ್ತಕ ವಿಭಾಗ

# ಧರ್ಮದ ನಾಮದಲ್ಲಿ ರಕ್ತಪಾತ

❖ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

## ಅಧ್ಯಾಯ - 4
## ಪ್ರವಾದಿಗಳು ಮತ್ತು ಸೈನಿಕರು
### *ಅವರ ವ್ಯತ್ಯಾಸಗಳ ಅಧ್ಯಯನ*

"ಆದುದರಿಂದ ನೀನು ಉಪದೇಶಿಸು; ನೀನಾದರೋ ಕೇವಲ ಉಪದೇಶಕನಾಗಿರುವೆ. ನೀನು ಅವರ ಮೇಲೆ ಕಾವಲುಗಾರನಲ್ಲ."

- ಪವಿತ್ರ ಖುರ್‌ಆನ್ (88 : 22, 23)

"ಇದು (ಎಂದರೆ ಜಮಾಅತೆ ಇಸ್ಲಾಮೀ) ಧಾರ್ಮಿಕ ಪ್ರಚಾರ ಮಾಡುವ ಪ್ರವಚನಕಾರ ಮತ್ತು ಸುವಾರ್ತೆ ಪ್ರಚಾರಕರ ಸಂಘಟನೆಯಲ್ಲ. ಆದರೆ ಇದು ದೇವ ಸೈನಿಕರ ಸಂಘಟನೆ (ಜಮಾಅತ್) ಆಗಿದೆ.

- ಮೌಲಾನ ಅಬುಲ್ ಆಲಾ ಮೌದೂದಿ

ಹತ್ತೊಂಬತ್ತನೆಯ ಶತಮಾನದ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು(Orientalists) ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದ್‌ರವರನ್ನು(ಸ) ಹೇಗೆ ಚಿತ್ರಿಸಿದರೆಂಬುದನ್ನು ನಾವು ಹಿಂದಿನ ಅಧ್ಯಾಯದಲ್ಲಿ ಪರಿಶೀಲಿಸಿದ್ದೇವೆ. ಅರಬಸ್ಥಾನದ ಮರುಭೂಮಿಯಿಂದ ಒಂದು ಕೈಯಲ್ಲಿ ಖಡ್ಗಧಾರಿಯಾಗಿ ಕುದುರೆ ಸವಾರಿ ಮಾಡುತ್ತಾ ಬರುವ ಮತಭ್ರಾಂತ ಯೋಧ ತನ್ನ ಆಕ್ರಮಣಕ್ಕೆ ತುತ್ತಾದ ಅಸಹಾಯಕರಿಗೆ ಅವುಗಳಲ್ಲಿ ಒಂದನ್ನು ಆಯ್ಕೆಮಾಡಲು ಬಲಾತ್ಕಾರ ಮಾಡುತ್ತಾ ಇರುವ ಚಿತ್ರವಾಗಿತ್ತು ಅದು.

ಎಡ್ವರ್ಡ್ ಗಿಬ್ಬನ್‌ನಿಂದ ಜನಪ್ರಿಯಗೊಳಿಸಲಾದ ಈ ಚಿತ್ರದ ಕಠೋರತೆಯನ್ನು ಆಧುನಿಕ ಓರಿಯಂಟಲಿಸ್ಟರು ತಗ್ಗಿಸಿದ್ದಾರೆ. ಪ್ರಸಿದ್ಧ ಯಹೂದಿ ವಿದ್ವಾಂಸರಾದ ಬರ್‌ನಾರ್ಡ್ ಲೂವಿಸ್‌ರವರು ತನ್ನ ಒಣ ಬ್ರಿಟಿಷ್ ಹಾಸ್ಯ ಭಾವದೊಂದಿಗೆ ಈ ಮೇಲಿನ ಚಿತ್ರದ ಕುರಿತು ಹೀಗೆ ಹೇಳಬೇಕಾಯಿತು:

"ಇದು ಸುಳ್ಳು ಚಿತ್ರ ಮಾತ್ರವಲ್ಲ ಅಸಾಧ್ಯವಾದದ್ದೂ ಆಗಿದೆ. ಎಡಗೈಯ್ಯಲ್ಲಿ ಖಡ್ಗ ಹಿಡಿಯುವ ಒಂದು ಜನತೆಯ ಬಗ್ಗೆ ನಾವು ಊಹಿಸಿಕೊಳ್ಳದೆ ನಾವು ಈ ಚಿತ್ರವನ್ನು ಒಪ್ಪಲಾರೆವು. ಮುಸ್ಲಿಮರ ನಡವಳಿಕೆಯ ಪ್ರಕಾರ, ಅವರು ಎಡಗೈಯನ್ನು ಕೊಳಕು ನಿವಾರಣೆಗಾಗಿ ಬಳಸುತ್ತಾರೆ. ಆತ್ಮಾಭಿಮಾನವುಳ್ಳ ಯಾವ ಮುಸ್ಲಿಮನೂ ಎಡಗೈಯ್ಯನ್ನು ಖುರ್‌ಆನನ್ನು ಎತ್ತಿ ಹಿಡಿಯಲು ಉಪಯೋಗಿಸಲಾರನು." (The Jews of Islam Page 3 - Bernard Lewis)

ಆದರೆ ಒಬ್ಬ 'ಆತ್ಮಾಭಿಮಾನಿ' ಮುಸ್ಲಿಮ್ ಮೌಲಾನ ಮೌದೂದಿ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪ್ರವಾದಿಯವರ(ಸ) ನಡವಳಿಕೆಗೆ ಅನುಯೋಜ್ಯವಾಗಿಲ್ಲವಾದರೂ ಹಿರಿದ ತನ್ನ ಖಡ್ಗವನ್ನು ಬಲಗೈಯ್ಯಲ್ಲಿ ಹಿಡಿದಿರುವುದಾಗಿ ನಾವು ಕಾಣುತ್ತೇವೆ.

ಮೌಲಾನ ತನ್ನನ್ನು ಹಝ್ರತ್ ಪ್ರವಾದಿಯವರ(ಸ) ವಿಧೇಯ ಅನುಯಾಯಿಯಾಗಿ ವಾದಿಸುತ್ತಾರೆ. ಹೀಗಿರುವಾಗ ಅವರು ತನ್ನ ನೇತಾರರ ಕುರಿತು ಮೆಚ್ಚಿಗೆಯ ಮಾತುಗಳನ್ನು ಹೇಳುವರೆಂದು ನಾವು ಪ್ರತೀಕ್ಷಿಸಬಹುದಾಗಿದೆ. ಸೌಂದರ್ಯವು ನೋಡುವವನ ದೃಷ್ಟಿಯಲ್ಲಿದೆ. ಆದರೆ ಇಸ್ಲಾಮಿನ ಆಧುನಿಕ ಶತ್ರುಗಳು ಸಹ ಕಾಣದಂತಹ ಕುಂದು ಕೊರತೆಗಳನ್ನು ಈ ವ್ಯಕ್ತಿ ಹಝ್ರತ್ ಪ್ರವಾದಿಯವರಲ್ಲಿ(ಸ) ಕಾಣಲು ಹೇಗೆ ತಾನೆ ಸಾಧ್ಯವಾಯಿತು? ಇದಕ್ಕೆ ಮೂರು ಉತ್ತರಗಳು ಇವೆ:

1. ಮೌಲಾನ ಮೌದೂದಿ ತಾನು ಇಸ್ಲಾಮಿನ ವಿಧೇಯ ಅನುಯಾಯಿ ಎಂದು ಹೇಳಿದುದು ಸುಳ್ಳು. ಅಲ್‌ಜಿಹಾದ್ ಫಿಲ್ ಇಸ್ಲಾಮ್ ಮತ್ತು ಅವರ ಇತರ ಕೃತಿಗಳಲ್ಲಿ ಅವರು ಬರೆದುದನ್ನು ಓದುವುದಾದರೆ ಅವರಿಗೆ ಹಝ್ರತ್ ಪೈಗಂಬರರ(ಸ) ಉಪದೇಶಗಳೊಂದಿಗೆ ದೂರದ ಸಂಬಂಧವೂ ಇಲ್ಲವೆಂದು ಸಮಂಜಸವಾಗಿ ನಿರ್ಧಾರಕ್ಕೆ ಬರಬಹುದಾಗಿದೆ. ತಾನು ಪವಿತ್ರ ಪ್ರವಾದಿಯವರ(ಸ) ಅನುಯಾಯಿ ಎಂದು ಅವರು ಹೇಳಿಕೊಳ್ಳುವುದು ಸುಳ್ಳೆಂದೇ ತೋರುತ್ತದೆ. ಆದರೆ ಇಷ್ಟು ಗುರುತರವಾದ ಆರೋಪವನ್ನು ತಾನು ಮುಸ್ಲಿಮನೆಂದು ಹೇಳಿಕೊಳ್ಳುವ ವ್ಯಕ್ತಿಯ ಮೇಲೆ ಹೊರಿಸುವುದು ಸರಿಯಲ್ಲವೆಂದು ನನಗೆ ತೋರುತ್ತದೆ. ಎಷ್ಟು ಸಾಕ್ಷ್ಯಗಳಿದ್ದರೂ ಒಬ್ಬ ಶತ್ರುವಿನ ವಿರುದ್ಧ ಸಹ ಇಂತಹ ಆರೋಪ ಹೊರಿಸುವುದಕ್ಕೆ ನಾನು ಸಿದ್ಧನಲ್ಲ. ನಾನು ದೌರ್ಜನ್ಯ ಪೀಡಿತವಾದ ಒಂದು ಪಂಗಡಕ್ಕೆ ಸೇರಿದವನಾಗಿದ್ದೇನೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕುರಿತು ನಮ್ಮ ಹೃದಯಗಳಲ್ಲಿ ಅತ್ಯಧಿಕ ಪ್ರೀತಿ ಹೊರತು ಇನ್ನೇನೂ ತುಂಬಿಲ್ಲವಾದರೂ ನಮ್ಮ ವಿರೋಧಿಗಳಾದ ದೌರ್ಜನ್ಯಗಾರರಿಂದ ನಾವು ಹಝ್ರತ್ ಪೈಗಂಬರರ(ಸ) ಶತ್ರುಗಳೆಂದು ಆರೋಪಿಸಲ್ಪಡುತ್ತಿದ್ದೇವೆ. ಈ ಆಕ್ಷೇಪದ ಗಾಯವು ಎಷ್ಟು ಆಳವೂ ಎಷ್ಟು ನೋವನ್ನುಂಟುಮಾಡುವುದೂ ಆಗಿದೆ ಎಂಬುದನ್ನು ಅನುಭವಿಸಿದ ನಾನು ಮೌಲಾನ ಮೌದೂದಿಯ ಮೇಲೆ ಇಂತಹ ಆಕ್ಷೇಪ ಹೊರಿಸುವುದರಿಂದ ಹಿಂದೆ ಸರಿಯುತ್ತೇನೆ.

2. ಮೌಲಾನ ಮೌದೂದಿ ಬಣ್ಣಗಳ ವ್ಯತ್ಯಾಸವನ್ನು ಗುರುತಿಸಲಾರದ ಕಲರ್ ಬ್ಲೈಂಡ್ ವ್ಯಕ್ತಿಯಂತಿರುವುದರಿಂದ ಸ್ವಭಾವದ ಒಳಿತು ಕೆಡುಕುಗಳನ್ನು ಗುರುತಿಸುವ ಸಾಮರ್ಥ್ಯವಿಲ್ಲದವರಾಗಿದ್ದಾರೆ. ಆದರೆ ಅವರ ವಿಚಿತ್ರ ನಡವಳಿಕೆಗೆ ಈ ಕೆಳಗಿನ ಮೂರನೇ ಕಾರಣವು ಹೇತುವಾಗಿರಬಹುದೆಂದು ತೋರುತ್ತದೆ.

3. ಮೌಲಾನ ಮೌದೂದಿಯನ್ನು ರಾಜಕೀಯ ಅಧಿಕಾರದ ಮೋಹವು ಸದಾ ಕಾಲ ಕಾಡುತ್ತಾ ಇತ್ತು. ಈ ಮೋಹದ ಕಾಡುವಿಕೆಯನ್ನು (Obsession) ಹೀಗೆ ವಿವರಿಸಲಾಗಿದೆ:- "ನಿರಂತರವಾಗಿ ಪುನಃ ಪುನಃ ಬರುತ್ತಿರುವ ಯೋಚನೆ; ಸಾಮಾನ್ಯವಾಗಿ ಭಾವೋದ್ವೇಗ ಭರಿತವಾಗಿ ಮತ್ತು ಪದೇ ಪದೇ ಯಾವುದಾದರೊಂದು ಕ್ರಮ ಕೈಗೊಳ್ಳಲು ಉತ್ತೇಜನ; ಸಮಗ್ರ ಮಾನಸಿಕ ಸ್ಥಿತಿಯು ರೋಗ ಪೀಡಿತವಾಗಿರುವುದು." (A Dictionary of Psychology : Page 191 - James Drever)

ಪಿಯರ‍್ರೆ ಜಾನೆಟ್ ಎಂಬ ಮನೋವಿಜ್ಞಾನಿ - ಇಂತಹ ವ್ಯಕ್ತಿಯು ಬಹು ಎಚ್ಚರಿಕೆಯಿಂದಿರುವ, ಸದಾ ಪ್ರಜ್ಞೆಯಿಂದಿರುವ ಮತ್ತು ತನ್ನ ನಿರರ್ಥಕತೆಯ ಭಾವನೆಯಿಂದ ಸದಾ ಪೀಡಿತನಾದವನೆಂದು ವಿವರಿಸಿದ್ದಾರೆ. ಎಲ್‌ಟನ್ ಮೇಯೋ ಎಂಬ ಮನೋವಿಜ್ಞಾನಿ ತನ್ನ ಮತ್ತು ಜಾನೆಟ್‌ರವರ ಅಭಿಪ್ರಾಯಗಳನ್ನು ಸಂಕ್ಷೇಪಿಸಿ ಹೀಗೆ ಹೇಳಿದ್ದಾರೆ:-

"ಮಾನಸಿಕ ಕಾಡುವಿಕೆಗೆ ತುತ್ತಾದ ವ್ಯಕ್ತಿಗಳು ಸ್ಪಷ್ಟವಾದ ಸಂಗತಿಗಳ ಕುರಿತು ಸಹ ಗಾಢವಾಗಿ ಪುನಃ ಚಿಂತಿಸಿ ನಿರ್ಧಾರಕ್ಕೆ ಬರುವಂತಹ ನಿಷ್ಣಾತರಾಗಿದ್ದಾರೆ. ಅವರಿಗೆ ಸಾಮರ್ಥ್ಯವಿಲ್ಲದ ಅಥವಾ ತಮಗೆ ಸಾಮರ್ಥ್ಯ ಇಲ್ಲ ಎಂದು ಅವರು ಭಾವಿಸುವ ಮುಖ್ಯ ವಿಷಯಗಳಿಗೆ ಸಂಬಂಧಿಸಿದ ಮುಖ್ಯ ಕ್ರಮಗಳಿಗೆ ಬದಲಿಯಾಗಿ ಅವರು ಅಪ್ರಧಾನವಾದ ಚಟುವಟಿಕೆಗಳನ್ನು ಉತ್ಪ್ರೇಕ್ಷಿತ ನಿಷ್ಪ್ರಷ್ಟತೆಯೊದಿಗೆ ಸೂಚಿಸುತ್ತಾರೆ." (Some notes on the Psychology of Pierre Janet : Page 253 - Elton Mayo)

ಮೌಲಾನರವರು ಹೈದರಾಬಾದ್ ಸಂಸ್ಥಾನದಲ್ಲಿ ಬಾಲ್ಯಕಾಲದಲ್ಲಿ ಮತ್ತು ಹದಿಹರೆಯದಲ್ಲಿ ಅನುಭವಿಸಿದ ಜೀವಿತ ಕಾಲದ ನೆನಪುಗಳು, ನಾವು ಈ ಹಿಂದೆ ನೋಡಿದ ಪ್ರಕಾರ ಅವರನ್ನುಅವರ ಸ್ವಭಾವ ರೂಪೀಕರಣದ ಒಂದು ನಿಯಂತ್ರಣ ಘಟಕಕ್ಕೆ ಕೊಂಡೊಯ್ಯಿತು - ರಾಜಕೀಯ ಎಂಬ ಶಕ್ತಿ ಘಟಕಕ್ಕೆ. ಕುರ್ಟ್ ಲೆವಿನ್ ಎಂಬ ಮನೋವಿಜ್ಞಾನಿ ಹೀಗೆ ಹೇಳಿದ್ದಾರೆ:- ಒಬ್ಬ ವ್ಯಕ್ತಿಯ ಸ್ವಭಾವವನ್ನು ಮನವರಿಕೆ ಮಾಡಲಿಕ್ಕಾಗಿ ಅವನ ಜೀವಿತದ ವಿವಿಧ ಘಟ್ಟಗಳನ್ನು ಪರಿಶೀಲಿಸಬೇಕು. ಒಂದು ನಿಶ್ಚಿತ ಕ್ಷಣದಲ್ಲಿ ಮತ್ತು ಒಂದು ಕಾಲಾವಧಿಯಲ್ಲಿ ಒಬ್ಬ ವ್ಯಕ್ತಿ ಯಾವ ವಾತಾವರಣದಲ್ಲಿದ್ದನೆಂಬುದಕ್ಕೆ ಸಂಬಂಧಿಸಿ ಅವನ ಸ್ವಭಾವವನ್ನು ತಿಳಿಯಬೇಕು. ಲೆವಿನ್‌ರವರ ಆಸಕ್ತಿಯ ಕ್ಷೇತ್ರ ಇದಾಗಿತ್ತು: "ಮನುಷ್ಯನ ಜೀವಿತದ ಘಟ್ಟ; ಮನುಷ್ಯ ಮತ್ತು ಅವನ ಮಾನಸಿಕ ವಾತಾವರಣ" (Contributions to Psychological Theory - Kurt Lewin)

ವುಡ್ಸ್‌ವರ್ಥ್ ಮತ್ತು ಶೀಹಾನ್ ಲೆವಿನ್‌ರವರ ಸಿದ್ಧಾಂತವನ್ನು ವಿಶದೀಕರಿಸುತ್ತಾ ಹೀಗೆ ಹೇಳುತ್ತಾರೆ:

"ಮಾನಸಿಕ (ಅಥವಾ ಸ್ವಭಾವ ಸಂಬಂಧವಾದ) ವಾತಾವರಣ ಎಂದರೆ ಒಬ್ಬ ವ್ಯಕ್ತಿ ಕಾಣುವ ಮತ್ತು ಮನವರಿಕೆ ಮಾಡುವ ವಾತಾವರಣವಾಗಿದೆ. ಆದರೆ ಅದಕ್ಕಿಂತ ಮಿಗಿಲಾಗಿ ಅದು ಆತನ ವರ್ತಮಾನ ಕಾಲದ ಆವಶ್ಯಕತೆಗಳಿಗೆ ಮತ್ತು ಅವನಿಗೆ ತೋಚುವ ಆವಶ್ಯಕತೆಗಳಿಗೆ ಸಂಬಂಧಿಸಿರುತ್ತದೆ. ಅವನು ಉದ್ದೇಶಿಸುವ ಹಲವು ವಸ್ತುಗಳು ಅವನ ವರ್ತಮಾನ ಕಾಲದ ಆವಶ್ಯಕತೆಗಳಿಗೆ ಇರುವವುಗಳಾಗಿರದೆ ಅವು ಅವನ ಮಾನಸಿಕ ವಾತಾವರಣದ ಹಿನ್ನಲೆಯಲ್ಲಿ ಅಸ್ತಿತ್ವದಲ್ಲಿರುತ್ತವೆ. ಬೇರೆ ಉದ್ದೇಶಿತ ವಸ್ತುಗಳು ಗುಣಾತ್ಮಕ ಮತ್ತು ಋಣಾತ್ಮಕ ವೇಲೆನ್ಸ್(Valence) - ಎಂದರೆ ಸೇರ್ಪಡೆಗೊಳ್ಳುವ ಅಥವಾ ಸ್ಥಾನಪಲ್ಲಟಗೊಳಿಸುವ ಶಕ್ತಿಗಳನ್ನು ಹೊಂದಿರುತ್ತವೆ. ಅವನ ವರ್ತಮಾನ ಕಾಲದ ಆವಶ್ಯಕತೆಗಳನ್ನು ಈಡೇರಿಸುವವು ಗುಣಾತ್ಮಕವಾಗಿರುತ್ತವೆ. ಅವನಿಗೆ ಹಾನಿಯನ್ನುಂಟುಮಾಡುವವು ಋಣಾತ್ಮಕವಾಗಿರುತ್ತವೆ. ಗುಣಾತ್ಮಕ ಶಕ್ತಿಗಳನ್ನು ಹೊಂದಿದ ವಸ್ತುಗಳು ಅವನನ್ನು ಆಕರ್ಷಿಸುತ್ತವೆ. ಋಣಾತ್ಮಕ ಶಕ್ತಿಗಳನ್ನು ಹೊಂದಿದವುಗಳು ಅವನನ್ನು ಹಿಮ್ಮೆಟ್ಟಿಸುತ್ತವೆ." (Robert S. Woodworth and Mary Sheehan - Page 241)

ಮನೋವಿಜ್ಞಾನ ಎಂಬುದು ಪರಿಪೂರ್ಣವಾದೊಂದು ವಿಜ್ಞಾನ ಶಾಖೆಯಲ್ಲ. ಅದು ವಿಕಾಸಗೊಳ್ಳುತ್ತಾ ಇದೆ. ಆದರೆ ಮೌಲಾನ ಮೌದೂದಿಯ ಮಾನಸಿಕ ಕಾಡುವಿಕೆ (Obsession) ಈ ಬಗ್ಗೆ ಇರುವ ವಿವರಣೆಗೆ ಅನುಯೋಜ್ಯವಾಗಿದೆ ಎಂದು ತೋರುತ್ತದೆ. ಮೌಲಾನರವರ ಸ್ವಭಾವವನ್ನು ಬೇರೆ ರೀತಿಯಲ್ಲಿ ವಿವರಿಸುವುದು ಸಾಧ್ಯವಾಗಲಾರದೆಂದಿಲ್ಲ. ವಿವರಣೆ ಹೇಗಿದ್ದರೂ ಸರಿ, ಒಂದು ಸಂಗತಿ ಸ್ಪಷ್ಟವಾಗಿದೆ. ಅವರ ದೃಷ್ಟಿಯು ನಿಸ್ಸಂಶಯವಾಗಿ ಅವರ ಮಾನಸಿಕ ಕಾಡುವಿಕೆಯ ಕಾರಣದಿಂದಾಗಿ ಅಸ್ಪಷ್ಟವಾಗಿದೆ. ದೇವನ ಶತ್ರುಗಳು ತುಳಿದ ಮಾರ್ಗದಲ್ಲಿ ಅವರು ಸಾಗುತ್ತಾರೆ ಮತ್ತು ಕೆಲವು ಸಾರಿ ಮುಗ್ಗರಿಸಿ ಅದರಲ್ಲಿ ಬಿದ್ದು ಬಿಡುತ್ತಾರೆ. ಸ್ವಧರ್ಮವನ್ನು ತ್ಯಜಿಸಿ ಅನ್ಯಧರ್ಮವನ್ನು ಸೇರುವವರಿಗೆ ಮರಣದಂಡನೆಯನ್ನು ನೀಡುವುದಕ್ಕೆ ಮೌಲಾನ ಮೌದೂದಿ ಬೆಂಬಲಿಸುವುದು ಅವರ ಆ ಮಾನಸಿಕ ಕಾಡುವಿಕೆಯ ಕಾರಣದಿಂದಲೇ ಆಗಿದೆ. ಪ್ರವಾದಿಗಳು ಮತ್ತು ಅವರ ಶಿಷ್ಯರು ತಮ್ಮ ಪಾರಂಪರಿಕ ಧರ್ಮವನ್ನು ತ್ಯಜಿಸಿ ಹೊಸ ಧರ್ಮಕ್ಕೆ ಸೇರುತ್ತಾ ಇದ್ದುದನ್ನು ಖಂಡಿಸಿ ಅವರಿಗೆ ಅವರ ಶತ್ರುಗಳು ಯಾವಾಗಲೂ ಮರಣದಂಡನೆ ವಿಧಿಸಬೇಕೆಂದು ಆವಶ್ಯಪಡುತ್ತಿದ್ದರು. ಮೌಲಾನ ಮೌದೂದಿ ತನ್ನ ಮಾನಸಿಕ ಕಾಡುವಿಕೆಯ ಕಾರಣದಿಂದಲೇ ಹಝ್ರತ್ ಪ್ರವಾದಿಯವರ(ಸ) ಕೈಗೆ ಖಡ್ಗ ನೀಡುವುದಕ್ಕೆ ನಿರ್ಬಂಧಿತರಾಗುತ್ತಾರೆ ಮತ್ತು ಹಾಗೆ ಮಾಡುವ ಮೂಲಕ ಹಝ್ರತ್ ಪ್ರವಾದಿಯವರನ್ನು(ಸ) ಭಯಾನಕವಾಗಿ ಚಿತ್ರಿಸುವ ಇಸ್ಲಾಮ್ ಧರ್ಮದ ಶತ್ರುಗಳಿಗೆ ಬೆಂಬಲ ಕೊಡುತ್ತಾರೆ. ಮನವೊಲಿಸುವಿಕೆ ಮತ್ತು ಬಲಾತ್ಕಾರ ಪರಸ್ಪರ ವಿಭಿನ್ನವಾದ ವಿಷಯಗಳಾಗಿವೆ. ಮೌಲಾನ ಖಡ್ಗವನ್ನು ಸುಧಾರಣೆಯ ಮಾರ್ಗವನ್ನಾಗಿ ಅಂಗೀಕರಿಸಿ, ತರ್ಕಬದ್ಧ ವಾದವನ್ನು ಮತ ಪರಿವರ್ತನೆಗೆ ಇರುವ ಮಾರ್ಗವೆಂಬುದನ್ನು ನಿರಾಕರಿಸುತ್ತಾರೆ. ಮನವೊಲಿಕೆ ಮತ್ತು ತರ್ಕಬದ್ಧ ವಾದಗಳು ಕಠಿಣ ಕೆಲಸಗಳಾಗಿದ್ದು ಅವುಗಳ ಬಗ್ಗೆ ಅವರು ಸಾಮರ್ಥ್ಯ ಹೊಂದಿಲ್ಲ ಅಥವಾ ಹಾಗೆ ಭಾವಿಸುತ್ತಾರೆ. ಅವುಗಳಿಗಾಗಿ ಬಲಿದಾನಗಳನ್ನೂ ದೀರ್ಘಕಾಲದ ಕಷ್ಟಗಳನ್ನೂ ವಿರೋಧಿಗಳ ಉಪಟಳವನ್ನೂ ಅನುಭವಿಸಬೇಕಾಗುತ್ತದೆ. ಹಝ್ರತ್ ಪ್ರವಾದಿಯವರ(ಸ) ಮಕ್ಕದ ಜೀವಿತ ಕಾಲವು ಇದಕ್ಕೆ ಉದಾಹರಣೆಯಾಗಿದೆ. ಆದುದರಿಂದ ಮೌಲಾನ ಮೌದೂದಿ ಇವುಗಳನ್ನು ಋಣಾತ್ಮಕ ಶಕ್ತಿಯ ಕೇಂದ್ರಗಳೆಂದು ಗಣಿಸುತ್ತಾರೆ. ರಾಜಕೀಯ ಅಧಿಕಾರದ ಮೂಲಕ ಬಲಪ್ರಯೋಗವು ಅವರ ಉದ್ದೇಶಿತ ಲಕ್ಷ್ಯವನ್ನು ಈಡೇರಿಸಿ ಕೊಡುತ್ತದೆ ಎಂದು ಅವರು ಭಾವಿಸಿ ಅದನ್ನು ಹಝ್ರತ್ ಪ್ರವಾದಿಯವರ(ಸ) ಜೀವಿತಕ್ಕೆ ಸಂಬಂಧಿಸುವಂತೆ ಬಹಳ ಗಾಢ ಚಿಂತನೆಯ ಮೂಲಕ ವಿವರಣೆ ನೀಡುತ್ತಾರೆ.

ಮೌಲಾನರವರು ಅಧಿಕಾರದ ಗಳಿಕೆಯ ವ್ಯಾಮೋಹಕ್ಕೆ ಒಳಗಾಗಿದ್ದಾರೆಂದು ಹೇಳುವುದರ ಮೂಲಕ ನಾನು ಅವರಿಗೆ ಯಾವುದೇ ಅಗೌರವ ತೋರಿಸುವ ಉದ್ದೇಶ ಹೊಂದಿಲ್ಲ - ನನ್ನ ನೇತಾರರಾದ ಹಝ್ರತ್ ಮುಹಮ್ಮದ್‌ರವರ(ಸ) ಕೈಗೆ ಖಡ್ಗವನ್ನು ಕೊಟ್ಟು ಅವರಿಗೆ ಮತ್ತು ಅವರು ಪ್ರತಿಪಾದಿಸಿದ ತತ್ವಗಳಿಗೆ ಮೌಲಾನರವರು ಗೌರವ ಚ್ಯುತಿಯನ್ನುಂಟುಮಾಡಿದ್ದರೂ ಸಹ.

ಇಸ್ರಾಯೇಲ್ ಶೆಂಕರ್ ಬರೆದ "ಕೋಟ್ ಆಫ್ ಮೆನೀ ಕಲರ್ಸ್" ಎಂಬ ಯಹೂದಿ ಧರ್ಮದ ಕುರಿತು ಬರೆದ ಪ್ರಬಂಧಗಳ ಸಂಗ್ರಹವನ್ನು ವಿಮರ್ಶೆ ಮಾಡುತ್ತಾ ಹ್ಯೂ ನಿಸ್ಸೆಂಡನ್ ಹೀಗೆ ಹೇಳುತ್ತಾರೆ: "ಮಿಸ್ಟರ್ ಶೆಂಕರ್ ತನ್ನ ಮಾನಸಿಕ ಕಾಡುವಿಕೆಯನ್ನು ನಾಟಕೀಯವನ್ನಾಗಿ ಮಾಡಿ ತನ್ನ ಜನತೆಯ ಚರಿತ್ರೆಯು ಸುಲಭವಾಗಿ ಎಲ್ಲರಿಗೂ ಲಭಿಸುವಂತಹದ್ದೂ ಜ್ಞಾನವರ್ಧಕವೂ ಆಗಿ ಮಾಡುತ್ತಾರೆ." (Hugh Nissenden, 'Scripture and Survival : The Newyork Times Book Review, 17 March 1985 - Page 12). ನನ್ನ ಅಪೇಕ್ಷೆ, ಮೌಲಾನ ತನ್ನ ಮಾನಸಿಕ ಕಾಡುವಿಕೆಯನ್ನು ಉತ್ತಮವಾಗಿ ಉಪಯೋಗಿಸಬೇಕಾಗಿತ್ತು ಎಂದಾಗಿದೆ. ತದ್ವಿರುದ್ಧವಾಗಿ, ಅವರು ಬಲಾತ್ಕಾರವನ್ನು ನ್ಯಾಯಸಮ್ಮತವೆಂದು ವಾದಿಸುತ್ತಾರೆ. ಅದು ನ್ಯಾಯ ಸಮ್ಮತ ಮಾತ್ರವಲ್ಲ, ಸುಧಾರಣೆ ಮಾಡಲು ಅದು ಅತ್ಯಂತ ಆವಶ್ಯಕವಾದ ವಿಧಾನ ಕ್ರಮವೆಂದೂ ಹೇಳುತ್ತಾರೆ.

ಮೌಲಾನ ಮೌದೂದಿ ಹೀಗೆ ಹೇಳುತ್ತಾರೆ: "ಜನರಿಗೆ ಉಪದೇಶಿಸಿ ಅವರನ್ನು ಅವರಿಗೆ ಲಾಭ ಸಿಗುವ ಚಟುವಟಿಕೆಗಳಿಂದ ವಿಮುಖರನ್ನಾಗಿ ಮಾಡಲು ನೀವು ಬಯಸುವುದಾದರೆ ಅದು ಸಾಧ್ಯವಾಗುವ ಸಂಗತಿಯಲ್ಲ. ನೀವು ಅಧಿಕಾರವನ್ನು ಕೈಗೆತ್ತಿಕೊಳ್ಳಿರಿ ಮತ್ತು ಬಲವನ್ನು ಪ್ರಯೋಗಿಸಿ ಅವರ ಉದ್ಧಟ ಕೃತ್ಯಗಳನ್ನು ತಡೆಗಟ್ಟಿರಿ." (ಹಖೀಖತೆ ಜಿಹಾದ್ ಪುಟ 10)

ಸುಧಾರಣೆಯ ಈ ವಿಧಾನವು ಪರಿಣಾಮಕಾರಿಯೂ ಸುಲಭವೂ ಆಗಿದೆ ಎಂದು ತೋರುತ್ತದೆ. ಉಪದೇಶ ಮತ್ತು ಮನವೊಲಿಸುವಿಕೆಗೆ ಸಹನೆ ಮತ್ತು ಅಪಹಾಸ್ಯವನ್ನೂ ತಿರಸ್ಕಾರವನ್ನೂ ಧಿಕ್ಕಾರವನ್ನೂ ಎದುರಿಸಿ ನಿರಂತರವಾಗಿ ಕಾರ್ಯಪ್ರವೃತ್ತನಾಗುವುದು ಆವಶ್ಯಕವಾಗುತ್ತದೆ. ಜನರನ್ನು ಬಲ ಪ್ರಯೋಗಿಸಿ ಧರ್ಮ ಪರಿವರ್ತನೆ ಮಾಡುವುದು ಸುಲಭ. ಮೇಲಿನ ಎರಡು ಕ್ರಮಗಳ ಮಧ್ಯೆ ಯಾವ ಹೋಲಿಕೆಯೂ ಇರುವುದಿಲ್ಲ. ಒಂದು ಸುಲಭವೂ ಬೇಗನೆ ಫಲದಾಯಕವೂ ಆಗಿದೆ. ಇನ್ನೊಂದು ಸಮಯಾವಕಾಶವನ್ನು ಆವಶ್ಯಪಡುವುದು ಮತ್ತು ಪ್ರವಾದಿ ಅಯ್ಯೂಬ್‌ರವರ(ಅ) ಸಹನೆಯನ್ನು ಬಯಸುವಂತಹದ್ದು ಆಗಿದೆ. ಎಲ್ಲಾ ಧರ್ಮಸುಧಾರಕರು ಅಪಹಾಸ್ಯವನ್ನೂ ತಿರಸ್ಕಾರವನ್ನೂ ಸಹಿಸಬೇಕಾಯಿತು. ಪವಿತ್ರ ಖುರ್‌ಆನ್ ಪ್ರವಾದಿ ಲೂತ್‌ರವರ(ಅ) ಕುರಿತು ಹೀಗೆ ಹೇಳುತ್ತದೆ:-

"ಪಾಪಿಗಳಾದ ಜನರು ಸತ್ಯವಿಶ್ವಾಸಿಗಳನ್ನು ನೋಡಿ ಅಪಹಾಸ್ಯ ಮಾಡುತ್ತಿದ್ದರು. ಅವರ (ಅವಿಶ್ವಾಸಿಗಳ) ಸಮೀಪದಲ್ಲಿ ಇವರು (ಸತ್ಯವಿಶ್ವಾಸಿಗಳು) ನಡೆದು ಹೋಗುವಾಗ ಅವರು ಪರಸ್ಪರ (ಪರಿಹಾಸ ಭಾವದಿಂದ) ಕಣ್ಣು ಸನ್ನೆ ಮಾಡುತ್ತಿದ್ದರು. ಅವರು (ಅವಿಶ್ವಾಸಿಗಳು) ತಮ್ಮ ಕುಟುಂಬದವರ ಬಳಿಗೆ ಮರಳುವಾಗ ವಿಜಯೋನ್ಮತ್ತರಾಗಿ ಹೋಗುತ್ತಿದ್ದರು. ಅವರು (ಅವಿಶ್ವಾಸಿಗಳು) ಇವರನ್ನು ಕಂಡರೆ 'ನಿಜವಾಗಿಯೂ ಇವರು ಹಾದಿಗೆಟ್ಟವರು' ಎಂದು (ಪರಸ್ಪರ) ಹೇಳುತ್ತಿದ್ದರು. ಆದರೆ ಅವರನ್ನು ಇವರ ಮೇಲ್ನೋಟಗಾರರನ್ನಾಗಿ ಕಳುಹಿಸಲಾಗಿರಲಿಲ್ಲ." (83 : 30-34)

ಮೌಲಾನ ಮೌದೂದಿಯವರು ದೇವನಿಂದ ನೇಮಿಸಲ್ಪಟ್ಟ ಧರ್ಮ ಸುಧಾರಕರ ಮಾರ್ಗವನ್ನು ಏಕೆ ಅನುಸರಿಸುವುದಿಲ್ಲವೆಂದು ಮೇಲಿನ ವಚನಗಳು ವಿವರಿಸುತ್ತವೆ. ಜನರು ಧರ್ಮ ಸುಧಾರಕರನ್ನು ಅಪಹಾಸ್ಯ ಮಾಡುತ್ತಾರೆ. ಅವರು ಹೇಳುತ್ತಾರೆ: "ಈ ಜನರ ಏಕ ಮಾತ್ರ ಆಯುಧ ಉಪದೇಶವಾಗಿದೆ. ಅವರು ಎಷ್ಟು ಬಲಹೀನರಾಗಿದ್ದಾರೆಂದರೆ ನಾವು ಬಯಸುವಾಗ ಅವರನ್ನು ತುಳಿದು ಹಾಕಬಹುದು. ಹೀಗಿದ್ದರೂ ಅವರು ಉಪದೇಶ ಮತ್ತು ತರ್ಕದಿಂದ ಜನರನ್ನು ಗೆಲ್ಲಬಹುದೆಂದು ವಾದಿಸುತ್ತಾರೆ." ಆದುದರಿಂದ ಮೌಲಾನ ಶಾಂತಿಯುತ ಉಪದೇಶಗಳನ್ನು ತಿರಸ್ಕರಿಸುತ್ತಾರೆ. ಅವರು ಹೇಳುತ್ತಾರೆ:

**"ದೇವನು ದಯಪಾಲಿಸಿದ ಭೂಮಿಯಿಂದ ಕಲಹವನ್ನೂ ಅವ್ಯವಸ್ಥೆಯನ್ನೂ ಅಳಿಸಿ ಬಿಡಲು ಯಾರಾದರೂ ನಿಜವಾಗಿಯೂ ಬಯಸುವುದಾದರೆ ಮತ್ತು ಜನರನ್ನು ಸುಧಾರಣೆ ಮಾಡುವುದನ್ನು ದಿಟವಾಗಿಯೂ ಇಚ್ಛಿಸುವುದಾದರೆ ಕೇವಲ ಪ್ರವಚನಕಾರ ಮತ್ತು ಉಪದೇಶಕನಾಗಿ ಕೆಲಸ ಮಾಡುವುದು ನಿರರ್ಥಕವಾಗಿದೆ. ಅಂತಹ ವ್ಯಕ್ತಿ ಎದ್ದೇಳಬೇಕಾಗಿದೆ. ತಪ್ಪು ತತ್ವಗಳ ಸರಕಾರಗಳನ್ನು ಕೊನೆಗೊಳಿಸಬೇಕಾಗಿದೆ. ತಪ್ಪು ಕೆಲಸಗಳನ್ನು ಮಾಡುತ್ತಿರುವ ಜನರಿಂದ ಅಧಿಕಾರವನ್ನು ಕಿತ್ತುಕೊಂಡು ಸರಿಯಾದ ಸಿದ್ಧಾಂತಗಳ ಮತ್ತು ಕಾರ್ಯವಿಧಾನಗಳ ಸರಕಾರವನ್ನು ಸ್ಥಾಪಿಸಬೇಕಾಗಿದೆ." (ಹಖೀಖತೆ ಜಿಹಾದ್ - ಪುಟ 11)**

ಆದರೆ ಕಾರ್ಲ್ ಮಾರ್ಕ್ಸ್‌ರವರ ತತ್ವಗಳನ್ನು ಮಾದರಿಯಾಗಿಟ್ಟುಕೊಂಡಿರುವ ಮೌದೂದಿ ಪ್ರತಿಪಾದಿಸುವ ಸುಧಾರಣೆಯ ವಿಧಾನವು ದೇವನು ಮಾನವರನ್ನು ರಕ್ಷಿಸಲು ನಿರ್ದೇಶಿಸಿರುವ ವಿಧಾನವಲ್ಲ. ದೇವನು ನಿರ್ದೇಶಿಸುವ ಪದ್ಧತಿಯ ಪ್ರಕಾರ ಉಪದೇಶದ ಮೂಲಕ ಮನವೊಲಿಕೆ ಎಷ್ಟು ಮುಖ್ಯವಾಗಿದೆ ಎಂದರೆ ಸಾರ್ವತ್ರಿಕ ನೈತಿಕ ಪತನವಾಗಿರುವ ಕಾಲಘಟ್ಟದಲ್ಲಿ ಸಹ ಭಕ್ತರಾದ ಸತ್ಯವಿಶ್ವಾಸಿಗಳು, "ಸತ್ಯಕ್ಕೋಸ್ಕರ ಪರಸ್ಪರ ಉಪದೇಶಿಸುವವರೂ ತಾಳ್ಮೆಗೋಸ್ಕರ ಅನ್ಯೋನ್ಯ ಉಪದೇಶಿಸುವವರೂ" (ಪವಿತ್ರ ಖುರ್‌ಆನ್ 103 : 4) ಆಗಿ ಜಯಗಳಿಸುತ್ತಾರೆ.

ಚರಿತ್ರೆಗೆ ಮೇಲಿಂದ ಮೇಲೆ ದೃಷ್ಟಿ ಹಾಯಿಸಿದರೂ ಸಹ ನಮಗೆ ತಿಳಿದು ಬರುವುದೇನೆಂದರೆ, ಆಧ್ಯಾತ್ಮಿಕ ಮತ್ತು ನೈತಿಕ ಕ್ರಾಂತಿಯನ್ನುಂಟು ಮಾಡಲಿಕ್ಕೋಸ್ಕರ ಜನರನ್ನು ಸತ್ಯ ಮತ್ತು ಉಪದೇಶದ ಮೂಲಕ ಗೆಲ್ಲಲು ದೇವನು ತಮ್ಮ ದಾಸರಿಗೆ ಹೇಳುತ್ತಾನೆ. ಸಹನೆ ಮತ್ತು ಪ್ರಾರ್ಥನೆ ಧಾರ್ಮಿಕ ಕ್ರಾಂತಿಯ ಅಖಂಡ ಭಾಗಗಳಾಗಿವೆ. ದೇವನ ವಾಗ್ದಾನವು ಈಡೇರುವ ತನಕ ಜನರಿಗೆ ಉಪದೇಶಗಳನ್ನು ನೀಡುತ್ತಾ ಇರಬೇಕಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಅಂತಿಮ ವಿಜಯ ಭಯಭಕ್ತಿಯನ್ನು ತೋರ್ಪಡಿಸುವವರಿಗೆ." (7 : 129)

ದೇವನ ಎಲ್ಲಾ ಸಂದೇಶವಾಹಕರು ಧಾರ್ಮಿಕ ಸುಧಾರಣೆಗೆ ಮೇಲಿನ ವಿಧಾನವನ್ನು ಅನುಸರಿಸಿದರು. ಇದು ಕಾರ್ಲ್ ಮಾರ್ಕ್ಸ್ ಪ್ರತಿಪಾದಿಸುವ ಬಲಾತ್ಕಾರದ ಬಳಕೆಗೆ ಸಂಪೂರ್ಣ ವಿರುದ್ಧವಾಗಿದೆ. ಪವಿತ್ರ ಖುರ್‌ಆನ್ ಅನೇಕ ಪ್ರವಾದಿಗಳ ಮತ್ತು ಶುಭವಾರ್ತೆ ನೀಡುವವರ ಚರಿತ್ರೆಯನ್ನು ಸಂರಕ್ಷಿಸಿ ಇರಿಸಿದೆ. ಪವಿತ್ರ ಖುರ್‌ಆನ್ ವಿವರಿಸುವ ಚರಿತ್ರೆ ಪ್ರಕಾರ ಪ್ರವಾದಿ ನೂಹ್‌ರವರು(ಅ) ಉಂಟುಮಾಡಿದ ಕ್ರಾಂತಿಯ ಆಯುಧ ಉಪದೇಶವಾಗಿತ್ತು. ಪ್ರವಾದಿ ಇಬ್ರಾಹೀಮ್‌ರವರ(ಅ) ಆಯುಧವೂ ಇದೇ ಆಗಿತ್ತು. ಪ್ರವಾದಿ ಶುಐಬ್(ಅ) ಮತ್ತು ಪ್ರವಾದಿ ಸಾಲಿಹ್(ಅ) ಇದೇ ಆಯುಧ ಬಳಸಿದರು.

ಪ್ರವಾದಿ ಲೂತ್(ಅ) ಮತ್ತು ಪ್ರವಾದಿ ಮೂಸಾ(ಅ) ಸಹ ಉಪದೇಶಕರಾಗಿದ್ದರು. ಪ್ರವಾದಿ ಈಸಾ(ಅ) ತನ್ನ ಪ್ರವಚನಗಳ ಮೂಲಕ ಕ್ರಾಂತಿ ಉಂಟುಮಾಡಿದರು. ಪ್ರವಾದಿಗಳ ಮುದ್ರೆಯಾದ ಎಲ್ಲಾ ಕಾಲಗಳ ಪ್ರಮುಖ ಸುಧಾರಕರಾದ ನಮ್ಮ ನೇತಾರರಾದ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಜಾಗತಿಕ ಆಧ್ಯಾತ್ಮಿಕ ಕ್ರಾಂತಿಯನ್ನುಂಟುಮಾಡಲು ದೇವನಿಂದ ಕಳುಹಿಸಲ್ಪಟ್ಟಾಗ, ಅವರಿಗೆ ದೇವನಿಂದ ನೀಡಲಾದ ಆಯುಧವು ಉಪದೇಶ ನೀಡುವಿಕೆ ಮಾತ್ರವಾಗಿತ್ತು. ದೇವನ ಪವಿತ್ರ ಸಂದೇಶವಾಹಕರ ಈ ಸಂಪ್ರದಾಯವನ್ನು ಮೌಲಾನ ಮೌದೂದಿ ಕಡೆಗಣಿಸುತ್ತಾರೆ. ಮಾತ್ರವಲ್ಲ ಅದನ್ನು ಈ ಕೆಳಗಿನ ಮಾತುಗಳ ಮೂಲಕ ಖಂಡಿಸುತ್ತಾರೆ:

"ದೇವನು ದಯಪಾಲಿಸಿದ ಭೂಮಿಯಿಂದ ಕಲಹವನ್ನೂ ಅವ್ಯವಸ್ಥೆಯನ್ನೂ ಅಳಿಸಿಬಿಡಲು ಯಾರಾದರೂ ನಿಜವಾಗಿಯೂ ಬಯಸುವುದಾದರೆ ಮತ್ತು ಜನರ ಸುಧಾರಣೆ ಮಾಡುವುದನ್ನು ದಿಟವಾಗಿಯೂ ಇಚ್ಛಿಸುವುದಾದರೆ ಕೇವಲ ಪ್ರವಚನಕಾರ ಮತ್ತು ಉಪದೇಶಕನಾಗಿ ಕೆಲಸ ಮಾಡುವುದು ನಿರರ್ಥಕವಾಗಿದೆ." (ಹಖೀಖತೆ ಜಿಹಾದ್ ಪುಟ - 11)

ಮೌದೂದಿಯ ಈ ಹೇಳಿಕೆಯನ್ನು ದೇವನ ಸಂದೇಶವಾಹಕರ ಕಡಿದು ಹೋಗದ ಸಂಪ್ರದಾಯದೊಂದಿಗೆ ಹೋಲಿಸಿ ನೋಡೋಣ. ಪ್ರವಾದಿ ನೂಹ್‌ರವರ(ಅ) ಜನತೆ ಅವರನ್ನು ಆಕ್ಷೇಪಿಸುತ್ತಾ "ಸ್ಪಷ್ಟವಾದ ತಪ್ಪು ದಾರಿ"ಯಲ್ಲಿ ಅವರಿರುವುದಾಗಿ ಹೇಳಿದಾಗ ಪ್ರವಾದಿ ನೂಹ್(ಅ) ಹೇಳಿದರು :

"ನನ್ನ ಜನರೇ, ನಾನು ತಪ್ಪುದಾರಿಯಲ್ಲಿಲ್ಲ. ಆದರೆ ನಾನು ಸರ್ವಲೋಕ ಪ್ರಭುವಿನಿಂದ (ನಿಯೋಜಿಸಲ್ಪಟ್ಟ) ಒಬ್ಬ ಸಂದೇಶವಾಹಕನಾಗಿದ್ದೇನೆ. ನನ್ನ ಪ್ರಭುವಿನ ಸಂದೇಶಗಳನ್ನು ನಾನು ನಿಮಗೆ ತಲುಪಿಸುತ್ತೇನೆ. ನಾನು ನಿಮಗೆ ಸದುಪದೇಶ ನೀಡುತ್ತೇನೆ ಹಾಗೂ ನಿಮಗೆ ತಿಳಿಯದೆ ಇರುವುದನ್ನು ಅಲ್ಲಾಹನು ನೀಡಿದ ಜ್ಞಾನದಿಂದ ನಿಮಗೆ ತಿಳಿಸಿಕೊಡುತ್ತೇನೆ." (ಪವಿತ್ರ ಖುರ್‌ಆನ್ 7 : 62, 63)

ಪ್ರವಾದಿ ನೂಹ್‌ರವರ(ಅ) ಈ ಚರಿತ್ರೆಯನ್ನು ಹೇಳಿದುದು ಪವಿತ್ರ ಖುರ್‌ಆನ್ ಆಗಿದೆ. ಆದರೆ ಮೌದೂದಿಯ ಹೇಳಿಕೆಯ ಪ್ರಕಾರ ಹೇಳುವುದಾದರೆ ಪ್ರವಾದಿ ನೂಹ್(ಅ) ಹೀಗೆ ಹೇಳಬೇಕಾಗಿತ್ತು: "ನಾನು ದೇವನ ಸಂದೇಶವಾಹಕನಾಗಿದ್ದೇನೆ. ನೀವು ಇಚ್ಛಿಸಿದರೂ ಇಚ್ಛಿಸದಿದ್ದರೂ ನಾನು ನಿಮ್ಮ ಮಲೆ ನಿಗಾ ಇಡಲು ಸಾತ್ವಿಕ ಜನರ ಒಂದು ಗುಂಪನ್ನು ನೇಮಿಸುವೆನು. ಅವರು ನಿಮ್ಮ ಅಧಿಕಾರವನ್ನು ಕಿತ್ತುಕೊಳ್ಳುವರು."

ಆದ್ ಜನಾಂಗದ ಜನರು ಪ್ರವಾದಿ ಹೂದ್‌ರವರೊಂದಿಗೆ(ಅ) "ನಿಶ್ಚಯವಾಗಿಯೂ ನೀನು ಮೂರ್ಖತನದಲ್ಲಿರುವುದಾಗಿ ನಾವು ಕಾಣುತ್ತೇವೆ" ಎಂದು ಹೇಳಿದಾಗ ಪ್ರವಾದಿ ಹೂದ್‌ರವರು(ಅ) ಹೀಗೆ ಉತ್ತರಿಸಲಿಲ್ಲ: "ನೀವು ಮೋಸ ಹೋಗಬೇಡಿರಿ. ನನ್ನ ಉಪದೇಶ ನಿಮಗೆ ಹಾನಿಯನ್ನುಂಟು ಮಾಡದ ಕಾರಣ ನನ್ನನ್ನು ಮೂರ್ಖನೆಂದು ಭಾವಿಸ ಬೇಡಿರಿ. ವಾಸ್ತವಿಕವಾಗಿ ನಾನೊಬ್ಬ ದಬ್ಬಾಳಿಕೆಗಾರನಾಗಿದ್ದೇನೆ. ದೇವನ ವಿರುದ್ಧ ವಿದ್ರೋಹ ಮಾಡಿದವರ ಕೈಗಳಿಂದ ನಾನು ಅಧಿಕಾರವನ್ನು ಕಿತ್ತುಕೊಳ್ಳುವೆನು ಮತ್ತು ನನ್ನವರಾದ ಸಾತ್ವಿಕ ಜನರಿಗೆ ಅದನ್ನು ಕೊಡುವೆನು." ನಿಶ್ಚಯವಾಗಿಯೂ ಅವರು ಹಾಗೆ ಹೇಳಲಿಲ್ಲ. ಅವರು ತನ್ನ ಹಿಂದಿನ ಪ್ರವಾದಿಗಳ ಪರಂಪರಾಗತ ನಡವಳಿಕೆಯನ್ನು ಅನುಸರಿಸಿ ಹೀಗೆ ಹೇಳಿದರು: ನನ್ನ ಜನರೇ, ನನ್ನಲ್ಲಿ ಮೂರ್ಖತನವೇನೂ ಇಲ್ಲ. ಆದರೆ ನಾನು ಸರ್ವಲೋಕಗಳ ಪ್ರಭುವಿನಿಂದ ನಿಯೋಜಿತನಾದ ಒಬ್ಬ ಸಂದೇಶವಾಹಕನಾಗಿದ್ದೇನೆ. ನಾನು ನಿಮಗೆ ನನ್ನ ಪ್ರಭುವಿನ ಸಂದೇಶವನ್ನು ತಲುಪಿಸುತ್ತೇನೆ. ನಾನು ನಿಮಗೆ ಪ್ರಾಮಾಣಿಕನಾದ ಒಬ್ಬ ಉಪದೇಶಕನಾಗಿದ್ದೇನೆ." (ಪವಿತ್ರ ಖುರ್‌ಆನ್ 7 : 68, 69)

ಸಮೂದ್ ಜನಾಂಗದ ಜನರು ಆದ್ ಜನಾಂಗದ ಜನರ ಹಾಗೆಯೇ ತಮ್ಮ ಪ್ರವಾದಿ ಸಾಲಿಹ್‌ರವರನ್ನು(ಅ) ತಿರಸ್ಕರಿಸಿದರು ಮತ್ತು ಅವರ ವಿರುದ್ಧ ಅನೇಕ ಆಕ್ಷೇಪಗಳನ್ನು ಮಾಡಿದರು. ಪ್ರವಾದಿ ಸಾಲಿಹ್‌ರವರು(ಅ) ಪ್ರವಾದಿ ನೂಹ್(ಅ) ಮತ್ತು ಪ್ರವಾದಿ ಹೂದ್‌ರವರನ್ನು(ಅ) ಅನುಸರಿಸುತ್ತಾ ಹೀಗೆ ಹೇಳಿದರು: "ನನ್ನ ಜನರೇ, ನನ್ನ ಪ್ರಭುವಿನ ಸಂದೇಶವನ್ನು ನಾನು ನಿಮಗೆ ತಲುಪಿಸಿದೆನು. ನಾನು ನಿಮಗೆ ಪ್ರಾಮಾಣಿಕವಾಗಿ ಉಪದೇಶ ನೀಡಿದೆನು. ಆದರೆ ನೀವು ಪ್ರಾಮಾಣಿಕವಾಗಿ ಉಪದೇಶಿಸುವವರನ್ನು ಮೆಚ್ಚುವುದಿಲ್ಲ." (ಪವಿತ್ರ ಖುರ್‌ಆನ್ 7 : 80)

ಅನಂತರ ದೇವನು ಪ್ರವಾದಿ ಲೂತ್‌ರವರನ್ನು(ಅ) ಕಳುಹಿಸಿದಾಗ ಅವರ ಅನುಯಾಯಿಗಳು ದಾರಿತಪ್ಪಿಹೋದವರಿಂದ ಅಧಿಕಾರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಲಿಲ್ಲ. ತಮ್ಮ ಜನತೆಯು ಶಿಕ್ಷೆಗೆ ಗುರಿಯಾಗುವ ತನಕ ಅವರು ಉಪದೇಶ ನೀಡುತ್ತಾ ಇದ್ದರು. ಮುನ್ನೆಚ್ಚರಿಕೆ ನೀಡಲ್ಪಟ್ಟ ಶಿಕ್ಷೆಯು ಬಂದೆರಗುವ ಮೊದಲು ದೇವಾನುಮತಿಯಂತೆ ಪ್ರವಾದಿ ಲೂತ್(ಅ) ತನ್ನ ಅನುಯಾಯಿಗಳೊಂದಿಗೆ ತಮ್ಮ ಮನೆಗಳನ್ನು ಬಿಟ್ಟು ದೂರ ಹೋದರು. ನಿರಂಕುಶರಾದ ಜನರನ್ನು ಯಾವಾಗಲೂ ಮುನ್ನೆಚ್ಚರಿಸಲಾಗುತ್ತಿದ್ದ ಆ ಮುಂಜಾನೆ ಬಂದುಬಿಟ್ಟಿತು. "ಅದು (ಶಿಕ್ಷೆ) ಅವರ ಅಂಗಳದಲ್ಲಿ ಬಂದರೆಗುವಾಗ ಅದು ಮುನ್ನೆಚ್ಚರಿಕೆ ನೀಡಲ್ಪಟ್ಟವರಿಗೆ ಕೆಟ್ಟ ಮುಂಜಾನೆಯಾಗಿರಬಹುದು." (ಪವಿತ್ರ ಖುರ್‌ಆನ್ 37 : 178)

ಪವಿತ್ರ ಖುರ್‌ಆನಿನ ಏಳನೆಯ ಅಧ್ಯಾಯವು ದಾರಿ ತಪ್ಪಿಹೋದ ಜನರನ್ನು ಸುಧಾರಣೆ ಮಾಡಲು ಪ್ರಯತ್ನಿಸಿದ ಪ್ರವಾದಿಗಳ ಚರಿತ್ರೆಯನ್ನು ಮುಂದುವರಿಸುತ್ತಾ ಹೋಗುತ್ತದೆ. ಪ್ರವಾದಿ ಲೂತ್‌ರವರ(ಅ) ಚರಿತ್ರೆಯನ್ನು ಹೇಳಿದ ನಂತರ ಪ್ರವಾದಿ ಶುಐಬ್(ಅ) ತನ್ನನ್ನು ಚಿತ್ರಹಿಂಸೆಗೆ ಗುರಿ ಮಾಡಿದ ದುರಂಹಕಾರಿಗಳಾದ ಜನರನ್ನು ಸಂಬೋಧಿಸಿ ಹೇಳಿದ ಮಾತನ್ನು ಪವಿತ್ರ ಖುರ್‌ಆನ್ ಹೀಗೆ ಉಲ್ಲೇಖಿಸುತ್ತದೆ:

"ಓ ನನ್ನ ಜನರೇ, ನಿಶ್ಚಯವಾಗಿಯೂ ನಾನು ನನ್ನ ಪ್ರಭುವಿನ ಸಂದೇಶವನ್ನು ನಿಮಗೆ ತಲುಪಿಸಿದ್ದೇನೆ. ಸದುಪದೇಶವನ್ನೂ ನೀಡಿದ್ದೇನೆ. ಹಾಗಿರುವಾಗ ಅವಿಶ್ವಾಸಿಗಳಾದ ಜನರ ಬಗ್ಗೆ ನಾನೇಕೆ ವ್ಯಾಕುಲಗೊಳ್ಳಬೇಕು?" (7 : 94)

ಮೌಲಾನ ಮೌದೂದಿ ಮತ್ತು ಇತರ ಎಲ್ಲಾ ಮುಸ್ಲಿಮರು ಪವಿತ್ರ ಖುರ್‌ಆನನ್ನು ದೇವ ವಚನವೆಂದು ನಂಬುತ್ತಾರೆ. ಆ ಪವಿತ್ರ ಗ್ರಂಥ ಹೀಗೆ

ಹೇಳುತ್ತದೆ: ದೇವನ ಸಂದೇಶವಾಹಕರು ಪ್ರವಚನಗಳನ್ನೂ ಸದುಪದೇಶವನ್ನೂ ನೀಡುತ್ತಾರೆ. ಅವುಗಳನ್ನು ಜನರು ತಿರಸ್ಕರಿಸಿದಾಗ ಸಂದೇಶವಾಹಕರು ದೇವನ ಮುಂದೆ ಅಳುತ್ತಾ ಪ್ರಾರ್ಥಿಸುತ್ತಾರೆ. ಅವರಿಗೆ ತಾವು ತಂದ ದೈವಿಕ ಸಂದೇಶದ ಕುರಿತು ಅಚಂಚಲ ವಿಶ್ವಾಸವಿರುತ್ತದೆ. ಅವರು ತಮ್ಮ ವಿರೋಧಿಗಳಿಂದ ಅಧಿಕಾರವನ್ನು ಕಿತ್ತುಕೊಳ್ಳಲಿಕ್ಕಾಗಿ ಪ್ರಯತ್ನಿಸುವ ಬದಲು ಅವರು ತಮ್ಮ ವಿರೋಧಿಗಳೊಂದಿಗೆ ಪ್ರೀತಿ ಮತ್ತು ದಯೆಯಿಂದ ವರ್ತಿಸುತ್ತಾರೆ. ಅವರು ಸಭ್ಯತೆಯಿಂದ ವಾದಿಸುತ್ತಾರೆ. ಅವರು ವಿನೀತರಾಗಿ ಉಪದೇಶಿಸುತ್ತಾರೆ ಮತ್ತು ಪರಿಣಾಮವನ್ನು ದೇವರಿಗೆ ಬಿಡುತ್ತಾರೆ. ದೇವನು ಮಾತ್ರ ಪ್ರಭುವಾಗಿದ್ದಾನೆ. ಅವನು ತಾನಿಚ್ಛಿಸುವವರಿಗೆ ತನ್ನ ಭೂಮಿಯನ್ನು ದಯಪಾಲಿಸುತ್ತಾನೆ. ಎಲ್ಲಾ ಪ್ರವಾದಿಗಳ ಅಭಿಲಾಷೆಗಳನ್ನು ಪ್ರವಾದಿ ಮೂಸಾರವರ(ಅ) ಈ ಕೆಳಗಿನ ಮಾತಲ್ಲಿ ಸಂಕ್ಷೇಪಿಸಿ ಹೇಳಲಾಗಿದೆ:

"ನಮ್ಮ ಪ್ರಭೂ, ನೀನು ನಮಗೆ ಸ್ಥಿರಚಿತ್ತವನ್ನು ದಯಪಾಲಿಸು. ನಿನಗೆ ನಾವು ವಿಧೇಯರಾಗಿದ್ದುಕೊಂಡಿರುವ ಸ್ಥಿತಿಯಲ್ಲೇ ನೀನು ನಮಗೆ ಮರಣವನ್ನು ಕೊಡು." (ಪವಿತ್ರ ಖುರ್‌ಆನ್ 7 : 127) ಪ್ರವಾದಿ ಮೂಸಾ(ಅ) ತನ್ನ ಜನರಿಗೆ ಹೀಗೆ ಉಪದೇಶಿಸಿದರು: "ನೀವು ಅಲ್ಲಾಹನ ಸಹಾಯವನ್ನು ಯಾಚಿಸಿರಿ ಮತ್ತು ಅವನ ಸಹನೆಯನ್ನು ಕೈಗೊಳ್ಳಿರಿ." (ಪವಿತ್ರ ಖುರ್‌ಆನ್ 7 : 129) ಅವರು ಹೀಗೆಯೂ ಹೇಳಿದರು: "ಖಂಡಿತವಾಗಿಯೂ ಭೂಮಿ ಅಲ್ಲಾಹನದ್ದಾಗಿದೆ. ಅವನ ದಾಸರ ಪೈಕಿ ತಾನು ಇಷ್ಟಪಡುವವರಿಗೆ ಅವನು ಅದನ್ನು ವಾರಸು ಹಕ್ಕಾಗಿ ನೀಡುತ್ತಾನೆ." (ಪವಿತ್ರ ಖುರ್‌ಆನ್ 7 : 129) ಸಾತ್ವಿಕರಾದ ಜನರು ಅಧಿಕಾರವನ್ನು ಬಲಾತ್ಕಾರದಿಂದ ಕಿತ್ತುಕೊಳ್ಳಬಾರದು. ನಮಗೆ ತಿಳಿದಿರುವುದು ಇಷ್ಟು ಮಾತ್ರವಾಗಿದೆ: "ಅಂತಿಮ ವಿಜಯ ಭಯ ಭಕ್ತಿಯನ್ನು ತೋರ್ಪಡಿಸುವವರಿಗೆ" (ಪವಿತ್ರ ಖುರ್‌ಆನ್ 7 : 129)

ಪ್ರವಾದಿ ಮೂಸಾರವರ(ಅ) ನಂತರ ಪ್ರವಾದಿ ಈಸಾ(ಅ) ತನ್ನ ಜೀವಿತದಲ್ಲಿ ಉಪದೇಶಿಸುತ್ತಾ ಇದ್ದರು. ಅವರು ಅಧಿಕಾರವನ್ನು ಕಿತ್ತುಕೊಳ್ಳಲು ಎಂದೂ ಪ್ರಯತ್ನಿಸಲಿಲ್ಲ. ಕೊನೆಗೆ ಎಲ್ಲಾ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಜನರನ್ನು ಉಪದೇಶಗಳ ಮೂಲಕ ಸುಧಾರಣೆ ಮಾಡುವ ಪ್ರವಾದಿಯಾಗಿ ಕಳುಹಿಸಲ್ಪಟ್ಟರೇ ಹೊರತು ಒಬ್ಬ ಪೊಲೀಸನಂತೆ ಅಥವಾ ಸೈನಿಕನಂತೆ ಅಲ್ಲ. ಅಲ್ಲಾಹನು ಅವರನ್ನು "ಉಪದೇಶಕ" ಎಂದು ಹೆಸರಿಸಿ ಹೀಗೆ ಹೇಳುತ್ತಾನೆ:

"ನೀನು ಉಪದೇಶಿಸು; ನೀನಾದರೋ ಕೇವಲ ಉಪದೇಶಕನಾಗಿರುವೆ. ನೀನು ಅವರ ಮೇಲೆ ಕಾವಲುಗಾರನಲ್ಲ." (ಪವಿತ್ರ ಖುರ್‌ಆನ್ 88 : 22, 23)

ಆದರೆ ಮೌಲಾನ ಮೌದೂದಿ ತನ್ನ ಮತ್ತು ತನ್ನ ಹಿಂಬಾಲಕರ ಕುರಿತು ಹೇಳುವುದು - "ಇದು ಧರ್ಮ ಪ್ರಚಾರ ಮಾಡುವ ಪ್ರವಚನಕಾರರ ಮತ್ತು ಸುವಾರ್ತೆ ನೀಡುವವರ ಸಂಘವಲ್ಲ. ಇದು ದೇವ ಸೈನಿಕರ ಸಂಘವಾಗಿದೆ. ಲಿತಕೂನೂ ಶುಹದಾಅ ಅಲನ್ನಾಸ್ - ಜನರ ಬಗ್ಗೆ ಸಾಕ್ಷಿಗಳಾಗಲಿಕ್ಕಾಗಿ. ಅವರ ಕೆಲಸವು ಲೋಕದಿಂದ ದೌರ್ಜನ್ಯ, ಕಲಹ, ಅವ್ಯವಸ್ಥೆ, ವಿದ್ರೋಹ ಮತ್ತು ಶೋಷಣೆಯನ್ನು ಬಲಪ್ರಯೋಗದಿಂದ ಅಳಿಸಿಬಿಡುವುದು." (ಹಖೀಖತೆ ಜಿಹಾದ್, ಪುಟ - 58)

ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠರಾದ ಮಹಾನ್ ಪ್ರವಾದಿಯೊಂದಿಗೆ ಅಲ್ಲಾಹನು ಹೇಳಿರುವುದು ಹೀಗೆ: "ನಾವು ನಿನ್ನನ್ನು ಅವರ ಸಂರಕ್ಷಕನನ್ನಾಗಿ ಮಾಡಲಿಲ್ಲ. ನೀನು ಅವರ ಕಾರ್ಯನಿರ್ವಾಹಕನೂ ಅಲ್ಲ." (ಪವಿತ್ರ ಖುರ್‌ಆನ್ 6 : 108)

ಆದರೆ ಮೌಲಾನ ಮೌದೂದಿ ತನಗೆ ಮತ್ತು ತನ್ನ ಹಿಂಬಾಲಕರಿಗೆ ಒಬ್ಬ ಪೊಲೀಸನ ಅಧಿಕಾರವನ್ನು ಮಾತ್ರವಲ್ಲ ಒಬ್ಬ ನ್ಯಾಯಾಧೀಶನ ಅಧಿಕಾರವನ್ನೂ ಮೀಸಲಾಗಿಟ್ಟುಕೊಳ್ಳುತ್ತಾರೆ.

ದೇವನು ತನ್ನ ಅತ್ಯಂತ ಶ್ರೇಷ್ಠ ಧರ್ಮ ಸುಧಾರಕನಿಗೆ ಅವಿಶ್ವಾಸಿಗಳ ಹೃದಯಗಳ ಮೇಲೆ ಲೌಕಿಕ ಅಧಿಕಾರವನ್ನು ನೀಡದೆ ಇರುವಾಗ ಅದನ್ನು ಮೌಲಾನ ಮೌದೂದಿ ಮತ್ತು ಅವರ ಹಿಂಬಾಲಕರಿಗೆ ನೀಡುವುದು ಆಶ್ಚರ್ಯಕರವಾದ ಸಂಗತಿಯಾಗಿದೆ. ದಯೆ ಮತ್ತು ಸಹಾನುಭೂತಿಯ ಪ್ರತಿರೂಪವಾಗಿದ್ದ ಹಝ್ರತ್ ಪ್ರವಾದಿಯವರು(ಸ) ಎಷ್ಟು ಕಷ್ಟಪಟ್ಟು ಅಲ್ಲಾಹನೊಂದಿಗೆ, ಮಾನವರೆಲ್ಲರನ್ನೂ ಸತ್ಪಥದಲ್ಲಿ ನಡೆಸಲು ತನ್ನನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾ ಇದ್ದರೆಂದರೆ ಅಲ್ಲಾಹನು ಅದಕ್ಕೆ ಉತ್ತರವಾಗಿ ಹೇಳಿದನು: "ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತ ಪಡಿಸುವೆಯೋ?" (ಪವಿತ್ರ ಖುರ್‌ಆನ್ 10 : 100)

ಸತ್ಯವಿಶ್ವಾಸಿಗಳ ಕುರಿತು ಅಲ್ಲಾಹನು ಹಝ್ರತ್ ಪ್ರವಾದಿಯವರೊಂದಿಗೆ(ಸ) ಹೀಗೆ ಹೇಳಿದನು:

"ಅಲ್ಲಾಹನು ಇಚ್ಛಿಸುತ್ತಿದ್ದರೆ (ತನ್ನ ಇಚ್ಛೆಯನ್ನು ಬಲವಂತವಾಗಿ ಹೇರುತ್ತಿದ್ದರೆ) ಅವರು (ಅಲ್ಲಾಹನಿಗೆ) ಸಹಭಾಗಿಗಳನ್ನು ಕಲ್ಪಿಸುತ್ತಿರಲಿಲ್ಲ. ನಾವು ನಿನ್ನನ್ನು ಅವರ ಸಂರಕ್ಷಕನನ್ನಾಗಿ ಮಾಡಲಿಲ್ಲ. ನೀನು ಅವರ ಕಾರ್ಯನಿರ್ವಾಹಕನೂ ಅಲ್ಲ." (ಪವಿತ್ರ ಖುರ್‌ಆನ್ 6 : 108)

ಪವಿತ್ರ ಖುರ್‌ಆನ್ ಉಲ್ಲೇಖಿಸಿರುವ ಸಂದೇಶವಾಹಕರ ನಡೆವಳಿಕೆಗಳಿಗೆ ವಿರುದ್ಧವಾಗಿ ಮೌಲಾನ ಮೌದೂದಿ ತನಗೂ ತನ್ನ ಹಿಂಬಾಲಕರಿಗೂ ದೇವದಾಸರನ್ನು ಬಲಾತ್ಕಾರಕ್ಕೆ ಗುರಿಪಡಿಸಿ ಹಿಂಸಿಸುವ ಅಧಿಕಾರವನ್ನು ನೀಡಿರುವರು. "ಲೋಕದಿಂದ ದೌರ್ಜನ್ಯ, ಕಲಹ, ಅವ್ಯವಸ್ಥೆ, ವಿದ್ರೋಹ ಮತ್ತು ಶೋಷಣೆಯನ್ನು ಬಲಪ್ರಯೋಗದಿಂದ ಅಳಿಸಿಬಿಡಲು" ತನ್ನ ಸಂಘವಾದ ಜಮಾಅತೆ ಇಸ್ಲಾಮಿಗೆ ಈ ಅಧಿಕಾರವನ್ನು ನೀಡಿರುತ್ತಾರೆ.

ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳುವ ಮಹತ್ವಾಕಾಂಕ್ಷೆಯು ಮೌಲಾನ ಮೌದೂದಿಯವರಲ್ಲಿ ಮಿತಿಯಿಲ್ಲದಷ್ಟು ಇತ್ತು. ಅದನ್ನು ಗಳಿಸಲು ಅವರು ಏನು ಮಾಡಲಿಕ್ಕೂ ಸಿದ್ಧರಾಗಿದ್ದರು. ಅವರು ರಾಜಕೀಯ ಅಧಿಕಾರ ಗಳಿಕೆಯ ಭ್ರಮೆಯಿಂದ ಎಷ್ಟು ಪೀಡಿತರಾಗಿದ್ದರೆಂದರೆ ಮುಸ್ಲಿಮರಿಗೆ ಆರಾಧನೆಯನ್ನು ಆಜ್ಞಾಪಿಸಿರುವುದು ಮುಸ್ಲಿಮೇತರರ ಅಧಿಕಾರವನ್ನು ಕಿತ್ತುಕೊಂಡು ಲೋಕವನ್ನು ಆಳಲು ತರಬೇತಿ ನೀಡಲಿಕ್ಕಾಗಿದೆ ಎಂದು ಹೇಳಿದರು. ಅವರ ದೃಷ್ಟಿಯಲ್ಲಿ ಆರಾಧನೆಗೆ ಆಧ್ಯಾತ್ಮಿಕವಾದ ಯಾವ ಉದ್ದೇಶವೂ ಇಲ್ಲ. ಆರಾಧನೆ ಅವರ ದೃಷ್ಟಿಯಲ್ಲಿ ಮನುಷ್ಯ ಮತ್ತು ದೇವನ ಭೇಟಿಯನ್ನು ದಯಪಾಲಿಸುವ ಧಾರ್ಮಿಕ ಅನುಭವವಲ್ಲ; ಅದು ಕೇವಲ ಶಿಸ್ತನ್ನುಂಟು ಮಾಡುವ ಒಂದು ಆಚರಣೆ ಮಾತ್ರವಾಗಿದೆ. ಆದರೆ ಅಲ್ಲಾಹನು ಹೇಳುವುದೇನೆಂದರೆ:

"ನನ್ನನ್ನು ಆರಾಧಿಸಲಿಕ್ಕೋಸ್ಕರ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ." (ಪವಿತ್ರ ಖುರ್‌ಆನ್51 : 57)

ದೇವಾರಾಧನೆಗೋಸ್ಕರ ಪ್ರಪಂಚ ಸೃಷ್ಟಿಸಲ್ಪಟ್ಟಿದೆ. ಆರಾಧನೆಯ ಉದ್ದೇಶ ಬೇರೆ ಏನೂ ಅಲ್ಲ. ಆದರೆ ಮೌಲಾನ ಮೌದೂದಿ ಹೇಳುವುದೇನೆಂದರೆ:

"ಈ ನಮಾಝ್, ಉಪವಾಸ, ಝಕಾತ್ ಮತ್ತು ಹಜ್ಜ್ ಇದೇ ಸಿದ್ಧತೆ ಮತ್ತು ತರಬೇತಿಗಾಗಿವೆ. ಲೋಕದ ಎಲ್ಲಾ ಸರಕಾರಗಳು ತಮ್ಮ ಸೈನ್ಯ, ಪೊಲೀಸ್ ಮತ್ತು ಸಿವಿಲ್ ಸರ್ವೀಸ್‌ಗಾಗಿ ಮೊದಲು ವಿಶಿಷ್ಟ ತರಬೇತಿ ನೀಡಿ ಅನಂತರ ಅವರಿಂದ ಸೇವೆಯನ್ನು ಪಡೆಯುತ್ತಾರೆ. ಅದೇ ರೀತಿ ಇಸ್ಲಾಮ್ ಸಹ ಅದರ ಸೇವೆಗಾಗಿ ಭರ್ತಿಯಾಗುವ ಜನರಿಗೆ ವಿಶಿಷ್ಟವಾದ ರೀತಿಯಲ್ಲಿ ತರಬೇತಿ ನೀಡುತ್ತದೆ. ಅನಂತರ ಅವರಿಂದ ಜಿಹಾದ್ ಮತ್ತು ದೈವಿಕ ಆಡಳಿತೆಯ ಸೇವೆಯನ್ನು ಪಡೆಯಲು ಬಯಸುತ್ತದೆ." (ಹಖೀಖತೆ ಜಿಹಾದ್ ಪುಟ - 6)

ಆರಾಧನೆಗೆ ಲೌಕಿಕವಾದ ಒಂದು ಕಲ್ಪನೆಯನ್ನು ಯಾವ ಧರ್ಮವೂ ನೀಡುವುದಿಲ್ಲ. ಆದರೆ ಅಧಿಕಾರ ಗಳಿಕೆಯ ಮಹತ್ವಾಕಾಂಕ್ಷೆಯಿಂದ ಸದಾ ಪೀಡಿತನಾಗಿರುವವನಿಗೆ ದೇವಾರಾಧನೆ ಸಹ ಸೈನಿಕರ ಕವಾಯತಿಗಿಂತ ಹೆಚ್ಚಿನ ಮಹತ್ವವುಳ್ಳದ್ದಾಗಿರುವುದಿಲ್ಲ.

ಮಹತ್ವಾಕಾಂಕ್ಷೆಯು ಅಸಹನೆಯಿಂದ ಕೂಡಿರುತ್ತದೆ. ಆದರೆ ಎಲ್ಲಾ ಮಹತ್ವಾಕಾಂಕ್ಷೆಗಳಿಗಿಂತ ಅಧಿಕಾರದ ಹುಚ್ಚು ಬಹಳ ಆತುರ ಪಡುವುದಾಗಿರುತ್ತದೆ. ಆದುದರಿಂದ ಮೌಲಾನ ಮೌದೂದಿ ನೇರ ಮಾರ್ಗದಲ್ಲಿ ಮುಂದೆ ಸಾಗಲಾರರು. ನೇರ ಮಾರ್ಗ ಇಕ್ಕಟ್ಟಾದುದೂ ಬಹಳ ದೀರ್ಘವಾದುದೂ ಆಗಿದೆ. ಅದೇ ರೀತಿ ಮಾರ್ಕ್ಸ್ ತತ್ವಗಳು ದೀರ್ಘ ಮತ್ತು ಕಷ್ಟಕರವಾದ ಪ್ರಜಾಪ್ರಭುತ್ವದ ಮಾರ್ಗವನ್ನು ಅವಲಂಬಿಸಿ. ದಮನಿಸಲ್ಪಟ್ಟ ಜನರನ್ನು ಬಿಡುಗಡೆಗೊಳಿಸಲಾರದು. ಆದುದರಿಂದ ಅದು ಚುನಾಯಿತ ಸರಕಾರವನ್ನು ಕೆಡವಿ ಹಾಕಲು ಹಿಂಸೆಯ ಮಾರ್ಗವನ್ನು ಅವಲಂಬಿಸಿರುತ್ತದೆ. ಮೌಲಾನ ಮೌದೂದಿ ಸೂಚಿಸುವ ಸುಧಾರಣೆಯ ವಿಧಾನವು ಸಾಯುಧ ಹೋರಾಟದ ಮಾರ್ಕ್ಸ್ ಸಿದ್ಧಾಂತಕ್ಕಿಂತ ಭಿನ್ನವಾದುದಲ್ಲ. ಮೌಲಾನ ಮೌದೂದಿ ಹೇಳುತ್ತಾರೆ:

"ನಿಮಗೆ ಶಕ್ತಿ ಇರುವಲ್ಲೆಲ್ಲಾ ನೀವು ಅಲ್ಲಿ ಜನರ ಸುಧಾರಣೆಗಾಗಿ ಎದ್ದೇಳಿರಿ. ಸರಕಾರದ ಕೆಟ್ಟ ಧೋರಣೆಗಳನ್ನು ಸರಿಯಾದ ಧೋರಣೆಯ ಮೂಲಕ ಬದಲಾಯಿಸಲು ಪ್ರಯತ್ನಿಸಿರಿ. ದೇವನಿಗೆ ಭಯಪಡದ ಕಡಿವಾಣವಿಲ್ಲದ ಕುದುರೆಯ ಹಾಗಿರುವ ಜನರಿಂದ ಕಾನೂನು ಕಾಯಿದೆಗಳನ್ನು ರಚಿಸುವ ಮತ್ತು ಕಾನೂನು ಜಾರಿಗೊಳಿಸುವ ಅಧಿಕಾರವನ್ನು ಕಿತ್ತುಕೊಳ್ಳಿರಿ." (ಹಖೀಖತೆ ಜಿಹಾದ್ ಪುಟ - 15)

ದೀರ್ಘಕಾಲದ ರಾಜಕೀಯ ಅನುಭವ ಹೊಂದಿದ್ದ ಮೌಲಾನ ಮೌದೂದಿಯಂತಹ ಪತ್ರಕರ್ತನಿಗೆ ಸರಕಾರಗಳನ್ನು ಯಾವ ಕಾರಣದಿಂದಲೂ ಬಲಪ್ರಯೋಗಿಸಿ ಕಿತ್ತುಹಾಕಬಾರದೆಂಬ ತತ್ವವು ಅರ್ಥವಾಗದುದು ಆಶ್ಚರ್ಯಕರವಾಗಿದೆ. ಈ ಮೂಲತತ್ವಕ್ಕೆ ಭಂಗ ಉಂಟಾಗುವಂತೆ ವರ್ತಿಸುವುದರಿಂದ ಕಾನೂನು ಮತ್ತು ವ್ಯವಸ್ಥೆಗೆ ಚ್ಯುತಿಯುಂಟಾಗುತ್ತದೆ. ಅಂತರ್ಯುದ್ಧದ ಬೆಂಕಿಯು ಸಮಾಜದ ಚೌಕಟ್ಟನ್ನೇ ಸುಟ್ಟುಹಾಕುವುದು.

ಮೊದಲನೆಯದಾಗಿ, ಒಂದು ಪಕ್ಷವು ತನ್ನ ಬಗ್ಗೆ ತಾನೇ ತೀರ್ಪು ನೀಡಿ ತನ್ನ ಉದ್ದೇಶ ಲಕ್ಷ್ಯಗಳು ಉತ್ತಮವೆಂದು ಹೇಳಲು ಅನುಮತಿಸಲಾಗದು. ಆ ಪಕ್ಷದ ಉದ್ದೇಶಗಳು ಉತ್ತಮವಾಗಿದ್ದರೂ ವಿರೋಧ ಪಕ್ಷದ ಪ್ರತಿಯೊಬ್ಬನೂ ಕ್ರೂರಿ, ಅಕ್ರಮಿ ಅಥವಾ ಕೆಟ್ಟವನೆಂದೂ 'ದೇವ ಸೈನಿಕರ' ಪಕ್ಷದ ಪ್ರತಿಯೊಬ್ಬನೂ ಪರಿಶುದ್ಧನೂ ದೇವನಿಗೆ ಭಯಪಡುವವನೂ ದುರಾಸೆ ಮತ್ತು ವಿಷಯಾಭಿಲಾಷೆಯಿಂದ ಮುಕ್ತನೂ ಎಂದು ಹೇಳಲಿಕ್ಕಾಗದು. ವಾಸ್ತವಿಕ ಸಂಗತಿ ಏನೆಂದರೆ ದೊಡ್ಡ ಘೋಷಣೆಗಳೊಂದಿಗೆ ಸುಧಾರಣೆಯ ಕೆಲಸವನ್ನು ಕೈಗೆತ್ತಿಕೊಳ್ಳುವ ಪಕ್ಷಗಳು ಬೇಗನೆ ಅಧಿಕಾರದ ದುರಾಶೆಯಿಂದ ಕೂಡಿದವುಗಳಾಗುತ್ತವೆ. ಅವರ ಒಳ್ಳೆಯ ಉದ್ದೇಶಗಳು ದುರಾಶೆಯ ಜ್ವಾಲೆಯಿಂದ ಭಸ್ಮೀಕರಿತವಾಗುತ್ತವೆ. ಅಧಿಕಾರದ ಆಶೆಯನ್ನು ನಿಯಂತ್ರಿಸುವುದು ಎಷ್ಟು ಕಷ್ಟಕರವಾಗಿದೆ ಎಂದು ಸ್ವತಃ ಮೌಲಾನ ಮೌದೂದಿಯವರು ಹೇಳಿರುವುದನ್ನು ನೋಡಿರಿ:

"ಅಧಿಕಾರ ಎಂತಹ ಕೆಟ್ಟ ಸಂಗತಿ ಎಂಬುದನ್ನು ಪ್ರತಿಯೊಬ್ಬನು ಬಲ್ಲನು. ಅದನ್ನು ಗಳಿಸುವ ಯೋಚನೆ ಮಾಡುತ್ತಿರುವಾಗಲೇ ಮನುಷ್ಯನ ಒಳಗೆ ದುರಾಶೆಯ ಬಿರುಗಾಳಿಗಳು ಬೀಸಲು ತೊಡಗುತ್ತವೆ. ಭೂಮಿಯ ನಿಧಿಗಳು ಮತ್ತು ಮನುಷ್ಯರ ಕೊರಳುಗಳು ತನ್ನ ಕೈಗೆ ಬಂದರೆ ಇಷ್ಟ ಪ್ರಕಾರ ನಿರಂಕುಶಾಧಿಕಾರ ಚಲಾಯಿಸಬಹುದೆಂದು ಅವನನ್ನು ಅವನ ಆಶಾಭಿಲಾಷೆಗಳು ಪ್ರೇರೇಪಿಸುತ್ತವೆ." (ಹಖೀಖತೆ ಜಿಹಾದ್ ಪುಟ - 15)

ಈ ರೀತಿ ಅನಿಯಂತ್ರಿತವಾಗಿ ವಾಕ್ಚಾತುರ್ಯ ಪ್ರದರ್ಶಿಸುವುದರಿಂದ ಉಂಟಾಗುವ ಸಮಸ್ಯೆ ಏನೆಂದರೆ ಒಬ್ಬ ಅನುಭವಿ ಪತ್ರಕರ್ತನಾದ ಮೌಲಾನ ಮೌದೂದಿ ಸಹ ತನ್ನ ಬರಹಗಳಲ್ಲಿರುವ ವೈರುದ್ಧ್ಯಗಳನ್ನು ಮರೆತು ಬಿಡುತ್ತಾರೆ. ಅಧಿಕಾರದ ಕುರಿತು ಯೋಚನೆ ಮಾಡುವುದರಿಂದ ಒಬ್ಬನ ಹೃದಯದಲ್ಲಿ ಅಪಾಯಕರವಾದ ಬದಲಾವಣೆ ಉಂಟಾಗಬಹುದಾದರೆ ಮೌಲಾನ ಮೌದೂದಿಯ ಜಮಾಅತೆ ಇಸ್ಲಾಮಿಯ 'ಸಾತ್ವಿಕರಾದ' ಸದಸ್ಯರು ತಮಗೆ ದೊರಕುವ ನಿರಂಕುಶಾಧಿಕಾರದಿಂದ ಭ್ರಷ್ಟರಾಗಲಾರರು ಎಂಬುದಕ್ಕೆ ಇರುವ ಖಾತರಿಯಾದರೂ ಏನು? ಮೌದೂದಿಯ 'ಸಾತ್ವಿಕ' ಸದಸ್ಯರು 'ಸಾರ್ವಜನಿಕ ಸೇವೆ'ಯ ತರಬೇತಿಯನ್ನು ದೇವನು ನಿಶ್ಚಯಿಸಿದ ಇಸ್ಲಾಮಿಕ ಆರಾಧನೆ (ನಮಾಝ್, ಉಪವಾಸ, ಝಕಾತ್) ಮೂಲಕ ಗಳಿಸಿದ್ದಾರೆಂಬುದು ನಿಸ್ಸಂಶಯವಾಗಿದೆ. ಆದರೆ ಈ ತರಬೇತಿ ಜಮಾಅತೆ ಇಸ್ಲಾಮಿಯ ಸದಸ್ಯರಿಗೆ ಮಾತ್ರ ಸೀಮಿತಗೊಳಿಸಲಾಗಿಲ್ಲ. ಮೌಲಾನ ಮೌದೂದಿಯ ಅಭಿಪ್ರಾಯ ಪ್ರಕಾರ ಅಹ್ಮದೀ ಮುಸ್ಲಿಮರ ಆರಾಧನೆ ಇಸ್ಲಾಮಿಕವಲ್ಲ. ಆದರೆ ಬರೇಲವಿ ಮತ್ತು ದೇವ್‌ಬಂದಿ ಮುಸ್ಲಿಮರ ಕುರಿತು ಅವರು ಏನು ಹೇಳುತ್ತಾರೆ? ಶಿಯಾ ಮುಸ್ಲಿಮರ ಆರಾಧನೆ ಇಸ್ಲಾಮಿಕವಲ್ಲವೇ? ಅಹ್ಲೆ ಖುರ್‌ಆನ್ ಮುಸ್ಲಿಮರ ಆರಾಧನೆ ಅನಿಸ್ಲಾಮಿಕವೆಂದು ಯಾರಾದರೂ ಹೇಳಬಲ್ಲರೇ? ಇವರೆಲ್ಲರ ಆರಾಧನೆಯ ಕ್ರಮಗಳು ಇಸ್ಲಾಮಿಕವಾಗಿದ್ದರೆ ಈ ಮುಸ್ಲಿಮ್ ಪಂಗಡಗಳು "ತಪ್ಪು ತತ್ವಗಳ ಸರಕಾರಗಳ ವಿರುದ್ಧ" ಏಕೆ ಎದ್ದೇಳಬಾರದು? "ತಪ್ಪು ಕೆಲಸಗಳನ್ನು ಮಾಡುತ್ತಿರುವ ಜನರಿಂದ ಅಧಿಕಾರವನ್ನು ಕಿತ್ತುಕೊಂಡು ಸರಿಯಾದ ಸಿದ್ಧಾಂತಗಳ ಮತ್ತು ಕಾರ್ಯವಿಧಾನಗಳ ಸರಕಾರವನ್ನು" ಏಕೆ ಸ್ಥಾಪಿಸಬಾರದು?

"ತಪ್ಪು ಕೆಲಸ" ಮತ್ತು "ಸರಿಯಾದ ಸಿದ್ಧಾಂತ ಮತ್ತು ಕಾರ್ಯವಿಧಾನಗಳು" ಅವುಗಳು ಯಾರಿಗೆ ಸಂಬಂಧಿಸಿವೆಯೋ ಆ ಪ್ರಕಾರ ಅರ್ಥ ವ್ಯತ್ಯಾಸ ಹೊಂದುತ್ತವೆ. ಜಮಾಅತೆ ಇಸ್ಲಾಮಿ ದೃಷ್ಟಿಯಲ್ಲಿ "ತಪ್ಪು' ಆಗಿರುವುದು ದೇವ್‌ಬಂದಿಗಳ ದೃಷ್ಟಿಯಲ್ಲಿ ತಪ್ಪಾಗಿರಲಾರದು. ದೇವ್‌ಬಂದಿಗಳ ದೃಷ್ಟಿಯಲ್ಲಿ ಸರಿಯಾದ ಸಿದ್ಧಾಂತ ಮತ್ತು ಕಾರ್ಯವಿಧಾನವು ಬರೇಲವಿಗಳ ದೃಷ್ಟಿಯಲ್ಲಿ ಸರಿಯಾಗಿರಲಾರದು. ಆ ಮೇಲೆ ಅಮುಸ್ಲಿಮರ ಸಂಗತಿ ಏನು? ಅವರಿಗೆ ಸಹ ಸರಿ ಮತ್ತು ತಪ್ಪುಗಳ ಕುರಿತು ಅವರದೇ ಅಭಿಪ್ರಾಯಗಳಿವೆ. ಅವರ ಅಭಿಪ್ರಾಯಗಳು ಮುಸ್ಲಿಮರ ಅಭಿಪ್ರಾಯಗಳಿಗೆ ವಿರುದ್ಧವಾಗಿಲ್ಲವಾದರೆ ಅವರು ಇಸ್ಲಾಮ್ ಧರ್ಮವನ್ನು ಸೇರಲು ಸರತಿಯ ಸಾಲಿನಲ್ಲಿ ನಿಲ್ಲುತ್ತಿದ್ದರು. ಸ್ಥಾಪಿತ ಸರಕಾರವನ್ನು ಬುಡಮೇಲು ಮಾಡುವ ಹಕ್ಕು ಅವರಿಗೂ ಇರಬೇಕಲ್ಲವೇ?

ಒಳ್ಳೆಯ ಉದ್ದೇಶಗಳು ಮತ್ತು ಸುಧಾರಣೆಯ ಯೋಜನೆಗಳು ಸರಕಾರಗಳನ್ನು ಬುಡಮೇಲು ಮಾಡಲು ಯೋಗ್ಯ ನೆಪಗಳಾಗಲಾರವು.

ಯಾರು ಸಾತ್ವಿಕ ಎಂಬುದರ ಕುರಿತು ವಿವಿಧ ರಾಜಕೀಯ ಪಕ್ಷಗಳ ಮಧ್ಯೆ ಅಭಿಪ್ರಾಯ ವ್ಯತ್ಯಾಸಗಳಿವೆ. ಆ ಎಲ್ಲಾ ಅಭಿಪ್ರಾಯ ವ್ಯತ್ಯಾಸಗಳನ್ನು ಅಂಗೀಕರಿಸಿದರೆ ಯಾರನ್ನೂ ಸಾತ್ವಿಕನೆಂದು ಕರೆಯಲು ಸಾಧ್ಯವಾಗಲಾರದು. ಉದಾಹರಣೆಗಾಗಿ, ಮೌಲಾನ ಮೌದೂದಿ ಪ್ರಕಾರ ಅಹ್ಮದಿಯರಿಗೆ ಇಸ್ಲಾಮಿನೊಂದಿಗೆ ಯಾವ ಸಂಬಂಧವೂ ಇಲ್ಲ. ಬ್ರಿಟಿಷರು ಈ ಸಂಘಟನೆಯನ್ನು ಸ್ಥಾಪಿಸಿದುದು ಮುಸ್ಲಿಮ್ ಸಮುದಾಯವನ್ನು ಬಿಗಡಾಯಿಸಲು ಮತ್ತು ಜಿಹಾದ್ ಕುರಿತು ಅವರಲ್ಲಿ ಅನಾಸಕ್ತಿ ಮೂಡಿಸಲು ಹಾಗೂ ಮುಸ್ಲಿಮರ ಶಕ್ತಿಯನ್ನು ನಾಶಮಾಡಲಿಕ್ಕಾಗಿದೆ. ಮುಸ್ಲಿಮ್ ಸಮುದಾಯವನ್ನು ನಾಶಮಾಡಲು ಬೆಳೆಸಲಾದ ಸಂಘಟನೆ ಇದೆಂದು ಆರೋಪಿಸಲಾಗುತ್ತಿದೆ.

ಆದರೆ ಅಹ್ಮದೀ ಮುಸ್ಲಿಮರ ಪ್ರತಿಚ್ಛಾಯೆ ಜಮಾಅತೆ ಇಸ್ಲಾಮಿಯ ವಿಶ್ವಾಸಕ್ಕೆ ವಿರುದ್ಧವಾಗಿದೆ. ಇಸ್ಲಾಮ್ ಧರ್ಮದ ಶ್ರೇಷ್ಠತೆಯನ್ನು ಸ್ಥಾಪಿಸಲು, ಮುಸ್ಲಿಮರನ್ನು ಪುನರುದ್ಧಾರ ಮಾಡಲು, ಬ್ರಿಟಿಷರಿಂದಲ್ಲ ಸ್ವತಃ ಅಲ್ಲಾಹನಿಂದ ಸ್ಥಾಪಿತವಾದ ಸಂಘಟನೆ ಇದಾಗಿದೆ. ಪ್ರವಾದಿ ಮುಹಮ್ಮದ್‌ರವರಿಗೆ(ಸ) ನೀಡಲಾದ ವಾಗ್ದಾನವನ್ನು ಈಡೇರಿಸಲು ಅಲ್ಲಾಹನೇ ಈ ಸಂಘಟನೆಯ ಬೀಜವನ್ನು ಬಿತ್ತಿದನು. ಅಲ್ಲಾಹನು ಮಾಡಿದ ವಾಗ್ದಾನವೇನೆಂದರೆ, ಮುಸ್ಲಿಮ್ ಸಮುದಾಯದ ಸುಧಾರಣೆಗೆ ಒಬ್ಬ ಮಹ್‌ದಿಯನ್ನು ಕಳುಹಿಸಲಾಗುವುದು. ಅಖಂಡನೀಯವಾದ ವಾದಗಳ ಮೂಲಕ ಶಿಲುಬೆಯನ್ನು (ಎಂದರೆ ಶಿಲುಬೆಗೆ ಸಂಬಂಧಿಸಿದ ವಿಶ್ವಾಸವನ್ನು) ಅಳಿಸಲು ಒಬ್ಬ ಮಸೀಹರನ್ನಾಗಿಯೂ ಅವರನ್ನು ಕಳುಹಿಸಲಾಗುವುದು. ಆ ಮಹ್‌ದೀ ಮತ್ತು ಮಸೀಹ್ ಈ ಸಂಘಟನೆಯನ್ನು ಸ್ಥಾಪಿಸಿದರು. ಈ ಸಂಘಟನೆಗೆ ಸೇರಿದ ಜನರು ಲೋಕದ ಜನತೆಗಾಗಿ ನಿಸ್ವಾರ್ಥ ಸೇವೆ ಮಾಡುತ್ತಿದ್ದಾನೆ. ಜನರು ತಮ್ಮ ಸುಧಾರಣೆ ಮಾಡಿಕೊಳ್ಳಬೇಕೆಂದು ವಿನಯದಿಂದ ಈ ಸಂಘಟನೆಗೆ ಸೇರಿದವರು ಉಪದೇಶಿಸುತ್ತಾ ಇರುತ್ತಾರೆ ಮತ್ತು ಕ್ರೈಸ್ತ ಧರ್ಮವನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ಎದುರಿಸಿ ಸೋಲಿಸುತ್ತಿದ್ದಾರೆ. ಹೀಗಿರುವಾಗ ಅಹ್ಮದಿಯಾ ಜಮಾಅತನ್ನು ಸ್ವತಃ ಕ್ರೈಸ್ತರಾದ ಬ್ರಿಟಿಷರು ಸ್ಥಾಪಿಸಿದರೆಂದು ಹೇಗೆ ತಾನೆ ನಂಬಲು ಸಾಧ್ಯ? ತ್ರಿದೇವ (ತ್ರಿತ್ವ) ಸಿದ್ಧಾಂತವನ್ನು ಖಂಡಿಸಿ ಏಕದೇವ ಸಿದ್ಧಾಂತದ ಮರವನ್ನು ಸ್ಥಾಪಿಸಲು ಸದಾ ಕಾರ್ಯಪ್ರವೃತ್ತವಾಗಿರುವ ಒಂದು ಸಂಘಟನೆಯನ್ನು ಬ್ರಿಟಿಷರು ಬೆಂಬಲಿಸುವರೆಂದು ಪ್ರತೀಕ್ಷಿಸುವುದು ಹೇಗೆ? ಅಹ್ಮದಿಯರು ಹೋದಲ್ಲೆಲ್ಲಾ ತ್ರಿದೇವ ವಿಶ್ವಾಸದ ಕಳೆಯು ಬಾಡುತ್ತಾ ಹೋಗುತ್ತದೆ; ಸದಾ ಸುಂದರವಾಗಿ ಕಂಗೊಳಿಸುವ ಏಕದೇವ ವಿಶ್ವಾಸದ ಮರವು ಸುವಾಸನೆಯ ಹೂವುಗಳೊಂದಿಗೂ ಸಿಹಿ ಹಣ್ಣುಗಳೊಂದಿಗೂ ಸೊಂಪಾಗಿ ಬೆಳೆಯುತ್ತಾ ಇದೆ. ಬ್ರಿಟಿಷರು ಬಿತ್ತಿದ ಬೀಜದಿಂದ ಇಂತಹ ಹಣ್ಣುಗಳು ಸಿಗುವುದಾದರೆ ಅವರು ಇನ್ನೂ ಕೆಲವು ಬೀಜಗಳನ್ನು ಬಿತ್ತುತ್ತಿದ್ದರೆ ಚೆನ್ನಾಗಿತ್ತು ಎಂದು ಆಶಿಸುತ್ತೇವೆ. ಆ ಮೂಲಕ ಇಸ್ಲಾಮಿನ ಪುನರುತ್ಥಾನ ಮತ್ತು ಕ್ರೈಸ್ತ ಧರ್ಮ ವಿಶ್ವಾಸಗಳ ಅಳಿವಿನ ವೇಗವು ಹೆಚ್ಚಾಗುತ್ತಿತ್ತು.

ಅಹ್ಮದೀ ಮುಸ್ಲಿಮರು ತಮ್ಮ ಬಗ್ಗೆ ಹೊಂದಿರುವ ವಿಶ್ವಾಸವು ಅವರ ಬಗ್ಗೆ ಮೌಲಾನ ಮೌದೂದಿ ಹೊಂದಿರುವ ವಿಶ್ವಾಸಕ್ಕೆ ತೀರಾ ವಿರುದ್ಧವಾಗಿದೆ. ಅಹ್ಮದೀ ಮುಸ್ಲಿಮರು ತಮ್ಮ ಜಮಾಅತಿನ ಸ್ಥಾಪಕರ ಕುರಿತು, ಅವರು ಹಝ್ರತ್ ಮುಹಮ್ಮದ್‌ರವರನ್ನು(ಸ) ಬಹಳ ಗಾಢವಾಗಿ ಪ್ರೀತಿಸುತ್ತಿದ್ದರೆಂದು ನಂಬುತ್ತಾರೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಬರೆದ ಈ ಕೆಳಗಿನ ಫಾರ್ಸೀ ಭಾಷೆಯ ಪದ್ಯ ಇದನ್ನು ಸ್ಪಷ್ಟಗೊಳಿಸುತ್ತದೆ. ಅವರು ಹೀಗೆ ಬರೆದರು :

> **ಬಅದ್ ಅಝ್ ಖುದಾ ಬ್‌ಇಶ್‌ಖೆ ಮುಹಮ್ಮದ್ ಮುಖಮ್ಮರಮ್**
> **ಗರ್ ಕುಫ್ರ್ ಏಂ ಬವದ್ ಬಖುದಾ ಸಖ್ತ್ ಕಾಫಿರಮ್.**
>
> ಅರ್ಥ : ದೇವನ ನಂತರ ನಾನು ಮುಹಮ್ಮದ್‌ರವರನ್ನು(ಸ) ಪ್ರೀತಿಸುವುದರಲ್ಲಿ ಮತ್ತನಾಗಿದ್ದೇನೆ.
>
> ಇದು ಕುಫ್ರ್ (ಅವಿಶ್ವಾಸ) ಆಗಿದ್ದರೆ ದೇವರಾಣೆ, ನಾನು ಬಲು ದೊಡ್ಡ ಕಾಫಿರ್ (ಅವಿಶ್ವಾಸಿ) ಆಗಿದ್ದೇನೆ. (ದುರ್ರೆ ಸಮೀನ್)

ಪ್ರವಾದಿಗಳ ಮುದ್ರೆ ಹಝ್ರತ್ ಮುಹಮ್ಮದ್‌ರವರನ್ನು(ಸ) ಪ್ರೀತಿಸುವುದರ ಮೂಲಕ ತಮ್ಮ ವಿಶ್ವಾಸವು ಆಳವಾಗಿ ಬೇರೂರಿರುತ್ತದೆ ಎಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಆದರೆ ಮೌಲಾನ ಮೌದೂದಿ ದೃಢವಾಗಿ ಹೇಳುವುದು: "ಅವರ ಬೇರುಗಳು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ನೆಲದೊಳಗೆ ಆಳವಾಗಿ ಹೋಗಿದೆ" ಎಂದು. ಈ ಎರಡು ವೀಕ್ಷಣೆಗಳು ಪರಸ್ಪರ ವಿರುದ್ಧವಾಗಿವೆ.

ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ಪರಿಶೀಲಿಸೋಣ. ಇಸ್ಲಾಮಿಕ ಆರಾಧನೆಯ ದೀರ್ಘವಾದ ಶಿಸ್ತಿನ ಮೂಲಕ ತರಬೇತಿಗೊಳಿಸಲಾದ ಸಾತ್ವಿಕರ ಸಂಘವನ್ನು ರಚಿಸಲು ಜಮಾಅತೆ ಇಸ್ಲಾಮಿಯನ್ನು ಸ್ಥಾಪಿಸಲಾಗಿದೆ ಎಂದು ಮೌಲಾನ ಮೌದೂದಿ ಹೇಳುತ್ತಾರೆ. ಈ ಜನರು ಹೇಗೆ ಸಿದ್ಧರಾಗಬೇಕೆಂದರೆ, ಇಸ್ಲಾಮ್ ಅವರೊಂದಿಗೆ ಹೀಗೆ ಹೇಳುವಂತಾಗಬೇಕು: "ನೀವು ಭೂಮಿಯಲ್ಲಿರುವ ಅತ್ಯಂತ ಸಾತ್ವಿಕರಾದ ಜನರಾಗಿರುವಿರಿ. ಮುಸ್ಲಿಮ್ ಸೈನಿಕರೇ, ಮುಂದೆ ಸಾಗಿರಿ. ದೇವನಿಗೆ ವಿದ್ರೋಹಿಗಳಾದವರ ವಿರುದ್ಧ ಹೋರಾಡಿರಿ. ಅವರಿಂದ ಅಧಿಕಾರವನ್ನು ಸ್ವಾಧೀನಪಡಿಸಿಕೊಂಡು ನೀವು ಸರಕಾರವನ್ನು ನಡೆಸಿರಿ" ಮೌಲಾನ ಮೌದೂದಿಯ ಪ್ರಯತ್ನಗಳಿಗೆ ಅಭಿನಂದನೆಗಳು. ಸಾತ್ವಿಕರ ಆ ಗುಂಪು ಈಗ ಸಿದ್ಧವಾಗಿದೆ ಮತ್ತು ಈ ಕಾಲದ ಸರಕಾರವನ್ನು ಕಿತ್ತೆಸೆಯಲು ಬೇಕಾದ

ಶಕ್ತಿಯನ್ನು ಗಳಿಸಲು ಕಾಯುತ್ತಾ ಇದೆ.

ಈ ಸಾತ್ವಿಕರ ಸಂಘವನ್ನು ಮಾನವರ ಸುಧಾರಣೆಗಾಗಿ ಮತ್ತು ಇಸ್ಲಾಮಿನ ಧ್ವಜವನ್ನು ಜಗತ್ತಿನಲ್ಲಿ ಹಾರಿಸಲು ಸ್ಥಾಪಿಸಲಾಗಿದೆ ಎಂದು ಮೌಲಾನ ಮೌದೂದಿ ನಿಜವಾಗಿಯೂ ನಂಬುತ್ತಾರೆ. ದೇವೇತರವಾದ ಎಲ್ಲವನ್ನೂ ನಿರ್ನಾಮ ಮಾಡಿ ಪ್ರತಿಯೊಬ್ಬರ ಹೃದಯದಲ್ಲಿ ಖಡ್ಗದಿಂದ ಅವರು ಅಲ್ಲಾಹನ ನಾಮವನ್ನು ಕೊರೆಯುವರಂತೆ.

ಆದರೆ ಜಮಾಅತೆ ಇಸ್ಲಾಮಿಯ ಸದಸ್ಯರು ಅತ್ಯಂತ ಸಾತ್ವಿಕರಾದ ದೇವದಾಸರೆಂಬ ವಾದವು ನಿರಾಧಾರವಾದುದೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ತಾನು ಮತ್ತು ತನ್ನ ಅನುಯಾಯಿಗಳು ಸರಿಯಾದವರೆಂದು ಭಾವಿಸುವ ಹಕ್ಕು ಪ್ರತಿಯೊಬ್ಬನಿಗಿದೆ. ಆದರೆ ನಿಜವಾಗಿಯೂ ತಾವು ಸಾತ್ವಿಕರಾಗಿದ್ದೇವೆ ಎಂದು ದೃಢವಾಗಿ ಹೇಳಲು ಸಾಧ್ಯವಿಲ್ಲ. ಮನುಷ್ಯನು ಆತ್ಮವಂಚನೆ, ಭ್ರಮೆ ಮತ್ತು ಕಾಪಟ್ಯದ ಚಕ್ರವ್ಯೂಹದಲ್ಲಿ ಬಂಧಿತನಾಗಿದ್ದಾನೆ. ಆದುದರಿಂದ ತನ್ನ ಕುರಿತು ನಿಖರವಾಗಿ ವರ್ಣಿಸಲು ಅಸಮರ್ಥನಾಗಿದ್ದಾನೆ. ಹೃದಯಗಳ ರಹಸ್ಯ, ಮನಸ್ಸಿನ ಕಾಮನೆಗಳು, ರಹಸ್ಯ ಆಶೆಗಳು ದೇವನ ಹೊರತು ಬೇರೆ ಯಾರಿಗೆ ತಿಳಿದಿದೆ? ಯಾರು ಸಾತ್ವಿಕನಾಗಿದ್ದಾನೆ ಮತ್ತು ಯಾರು ದುರಾಚಾರಿಯಾಗಿದ್ದಾನೆ ಎಂಬುದು ದೇವನಿಗೆ ಮಾತ್ರ ತಿಳಿದಿದೆ. ಕೆಲವು ಜನರು ಇದಕ್ಕೆ ಅಪವಾದವಾಗಿದ್ದಾರೆ. ಕೆಲವು ಜನರು ತಾವು ಸಾತ್ವಿಕರು ಎಂಬುದಕ್ಕೆ ಸಂದೇಹರಹಿತವಾಗಿ ಮನಗಾಣಿಸುವಂತಹ ಚಿಹ್ನೆಗಳನ್ನು ಪ್ರಕಟಿಸುತ್ತಾರೆ. ಅವರ ಸ್ವಭಾವದಿಂದ ದೇವನು ಅವರನ್ನು ಪ್ರೀತಿಸುವುದು ಸ್ಪಷ್ಟವಾಗುತ್ತದೆ. ಹಿಂದಿನ ಕಾಲದ ಸಾತ್ವಿಕರೊಂದಿಗೆ ಮಾತನಾಡಿದ ಹಾಗೆ ದೇವನು ಅವರೊಂದಿಗೆ ಮಾತನಾಡುತ್ತಾನೆ. ಮುಸ್ಲಿಮ್ ಸಮುದಾಯದ ಹಿಂದಿನ ಸಂತರ ಮೇಲೆ ದೇವನ ಬೆಳಕು ಪ್ರಕಾಶಿಸಿದ ಹಾಗೆ ಅವರ ಮೇಲೆಯೂ ಪ್ರಕಾಶಿಸುತ್ತದೆ. ಅವರಿಗೆ ದೇವನ ಸಹಾಯವು ವಚನಗಳ ಮೂಲಕ ಮತ್ತು ಕೃತ್ಯಗಳ ಮೂಲಕ ಬಹಿರಂಗವಾಗುತ್ತದೆ.

ಆದುದರಿಂದ ಜಮಾಅತೆ ಇಸ್ಲಾಮಿಯು ಇಸ್ಲಾಮಿನ ಪತಾಕೆಯನ್ನು ಹಾರಿಸಲು ಸ್ಥಾಪಿಸಲ್ಪಟ್ಟಿದೆ ಎಂಬ ಮೌಲಾನ ಮೌದೂದಿಯ ವಾದವನ್ನು ಅಹ್ಮದೀ ಮುಸ್ಲಿಮರು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ಮೌಲಾನ ಮೌದೂದಿಯ ನಂಬಿಕೆಗಳನ್ನು ಹೊಂದಿರುವ ಜಮಾಅತೆ ಇಸ್ಲಾಮಿ ಲೋಕದ ಜನರ ದೃಷ್ಟಿಯಲ್ಲಿ ಇಸ್ಲಾಮಿನ ಬಗ್ಗೆ ನೀಚ ಭಾವನೆ ಸೃಷ್ಟಿಸುವಂತಹದ್ದೂ ಪರಿಶುದ್ಧವಾದ ಈ ಧರ್ಮವನ್ನು ದ್ವೇಷಿಸುವಂತೆ ಮಾಡುವಂತಹದ್ದೂ ಆಗಿದೆ.

ಮೌಲಾನ ಮೌದೂದಿಯ ಅನುಯಾಯಿಗಳು ಪಾಕಿಸ್ಥಾನ ಮತ್ತು ಸೌದಿ ಅರೇಬಿಯಾದ ಹಾಗಿರುವ ಮುಸ್ಲಿಮ್ ದೇಶಗಳಲ್ಲಿ ಸುರಕ್ಷಿತವಾಗಿದ್ದುಕೊಂಡು ತಮಗಿಷ್ಟವಿರುವ ಹಾಗೆ ವಾದಿಸಬಹುದು. ಆದರೆ "ಬಲಾತ್ಕಾರದಿಂದ ಇಸ್ಲಾಮಿಗೆ ಸೇರಿಸುವ" ಅವರ ನಂಬುಗೆಯನ್ನು ಬೇರೆ ಕಡೆಗೆ ಒಯ್ದು ಅವರಿಗೆ ಎಂತಹ ಸ್ವಾಗತ ಲಭಿಸುತ್ತದೆ ಎಂಬುದನ್ನು ನೋಡಲಿ. ಪ್ರವಾದಿ ಈಸಾ[ಅ] ಈಗಲೂ ಆಕಾಶದಲ್ಲಿ ಜೀವಿಸಿರುವರೆಂಬ ಕ್ರೈಸ್ತ ವಿಶ್ವಾಸವನ್ನು ಹೊಂದಿರುವ ಜಮಾಅತೆ ಇಸ್ಲಾಮೀಯರಿಗೆ ಕ್ರೈಸ್ತರನ್ನು ಇಸ್ಲಾಮ್ ಧರ್ಮಕ್ಕೆ ಮತಪರಿವರ್ತನೆ ಮಾಡಲು ಸಾಧ್ಯವೇ? ಅವರಿಗೆ ಶಿಲುಬೆಯನ್ನು ಮುರಿಯಲು ಸಾಧ್ಯವೇ? ಈ ಮೌದೂದಿ ಸಿದ್ಧಾಂತಗಳನ್ನು ಹೊಂದಿರುವ ಯಾರಾದರೂ ಇಸ್ಲಾಮಿನ ಪತಾಕೆಯನ್ನು ಹಾರಿಸಲು ಸಾಧ್ಯವೇ?

ಮೌಲಾನ ಮೌದೂದಿಯ ಉಪದೇಶಗಳು ಇಸ್ಲಾಮ್ ಧರ್ಮದ ಹೆಸರನ್ನು ಕೆಡಿಸುವಂತಹದ್ದೂ ಅದನ್ನು ಅಪಹಾಸ್ಯಕ್ಕೆ ಗುರಿ ಮಾಡುವಂತಹದ್ದೂ ಆಗಿದೆ ಎಂಬುದರ ಕುರಿತು ಅಹ್ಮದಿಯರಿಗೆ ಯಾವ ಸಂಶಯವೂ ಇಲ್ಲ. ಜಮಾಅತೆ ಇಸ್ಲಾಮಿಯು ಇಸ್ಲಾಮ್ ಧರ್ಮದ ಸ್ನೇಹಿತನಲ್ಲ. ಅದು ಕಮ್ಯೂನಿಸಂ ತತ್ವಗಳ ಇನ್ನೊಂದು ರೂಪವಾಗಿದೆ. ಆಧ್ಯಾತ್ಮಿಕ ಮೌಲ್ಯಗಳಿಂದ ವಿರಹಿತವಾಗಿ, ಅಧಿಕಾರದ ಹಸಿವೆಯಿಂದ ಕಾರ್ಯೋನ್ಮುಖವಾಗಿರುವ ಜಮಾಅತೆ ಇಸ್ಲಾಮಿಯ ಸ್ಫೂರ್ತಿಯ ಕೇಂದ್ರ ಮೋಸ್ಕೋ ಆಗಿದೆ; ಮಕ್ಕವಲ್ಲ.

ಸಂಕ್ಷಿಪ್ತದಲ್ಲಿ, ಮೌಲಾನ ಮೌದೂದಿ ಅಹ್ಮದಿಯಾ ಜಮಾಅತನ್ನು ಖಂಡಿಸುವ ಹಾಗೆಯೇ ಅಹ್ಮದಿಯರು ಜಮಾಅತೆ ಇಸ್ಲಾಮಿಯನ್ನು ಖಂಡಿಸುತ್ತಾರೆ. ಈ ಪರಸ್ಪರ ವಿರುದ್ಧ ಅಭಿಪ್ರಾಯಗಳನ್ನು ಬೇರೆ ಪರಸ್ಪರ ವಿರುದ್ಧವಾಗಿರುವ ಪಂಗಡಗಳು ಸಹ ಹೊಂದಿವೆ. ಮುಸ್ಲಿಮ್ ಸಮುದಾಯದ ಪ್ರತಿಯೊಂದು ಪಂಗಡದ, ತನ್ನದು ಸಾತ್ವಿಕರ ಪಂಗಡ ಎಂಬ ವಾದವನ್ನು ಅದರ ವಿರೋಧಿ ಪಂಗಡ ಹರಿದು ಹಾಕುತ್ತಾ ಇದೆ. ಹೀಗಿರುವಾಗ ಜನರನ್ನು ಸುಧಾರಣೆ ಮಾಡಲು ಎದ್ದು ನಿಂತು ದೇವ ಭಯವಿಲ್ಲದ ಜನರಿಂದ ಕಾನೂನು ಮಾಡುವ ಮತ್ತು ಅದನ್ನು ಜಾರಿಮಾಡುವ ಅಧಿಕಾರವನ್ನು ಕಿತ್ತು ಕೊಳ್ಳುವ ಅರ್ಹತೆ ಪಡೆದವರು ಯಾರು?

ಅಧಿಕಾರಕ್ಕಾಗಿರುವ ಹಂಬಲವು ಮೌದೂದಿಯ ಸುಧಾರಣೆಯ ಸಂಕಲ್ಪದ ಕೇಂದ್ರ ಅಂಶವಾಗಿದೆ. ಮೌದೂದಿಯವರು ಹಝ್ರತ್ ಪ್ರವಾದಿಯವರ[ಸ] ಜೀವಿತವನ್ನು ರಾಜಕೀಯ ಸಂಜ್ಞೆಗಳಲ್ಲಿ ನೋಡುತ್ತಾರೆ. ಇಸ್ಲಾಮ್ ಧರ್ಮದ ಆರಾಧನೆಯ ಕ್ರಮವನ್ನು ಸೈನಿಕರ ಭಾಷೆಯಲ್ಲಿ ವಿವರಿಸುತ್ತಾರೆ. ಪವಿತ್ರ ಖುರ್‌ಆನಿಗೆ ರಾಜಕೀಯ ಅಧಿಕಾರದ ವ್ಯಾಖ್ಯಾನ ನೀಡುತ್ತಾರೆ. ಜನರಿಗೆ ಸಹನೆಯಿಂದಲೂ ವಿನೀತ ಭಾವನೆಯಿಂದಲೂ ಉಪದೇಶಿಸಿ ಅವರನ್ನು ಸುಧಾರಣೆ ಮಾಡುವ ಶಕ್ತಿ ತನಗಿಲ್ಲವೆಂದು ಮೌಲಾನ ಮೌದೂದಿಗೆ ತಿಳಿದಿದೆ. ಆದುದರಿಂದ ಹಿಂಸಾಚಾರ ಮತ್ತು ಅವ್ಯವಸ್ಥೆಯ ಧೋರಣೆಯನ್ನು ಪ್ರತಿಪಾದಿಸುತ್ತಾರೆ. ಮೌಲಾನ ಮೌದೂದಿಯ ಬಗ್ಗೆ ಉದಾರವಾದ ವ್ಯಾಖ್ಯಾನ ನೀಡುವುದಾದರೆ ಹೀಗೆ ಹೇಳಬಹುದು: ಅವರ ಉದ್ದೇಶವು ಒಳ್ಳೆಯದಾಗಿತ್ತು. ಆದರೆ ನರಕಕ್ಕೆ ಸಾಗುವ ಮಾರ್ಗವನ್ನು ಒಳ್ಳೆಯ ಉದ್ದೇಶಗಳ ಕಲ್ಲುಗಳನ್ನು ಹಾಸಿ ನಿರ್ಮಿಸಲಾಗಿದೆ. ಈ ಬಗ್ಗೆ ಪವಿತ್ರ ಖುರ್‌ಆನ್ ನೀಡಿರುವ ತೀರ್ಪು ಸ್ಪಷ್ಟವಾಗಿದೆ. ಅದು ಹೀಗೆ ಹೇಳುತ್ತದೆ:

**"'ಭೂಮಿಯಲ್ಲಿ ಕಲಹವನ್ನುಂಟು ಮಾಡಬೇಡಿರಿ' ಎಂದು ಅವರೊಡನೆ ಹೇಳುವಾಗ, 'ನಾವು ಶಾಂತಿಗಾಗಿ ಶ್ರಮಿಸುವವರು' ಎಂದು ಅವರು ಮರು ನುಡಿಯುತ್ತಾರೆ. ಎಚ್ಚರಿಕೆಯಿಂದಿರಿ! ಖಂಡಿತವಾಗಿಯೂ ಅವರೇ ಕಲಹವನ್ನು ಸೃಷ್ಟಿಸುವವರಾಗಿದ್ದಾರೆ. ಆದರೆ ಅವರು ಅದನ್ನು ಗ್ರಹಿಸುವುದಿಲ್ಲ." (2 : 12,13)**

**(ಮುಂದುವರಿಯುವುದು)**

**ಇಂಗ್ಲಿಷ್‌ನಿಂದ ಭಾಷಾಂತರ : A. ಅಬ್ದುಸ್ಸಲಾಮ್**

## Statement about ownership and other particulars about the Newspaper Yugarashmi Quarterly

(From IV See Rule 8)

| | | |
|---|---|---|
| 1. Place of Publication | : | Mangalore |
| 2. Period of its Publication | : | Quarterly |
| 3. Printer's Name | : | Muhammad Yusuf |
| Whether citizen of India? | : | Yes |
| Address | : | 10-23-1008/1, 1st Floor, Ansari Road, Bunder, Mangalore - 575 001 |
| 4. Publisher's Name | : | Muhammad Yusuf |
| Whether citizen of India? | : | Yes |
| Address | : | 10-23-1008/1, 1st Floor, Ansari Road, Bunder, Mangalore - 575 001 |
| 5. Editor's Name | : | Muhammad Yusuf |
| Whether citizen of India? | : | Yes |
| Address | : | 10-23-1008/1, 1st Floor, Ansari Road, Bunder, Mangalore - 575 001 |
| 6. Name and address of individuals who own the newspaper and partners or shareholders holding more than one percent of the capital | : | Jamath Ahmadiyya 10-23-1008/1, 1st Floor, Ansari Road, Bunder, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Sd-

Date : 1 - 05 - 2007

**Muhammad Yusuf**


ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

ಬಿಡಿ ಪ್ರತಿ : ರೂ.5-00 ವಾರ್ಷಿಕ ಚಂದಾ : ರೂ.20-00 ಅಂಚೆ ಮೂಲಕ : ರೂ.30-00

ವ್ಯವಹರಿಸಿರಿ : **The Editor, YUGARASHMI Kannada Quarterly**

**10-23-1008/1, 1st Floor, Ansari Road, Bunder, Mangalore - 575 001**

# ಹಿಂದಿನ ಸಂಚಿಕೆಗಳನ್ನು ತಿರುವಿಹಾಕಿದಾಗ.....



## ಸಂಪಾದಕರಿಗೆ ಪತ್ರ

ಮಾನ್ಯರೆ,

ಇಸ್ಲಾಂನ ಯಥಾರ್ಥ ಪರಿಚಯಕ್ಕಾಗಿ ಇಂಥದೊಂದು ಪತ್ರಿಕೆಯ ಅಗತ್ಯ ಬಹುಕಾಲದಿಂದ ಇತ್ತು. ನೀವು ಆ ಕೊರತೆಯನ್ನು ಹೋಗಲಾಡಿಸಿ ಅಭಿನಂದನೆಗೆ ಪಾತ್ರರಾಗಿದ್ದೀರಿ, ಸಂತೋಷ. ಕಳೆದ ನೂರಾರು ವರ್ಷಗಳಿಂದ ಇಸ್ಲಾಂ ಜನಾಂಗಕ್ಕೆ ಸೇರಿದ ಲಕ್ಷಾಂತರ ಜನ ಕನ್ನಡ ನಾಡಿನ ಮಕ್ಕಳಾಗಿ ಬೆರೆತು ಬಾಳುತ್ತಾ ಬಂದಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ ಅವರ ಆಚಾರ ವಿಚಾರ ಸಂಸ್ಕೃತಿಗಳ ಮುಖವಾಣಿಯಾಗಿ ಕನ್ನಡದಲ್ಲೊಂದು ಪತ್ರಿಕೆ ಇರಬೇಕಾದುದು ಉಚಿತ. ಈ ಔಚಿತ್ಯವನ್ನು ನೀವು ಮನಗಂಡಿದ್ದೀರಿ......

ಪತ್ರಿಕೆಗೆ ನಿರಾಂತಕವಾದ ಮುನ್ನಡೆಯನ್ನು ಹಾರೈಸುತ್ತೇನೆ.

**- ಪ್ರೊ॥ ಹಂಪ ನಾಗರಾಜಯ್ಯ, ಎಂ.ಎ**
ಸಂಪಾದಕರು, ಜೀವನ,
ಬೆಂಗಳೂರು
(ಯುಗರಶ್ಮಿ ಅಕ್ಟೋಬರ್ 1975)

ಮಹನೀಯರೇ,

ಅಹ್ಮದಿಯಾ ಸಂದೇಶವನ್ನು ಕರ್ನಾಟಕದ ಜನತೆಗೆ ನೀಡುವ ಸದುದ್ದೇಶದಿಂದ ನೀವು ಕೈಕೊಂಡ ಈ ಸಾಹಸದ ಕಾರ್ಯಕ್ಕಾಗಿ ನನ್ನ ಅಭಿನಂದನೆಗಳು.

ಕನ್ನಡದಲ್ಲಿ ಈ ತೆರನ ಪತ್ರಿಕೆ ಇದೊಂದೇ. ಅದರ ಶ್ರೇಷ್ಠಮಟ್ಟವನ್ನು ಉಳಿಸಿಕೊಳ್ಳಲು ನಿಮಗೆ ಶ್ರೀ ದೇವರು ಅನುಗ್ರಹಿಸಲೆಂದೂ 'ಯುಗರಶ್ಮಿ' ಚಿರಕಾಲ ಬಾಳಿಬೆಳಗಲೆಂದೂ ಹಾರೈಸುತ್ತೇನೆ.

**- ಕಯ್ಯಾರ ಕಿಞ್ಞಣ್ಣ ರೈ, ಪೆರಡಾಲ**
(ಯುಗರಶ್ಮಿ ಅಕ್ಟೋಬರ್ 1975)

ಪ್ರಿಯರೇ,

ಪತ್ರಿಕೆಯ ಭಾಷೆ, ವಿಷಯ, ಮುದ್ರಣ ಚೆನ್ನಾಗಿದೆ. ಪುಸ್ತಕ ವಿಭಾಗದಲ್ಲಿ ಯೇಸು ಕ್ರಿಸ್ತರ ವಿಚಾರ ಪ್ರಚೋದಕವಾಗಿದೆ. ನಾನು ಯಾವುದೇ ಮತ ವಿಚಾರಗಳಲ್ಲಿ ಪೂರ್ವಗ್ರಹ ಬಿಟ್ಟು ಯಥಾರ್ಥ ವಿಚಾರ ಅರಿಯಲು ಯತ್ನಿಸುತ್ತೇನೆ. ಯುಗರಶ್ಮಿಯಿಂದಾಗಿ ಹಿಂದುಗಳಿಗೆ ಮುಸ್ಲಿಮರಲ್ಲಿದ್ದ ಎಷ್ಟೋ ತಪ್ಪಭಿಪ್ರಾಯಗಳು ಬಗೆ ಹರಿಯುತ್ತವೆ ಎಂಬುದಾಗಿ ನಾನು ನಂಬುತ್ತೇನೆ...... ಇತೀ

ತಮ್ಮನ್ನು ಮೆಚ್ಚುವ
**ಅಮ್ಮೆಂಬಳ ಸುಬ್ಬಣ್ಣ ನಾವಡ, ಚೇಳೂರು**
(ಯುಗರಶ್ಮಿ ಅಕ್ಟೋಬರ್ 1975)

# ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ 2008

## ಹಝ್ರತ್ ಖಲೀಫತುಲ್ ಮಸೀಹ್ V ನಿರ್ದೇಶಿಸಿದ ಪ್ರಾರ್ಥನೆಗಳು ಮತ್ತು ಕರ್ಮಾನುಷ್ಠಾನಗಳು

1. ಪ್ರತಿ ಮಾಸ ಒಂದು ನಫಲ್ ಉಪವಾಸ ಅನುಷ್ಠಿಸಬೇಕು.
2. ಪ್ರತಿ ದಿನ ಎರಡು ರಕ್‌ಅತ್ ನಫಲ್ ನಮಾಝ್ ಮಾಡಬೇಕು.
3. ಪ್ರತಿ ದಿನ ಏಳು ಸಲ ಸೂರಃ ಫಾತಿಹ ಅರ್ಥಗ್ರಹಿಸಿಕೊಂಡು ಓದಬೇಕು:

☆ بِسْمِ اللّٰهِ الرَّحْمٰنِ الرَّحِيْمِ. اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.
اِهْدِ نَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ. غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಅರ್ಥ: ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ನ್ಯಾಯ ತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ. (ಓ ದೇವಾ,) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

4. ☆ اَللّٰهُمَّ صَلِّ عَلٰى مُحَمَّدٍ وَّعَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ.

☆ اَللّٰهُمَّ بَارِكْ عَلٰى مُحَمَّدٍ وَّعَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ.

ಅರ್ಥ: ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು- ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ವಿಶೇಷ ಕರುಣೆ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ಅನುಗ್ರಹವನ್ನು ದಯಪಾಲಿಸು - ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ಅನುಗ್ರಹ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. (ದಿನಂಪ್ರತಿ 33 ಸಲ)

5. ☆ رَبَّنَا لَا تُزِغْ قُلُوْبَنَا بَعْدَ اِذْ هَدَيْتَنَا وَهَبْ لَنَا مِنْ لَّدُنْكَ رَحْمَةً. اِنَّكَ اَنْتَ الْوَهَّابُ.

ಅರ್ಥ: ನಮ್ಮ ಪ್ರಭೂ ನೀನು ನಮಗೆ ಮಾರ್ಗದರ್ಶನ ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿ ದೊಡ್ಡ ಅನುಗ್ರಹದಾತ. (ದಿನಂಪ್ರತಿ 33 ಸಲ)

6. ☆ رَبَّنَا اَفْرِغْ عَلَيْنَا صَبْرًا وَّثَبِّتْ اَقْدَامَنَا وَانْصُرْنَا عَلَى الْقَوْمِ الْكٰفِرِيْنَ.

ಅರ್ಥ: ನಮ್ಮ ಪ್ರಭೂ, ನೀನು ನಮಗೆ ಸ್ಥೈರ್ಯವನ್ನು ಕರುಣಿಸು. ನಮ್ಮ ಪಾದಗಳನ್ನು ಸ್ಥಿರಗೊಳಿಸಿ ಅವಿಶ್ವಾಸಿಗಳಿಗೆ ವಿರುದ್ಧವಾಗಿ ನಮಗೆ ನೆರವು ನೀಡು. (ದಿನಂಪ್ರತಿ 11 ಸಲ)

7. ☆ اَللّٰهُمَّ اِنَّا نَجْعَلُكَ فِيْ نُحُوْرِهِمْ وَ نَعُوْذُبِكَ مِنْ شُرُوْرِهِمْ.

ಅರ್ಥ: ಓ ಅಲ್ಲಾಹ್, ಅವರನ್ನು ಎದುರಿಸಲು ನಾವು ನಿನ್ನನ್ನು ಗುರಾಣಿಯನ್ನಾಗಿ ಮಾಡುತ್ತೇವೆ. ಅವರ ಎಲ್ಲಾ ಉಪದ್ರಗಳಿಂದ ಪಾರಾಗಲು ನಿನ್ನ ಅಭಯ ಯಾಚಿಸುತ್ತೇವೆ. (ದಿನಂಪ್ರತಿ 11 ಸಲ)

8 ☆ اَسْتَغْفِرُ اللّٰهَ رَبِّيْ مِنْ كُلِّ ذَنْبٍ وَّاَتُوْبُ اِلَيْهِ.

ಅರ್ಥ: ನನ್ನ ಪ್ರಭುವಾದ ಅಲ್ಲಾಹನೊಡನೆ ನಾನು ನನ್ನ ಎಲ್ಲ ಪಾಪಗಳಿಗೆ ಕ್ಷಮೆಕೋರುತ್ತೇನೆ ಮತ್ತು ನಾನು ಅವನೆಡೆಗೆ ಬಾಗುತ್ತೇನೆ. (ದಿನಂಪ್ರತಿ 33 ಸಲ)

9. ☆ سُبْحَانَ اللّٰهِ وَبِحَمْدِهٖ سُبْحَانَ اللّٰهِ الْعَظِيْمِ. اَللّٰهُمَّ صَلِّ عَلٰى مُحَمَّدٍ وَّاٰلِ مُحَمَّدٍ.

ಅರ್ಥ: ಅಲ್ಲಾಹನು ಪರಿಶುದ್ಧನು ಮತ್ತು ಅವನಿಗೆ ಸಕಲ ಸ್ತುತಿಸ್ತೋತ್ರಗಳು. ಅಲ್ಲಾಹನು ಪರಿಶುದ್ಧನು ಮತ್ತು ಮಹಾಮಹಿಮನು. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು. (ದಿನಂಪ್ರತಿ 33 ಸಲ)

Registered with the Registrar of Newspapers for India No. R.N. 27354/75
YUGARASHMI Kannada Quarterly, February - 2007

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ

ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ ಇಂಟರ್‌ನೇಶನಲ್

# THE FIRST ISLAMIC SATELLITE CHANNEL

**BROADCASTING ROUNDTHE CLOCK**

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.5° EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-Mail : info@alislam.org Website : http:www.alislam.org/mta

ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ

ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

## ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ :

AHMADIYYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at Karavali Printers, Azizuddin Road, Mangalore on behalf of Jubilee Printing Press, Mangalore.
Typeset at View Graphics, Car street, Mangalore - 575 001